# ಹತ್ತನೆಯ ತರಗತಿ ಕನ್ನಡ

## ಹಕ್ಳು ಹೈಕ್ಳು

## ನಾಕಿ

## ಕಾಲೇಜ ಮಕ್ಳು

# ಜ್ಞಾನ ಬುತ್ತಿ


ಪ್ರಯತ್ನ :



ಆನಂದ್ ಗುರು
ಕನ್ನಡ ಭಾಷಾ ಶಿಕ್ಷಕರು
ಅಂಗೊಂಡಹಳ್ಳಿ,
ಮುಳಬಾಗಿಲು ತಾ॥
ಕೋಲಾರ ಜಿಲ್ಲೆ.

ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

## ಗದ್ಯಪಾಠ–01 ಯುದ್ಧ

1.ರಾಹಿಲನು ಯಾರು?

ರಾಹಿಲನು ಸೈನ್ಯದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದ ಒಬ್ಬ ಡಾಕ್ಟರ್.

2.ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?

ರಾಹಿಲನು ತುರ್ತುಪರಿಸ್ಥಿತಿಯಲ್ಲಿ ಔಷಂಧಂ ಮತ್ತು ಶಸ್ತ್ರಚಿಕಿತ್ಸಾ ಸಾಮಾನುಗಳ ಪೆಟ್ಟಿಗೆ ಹಿಡಿದುಕೊಂಡಿದ್ದನು.

3.ಗಡಿ ಪ್ರದೇಶದಲ್ಲಿ ಬ್ಲಾಕ್‌ಔಟ್ ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?

ಗಡಿ ಪ್ರದೇಶದಲ್ಲಿ ಬ್ಲಾಕ್‌ಔಟ್ ನಿಯಮವನ್ನು ರಾತ್ರಿ ವೇಳೆ ಶತ್ರು ಸೈನಿಕರು ವೈಮಾನಿಕ ದಾಳಿ ಮಾಡಲುಅವಕಾಶವಾಗದಂತೆ ರಕ್ಷಿಸಿಕೊಳ್ಳಲು ಪಾಲಿಸಲಾಗುತ್ತದೆ.

4.ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?

ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು ಎಂದರೆ ನಾನು ಯುದ್ಧಮಾಡುವಮೂರ್ಖರ ಕಡೆಯವನಲ್ಲ,

ಸಂಕಷ್ಟಕ್ಕೀಡಾದಮನುಷ್ಯರಕಡೆಯವನುಕಡೆಯುವನು.

5.ಯುದ್ಧದ ಬಗೆಗೆ ಮುದುಕಿಯ ಅಭಿಪ್ರಾಯವೇನು?

ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯಮಾಡುವುದೇ ಯುದ್ದ ಎಂಬುದು ಮುದುಕಿಯ ಅಭಿಪ್ರಾಯವಾಗಿದೆ.

## ಗದ್ಯಪಾಠ 2. ಶಬರಿ

1.ಶ್ರೀರಾಮನ ತಂದೆಯ ಹೆಸರೇನು?

ಶ್ರೀರಾಮನ ತಂದೆಯ ಹೆಸರು ದಶರಥ.

2.ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?

ಶ್ರೀರಾಮನಿಗೆ ಸಮರ್ಪಿಸಲು ಶಬರಿ ಪರಿಮಳದ ಹೂ, ಮಧುಪರ್ಕ, ರುಚಿಕರ ಹಣ್ಣು ಹಂಪಲುಗಳನ್ನುಸಂಗ್ರಹಿಸಿದ್ದಳು.

3.ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?

ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.

4.ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?

ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಧನು (ಕಬಂಧ) ಎಂಬ ರಾಕ್ಷಸ

5.ಶಬರಿ ಗೀತನಾಟಕದ ಕರ್ತೃ ಯಾರು?

ಶಬರಿ ಗೀತನಾಟಕದ ಕರ್ತೃ ಪು.ತಿ.ನರಸಿಂಹಾಚಾರ್ಯ.

## ಗದ್ಯಪಾಠ–3.ಲಂಡನ್ ನಗರ

1. ಲಂಡನ್ನಿನ ರಸ್ತೆಗಳಲ್ಲಿ ನಿಲ್ಲುವುದನ್ನು ತಪ್ಪಿಸಲು ಮಾಡಿರುವ ವ್ಯವಸ್ಥೆಯೇನು?

ಲಂಡನ್ನಿನ ರಸ್ತೆಗಳಲ್ಲಿ ನಿಲ್ಲುವುದನ್ನು ತಪ್ಪಿಸಲು ಭೂಗರ್ಭದಲ್ಲಿ ಗಾಡಿಗಳನ್ನು ಹಾಕಿದ್ದಾರೆ.

2. ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು?

ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರು ಟ್ರಾಫಲ್ಗಾರ್ ಸ್ಕ್ವೇರ್ **(Trafalgar Square).**

3. 'ವೆಸ್ಟ್ ಮಿನ್‌ಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?

'ವೆಸ್ಟ್ ಮಿನ್‌ಸ್ಟರ್ ಅಬೆ' ಮರಣಹೊಂದಿರುವ ಸಾರ್ವಭೌಮರ, ಕವಿಪುಂಗವರ ಸ್ಮಾರಕವಾಗಿದೆ.

4. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?

ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ'ಚೇರಿಂಗ್ ಕ್ರಾಸ್'

## ಗದ್ಯಪಾಠ–4.ಭಾಗ್ಯಶಿಲ್ಪಿಗಳು

1.ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?

ನಾಲ್ವಡಿ ಕೃಷ್ಣರಾಜ ಒಡೆಯರು ಕ್ರಿ.ಶ 1895ರಲ್ಲಿ ಪಟ್ಟಾಭಿಷಿಕ್ತರಾದರು.

2.ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ದರಾದರು?

ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ದಿಗಾಗಿ ಕಂಕಣಬದ್ಧರಾದರು.

3. ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲ ವಿದ್ಯುತ್ ಯೋಜನೆ ಯಾವುದು?

ಏಷ್ಯಾ ಖಂಡದಲ್ಲಿಯೇ ಮೊದಲು ಶಿವನ ಸಮುದ್ರದ ಕಾವೇರಿ ನದಿಯ ಬಳಿಯಲ್ಲಿ ಸ್ಥಾಪಿಸಿದ ಜಲವಿದ್ಯುತ್‌ಯೋಜನೆಯಾಗಿದೆ.

4. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?

ಬ್ರಿಟಿಷ್‌ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಸರ್ ಪದವಿ ಪದವಿಯನ್ನು ನೀಡಿ ಗೌರವಿಸಿತು.

5.ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?

ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ನಾಲ್ವಡಿ ಕೃಷ್ಣರಾಜ ಒಡೆಯರು.

6. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಆಚರಿಸಲಾಗುತ್ತದೆ?

ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಎಂಜಿನಿಯರ್ಸ್ ದಿನಾಚರಣೆಯನ್ನು ಆಚರಿಸಲಾಗುತ್ತದೆ.

## ಗದ್ಯಪಾಠ –5 ಎದೆಗೆ ಬಿದ್ದ ಅಕ್ಷರ

1.ಇಂದಲ್ಲ – ನಾಳೆ ಫಲ ಕೊಡುವ ಅಂಶಗಳಾವವು?

ಇಂದಲ್ಲ – ನಾಳೆ ಫಲ ಕೊಡುವ ಅಂಶಗಳೆಂದರೆ ಭೂಮಿಗೆ ಬಿದ್ದ ಬೀಜ ಮತ್ತು ಎದೆಗೆ ಬಿದ್ದ ಅಕ್ಷರ.

2.ಮನೆ ಮಂಚಮ್ಮ ಯಾರು?

ಮನೆ ಮಂಚಮ್ಮ ಕತೆಯಲ್ಲಿನ ಗ್ರಾಮದೇವತೆ.

3.ಮನೆ ಮಂಚಮ್ಮನ ಕತೆ ಹೇಳಿದ ಕವಿ ಯಾರು?

ಮನೆ ಮಂಚಮ್ಮನ ಕತೆ ಹೇಳಿದ ಕವಿ ಸಿದ್ದಲಿಂಗಯ್ಯ.

4.ಶಿವಾನುಭವ ಶಬ್ದಕೋಶ ಬರೆದವರು ಯಾರು?

ಶಿವಾನುಭವ ಶಬ್ದಕೋಶ ಬರೆದವರು ಫ.ಗು.ಹಳಕಟ್ಟಿ.

5.ವಚನಕಾರರಿಗೆ ಯಾವುದು ದೇವರಾಗಿತ್ತು?

ವಚನಕಾರರಿಗೆ ಅವರ ಪ್ರಜ್ಞೆಯೇ ದೇವರಾಗಿತ್ತು.

6.ಅಶೋಕ ಪೈ ಅವರ ವೃತ್ತಿ ಯಾವುದು ?

ಅಶೋಕ ಪೈ ಅವರ ವೃತ್ತಿ ಮನೋವೈದ್ಯರು.

7.ದೇವನೂರರ ಪ್ರಕಾರ ದೇವರು ಯಾರು?

ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ದನನ್ನು ಇಟ್ಟರೆ ಅದನ್ನೇ ದೇವನೂರರು ನನ್ನ ದೇವರುಎಂದಿದ್ದಾರೆ.

## ಗದ್ಯಪಾಠ –6.ವ್ಯಾಘ್ರಗೀತೆ

1.ಭಗವದ್ಗೀತೆಯನ್ನು ರಚಿಸಿದವರು ಯಾರು?

ಭಗವದ್ಗೀತೆಯನ್ನು ರಚಿಸಿದವರು ಮಹರ್ಷಿವೇದವ್ಯಾಸರು.

2.ಹುಲಿಗೆ ಪರಮಾನಂದವಾಗಲು ಕಾರಣವೇನು?

ಶಾನುಬೋಗರ ದುಂಡು ದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.

3.ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?

ಹುಲಿಗೆ ತಮ್ಮ ಮುಖದರ್ಶನವಾಗದಂತೆ ತಪ್ಪಿಸಿಕೊಳ್ಳುವ ದೊಂಬರಾಟದಲ್ಲಿ ಶಾನುಭೋಗರಿಗೆ ತಲೆ ಸುತ್ತುಬಂದಿತು.

4. ಶಾನುಭೋಗರಿಗೆ ಬ್ರಹ್ಮಾಸ್ತ್ರ ಯಾವುದು?

ಶಾನುಭೋಗರಿಗೆ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ ಆಗಿದೆ.

ಆನಂದ್ ಗುರು ಅಂಗೊಂಡಹಳ್ಳಿ

5.ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?
ಹಸಿದು ಮಲಗಿದ್ದ ಹುಲಿಯು ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸಿತು.

## ಗದ್ಯಪಾಠ–7.ವೃಕ್ಷಸಾಕ್ಷಿ

1.ವೃಕ್ಷಸಾಕ್ಷಿ ಕತೆಯನ್ನು ಯಾವ ಕೃತಿಯಿಂದ ಆರಿಸಲಾಗಿದೆ?
ವೃಕ್ಷಸಾಕ್ಷಿ' ಕತೆಯನ್ನು ದುರ್ಗಸಿಂಹನ ಕರ್ನಾಟಕ ಪಂಚತಂತ್ರ ಕೃತಿಯಿಂದ ಆರಿಸಲಾಗಿದೆ.

2.ದುಷ್ಟಬುದ್ದಿಯು ಧರ್ಮಬುದ್ದಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?
ದುಷ್ಟಬುದ್ದಿಯು ಧರ್ಮಬುದ್ದಿಯ ಮೇಲೆ ಹೊನ್ನಿನ ಕಳ್ಳತನದ ಆರೋಪವನ್ನು ಹೊರಿಸಿದನು.

3. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?
ಧರ್ಮಬುದ್ಧಿಯು ಕದ್ದಿರುವದಕ್ಕೆ ಆಲದ ಮರವೇ ಸಾಕ್ಷಿ ಎಂದಿದ್ದಕ್ಕೆ ಧರ್ಮಾಧಿಕರಣರು ವಿಸ್ಮಯ ಹೊಂದಿದರು.

4. ಧರ್ಮಬುದ್ದಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?
ಧರ್ಮಬುದ್ದಿಯು ತನ್ನ ಬೆಳಗಿನ ಹೊತ್ತನ್ನು ದೇವರು, ಗುರುಗಳು, ವೇದಾಧ್ಯಯನ ನಿರತರನ್ನು ಪೂಜೆ ಮಾಡುತ್ತಕಳೆದನು.

5.ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?
ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ದುಷ್ಟಬುದ್ದಿ ಮತ್ತು ಧರ್ಮಬುದ್ದಿಯ ನಡುವಿನ ವ್ಯಾಜ್ಯವನ್ನುಪರಿಹರಿಸಲು ಬಂದರು.

## ಗದ್ಯಪಾಠ –8.ಸುಕುಮಾರಸ್ವಾಮಿಯ ಕಥೆ

1.ಸುಕುಮಾರಸ್ವಾಮಿಯ ತಂದೆತಾಯಿಗಳ ಹೆಸರೇನು?
ತಂದೆ–ಸೂರದತ್ತ, ತಾಯಿ ಯಶೋಭದ್ರೆ.

2.ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು?
ಸುಕುಮಾರಸ್ವಾಮಿಗೆ ಸೆಟ್ಟಿಯ ಪಟ್ಟವನ್ನು ಕಟ್ಟಲಾಯಿತು.

3.ನೈಮಿತ್ತಿಕನು ಸುಕುಮಾರಸ್ವಾಮಿಯ ಬಗ್ಗೆ ಏನು ಹೇಳಿದನು?
ಸುಕುಮಾರ ಸ್ವಾಮಿಯು ಯಾವಾಗ ಋಷಿಗಳನ್ನು ಕಾಣುತ್ತಾನೆಯೋ ಅಂದು ತಪಸ್ಸಿಗೆ ಹೊರಡುತ್ತಾನೆ ಎಂದುಹೇಳಿದನು.

4.ಯಶೋಭದ್ರೆಯು ರತ್ನ ಕಂಬಳಿಗಳನ್ನು ಯಾರಿಗೆ ಕೊಟ್ಟಳು?
ಯಶೋಭದ್ರೆಯು ರತ್ನ ಕಂಬಳಿಗಳನ್ನು ತನ್ನ ಸೊಸೆಯಂದಿರಿಗೆ ಹಂಚಿಕೊಟ್ಟಳು.

5.ಅರಸ ವೃಷಭಾಂಕನ ಉಂಗುರವು ಯಾವಾಗ ಕೆಳಕ್ಕೆ ಬಿದ್ದಿತು?
ಅರಸ ವೃಷಭಾಂಕನ ಉಂಗುರವು ಸುಕುಮಾರಸ್ವಾಮಿಯ ಮನೆಯಲ್ಲಿ ಸ್ನಾನ ಮಾಡುವಾಗ ಕೆಳಕ್ಕೆ ಬಿದ್ದಿತು.

## ಪದ್ಯಪಾಠ –1. ಸಂಕಲ್ಪಗೀತೆ

1. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು?
ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲ್ಲಿ ಮನ್ನಡೆಸಬೇಕು.

2. ನದೀಜಲಗಳು ಏನಾಗಿವೆ?
ನದೀಜಲಗಳು ಕಲುಷಿತವಾಗಿವೆ.

3. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?
ಕಲುಷಿತವಾಗಿರುವ ನದೀಜಲಗಳಿಗೆ ಮುಂಗಾರಿನ ಮಳೆಯಾಗಬೇಕು.

4. ಕಾಡುಮೇಡುಗಳ ಸ್ಥಿತಿ ಹೇಗಿದೆ?
ಕಾಡುಮೇಡುಗಳು ಬರಡಾಗಿವೆ.

5. ಯಾವ ಎಚ್ಚರದೊಳು ಬದುಕಬೇಕಿದೆ?
ಮತಗಳೆಲ್ಲವೂ ಪಥಗಳು ಎನ್ನುವ ಎಚ್ಚರದೊಳು ಬದುಕಬೇಕಿದೆ.

## ಪದ್ಯಪಾಠ –2. ಹಕ್ಕಿ ಹಾರುತಿದೆ ನೋಡಿದಿರಾ?

1. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ?
ಹಕ್ಕಿಯು ಎವೆ ತೆರೆದಿಕ್ಕುವ ಹೊತ್ತಿನೊಳಗೆ ಅಂದರೆ ಕಣ್ಣು ರೆಪ್ಪೆ ಮಿಟುಕಿಸುವಷ್ಟು ಸಮಯದಲ್ಲಿ (ನಿಮಿಷದಲ್ಲಿ) ಗಾವುದ ಗಾವುದ ಗಾವುದ ಮುಂದೆ ಹಾರುತ್ತಿದೆ.

2. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ?
ಹಕ್ಕಿಯ ಗರಿಯಲ್ಲಿ ಬಿಳಿಯ ಹೊಳೆಯುವ ಬಣ್ಣಗಳಿವೆ.

3. ಹಕ್ಕಿಯು ಕಣ್ಣುಗಳು ಯಾವುವು?
ಸೂರ್ಯ ಚಂದ್ರರು ಹಕ್ಕಿಯ ಕಣ್ಣುಗಳು.

4. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?
ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ.

5. ಹಕ್ಕಿ ಯಾರನ್ನು ಹರಸಿದೆ?
ಹಕ್ಕಿಯು ಹೊಸಗಾಲದ ಹಸುಮಕ್ಕಳನ್ನು ಹರಸಿದೆ.

6. ಹಕ್ಕಿಯು ಯಾವುದರ ಸಂಕೇತವಾಗಿದೆ?
ಹಕ್ಕಿಯು ಕಾಲಪಕ್ಷಿಯ ಸಂಕೇತವಾಗಿದೆ.

7. ಹಕ್ಕಿಯ ಚುಂಚಗಳು ಎಲ್ಲಿಯವರೆಗೂ ಚಾಚಿವೆ?
ಹಕ್ಕಿಯ ಚುಂಚಗಳು ದಿಙ್ಮಂಡಲಗಳ ಅಂಚಿನ ಆಚೆಯ ವರೆಗೂ ಚಾಚಿವೆ.

## ಪದ್ಯಪಾಠ –3. ಹಲಗಲಿಯ ಬೇಡರು

1. ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಏನು?
ಕುಂಪಣಿ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶವನ್ನು ಹೊರಡಿಸಿತು.

2. ಹಲಗಲಿಯ ನಾಲ್ವರು ಪ್ರಮುಖರು ಯಾರು?
ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಈ ನಾಲ್ವರು ಹಲಗಲಿಯ ಪ್ರಮುಖರು.

3. ಹಲಗಲಿಯ ಗುರುತು ಉಳಿಯದಂತಾದುದು ಏಕೆ?
ಹಲಗಲಿಯ ಮೇಲೆ ಬ್ರಿಟಿಷ್ ಸರ್ಕಾರದ ದಂಡು ದಾಳಿ ಮಾಡಿ, ಬೆಂಕಿ ಹಚ್ಚಿದ್ದರಿಂದ ಹಲಗಲಿಯ ಗುರುತು ಉಳಿಯದಂತಾಯಿತು.

4. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?
ಹಲಗಲಿಯ ಭಂಟರ ಹತಾರ ಕದನ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ.

5. ಹಲಗಲಿ ಗ್ರಾಮ ಎಲ್ಲಿದೆ?
ಹಲಗಲಿ ಗ್ರಾಮವು ಮುಧೋಳ ಸಂಸ್ಥಾನದಲ್ಲಿದ್ದು ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ.

## ಪದ್ಯಪಾಠ –4. ಕೌರವೇಂದ್ರನ ಕೊಂದೆ ನೀನು

1. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಕೂರಿಸಿಕೊಳ್ಳುವಾಗ ಏನೆಂದು ಕರೆದನು?
ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಕೂರಿಸಿಕೊಳ್ಳುವಾಗ,ಕರ್ಣ ನಿಮ್ಮಲ್ಲಿ, ಯಾದವರು ಕೌರವರಲ್ಲಿ ಭೇದವಿಲ್ಲ. ಹೇಳುವುದಾದರೆ ವಂಶದಲ್ಲಿ ಮೊದಲೆರಡಿಲ್ಲ ನಿನ್ನಾಣೆ.ರಾಜ ನೀನು, ಮನದಲ್ಲಿ ನಡೆದುದರ ಅರಿವಿಲ್ಲ ಎಂದು ಹೇಳುತ್ತಾ ಕರೆದನು.

2. ಕುಮಾರ ವ್ಯಾಸನ ಆರಾಧ್ಯ ದೈವ ಯಾರು?
ಕುಮಾರವ್ಯಾಸನ ಆರಾಧ್ಯ ದೈವ ಗದುಗಿನ ವೀರನಾರಾಯಣ.

3. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?
ಕೃಷ್ಣನು ಕರ್ಣನ ಸಂಗಡ ಮೈದುನತನದ ಸರಸವನ್ನು ಮಾಡಿ, ಕೈಹಿಡಿದು ಎಳೆದು, ತೊಡೆ ತಾಗುವಂತೆ ರಥದ ಪೀಠದಲ್ಲಿ ಕೂರಿಸಿದನು.

4. ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ಯಾರು?
ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವ.
5. ನಾರಣಪ್ಪನಿಗೆ ಕುಮಾರವ್ಯಾಸ ಎಂಬ ಹೆಸರು ಏಕೆ ಬಂತು?
ನಾರಣಪ್ಪನು ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡದಲ್ಲಿ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಕೃತಿ ರಚಿಸಿದ್ದರಿಂದ 'ಕುಮಾರವ್ಯಾಸ' ಎಂಬ ಹೆಸರು ಬಂದಿತು.

## ಪದ್ಯಪಾಠ –5. ಹಸುರು

1. ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ?
ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಗಿಳಿ ಹಸುರಿನಂತಿದೆ.
2. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?
ಕವಿಯು ನೋಡಿದ ಅಡಕೆಯ ತೋಟ ಬನದ ಅಂಚಿನಲ್ಲಿದೆ.
3. 'ಹಸುರು' ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ?
'ಹಸುರು' ಎಂಬುದು ಆಜ್ವಯುಜ ಮಾಸದ ನವರಾತ್ರಿಯಲ್ಲ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ.
4. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?
ಕವಿಗೆ ಹುಲ್ಲಿನ ಹಾಸು ಮಕಮಲ್ಲಿನ ಹೊಸಪಚ್ಚೆಯ ಜಮಖಾನದಂತೆ ಕಂಡಿದೆ.

## ಪದ್ಯಪಾಠ –6.ಛಲಮನೆ ಮೆರೆವೆಂ

1. ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನನು ಯಾರಿಗೆ ಹೇಳುವನು?
ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನನು ಭೀಷ್ಮನಿಗೆ ಹೇಳುವನು.
2. ದಿನಪಸುತ ಎಂದರೆ ಯಾರು?
ದಿನಪಸುತ ಎಂದರೆ ಕರ್ಣ.
3. ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನನು ಹೇಳುತ್ತಾನೆ?
ಅರ್ಜುನ ಮತ್ತು ಭೀಮರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನನು ಹೇಳುತ್ತಾನೆ.
4. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ಯಾರು?
ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ದುರ್ಯೋಧನ.
5. ಅಂತಕಾತ್ಮಜ ಎಂದರೆ ಯಾರು?
ಅಂತಕಾತ್ಮಜ ಎಂದರೆ ಧರ್ಮರಾಯ.

## ಪದ್ಯಪಾಠ –7. ವೀರಲವ

1. 'ಜೈಮಿನಿ ಭಾರತ' ಮಹಾಕಾವ್ಯವನ್ನು ಬರೆದ ಕವಿ ಯಾರು ?
'ಜೈಮಿನಿ ಭಾರತ' ಮಹಾಕಾವ್ಯವನ್ನು ಬರೆದ ಕವಿ ಲಕ್ಷ್ಮೀಶ.
2. ಯಜ್ಞಾಶ್ವವನ್ನು ಕಟ್ಟಿದವರು ಯಾರು?
ಯಜ್ಞಾಶ್ವವನ್ನು ಕಟ್ಟಿದವರು ಲವ.
3. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?
ಕುದುರೆಯನ್ನು ಲವನು ತನ್ನ ಉತ್ತರೀಯದಿಂದ ಕಟ್ಟಿದನು.
4. ಮುನಿಸುತರು ಹೆದರಲು ಕಾರಣವೇನು?
ಲವನು ಯಜ್ಞಾಶ್ವವನ್ನು ಕಟ್ಟಿ ಹಾಕಿದ್ದರಿಂದ ಮುನಿಸುತರು ಹೆದರಿದರು.

## ಪದ್ಯಪಾಠ –8. ಕೆಮ್ಮನೆ ಮೀಸೆವೊತ್ತನೇ

1. ದ್ರೋಣನು ಪರಶುರಾಮನಲ್ಲಿಗೆ ಏಕೆ ಬಂದನು?
ದ್ರೋಣನು ಪರಶುರಾಮನ ಬಳಿಗೆ ದ್ರವ್ಯಾರ್ಥಿಯಾಗಿ ಬಂದನು.
2. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು?
ದ್ರೋಣನು ಅಶ್ವತ್ಥಾಮನೊಡನೆ ಪರಶುರಾಮನ ಬಳಿಗೆ ಬಂದನು.
3. ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು?
ಪರಶುರಾಮನು ದ್ರೋಣನಿಗೆ ವಾರುಣ, ವಾಯವ್ಯ, ಆಗ್ನೇಯ, ಐಂದ್ರಾ ಮೊದಲಾದ ಪ್ರಧಾನ ಅಸ್ತ್ರಗಳನ್ನು ಕೊಟ್ಟನು.
4. ದ್ರುಪದನು ಪಡಿಯಱನಿಗೆ ಏನೆಂದು ಹೇಳಿ ಕಳುಹಿಸಿದನು?
ದ್ರುಪದನು ಪಡಿಯಱನಿಗೆದ್ರೋಣನು ಯಾರೆಂದು ನಾನು ತಿಳಿಯೆನು, ಅವನನ್ನು ಹೊರಗೆ ತಳ್ಳು ಎಂದು ಹೇಳಿ ಕಳುಹಿಸಿದನು.

## ಪಠ್ಯಪೋಷಕ ಅಧ್ಯಯನ

## 1. ಸ್ವಾಮಿ ವಿವೇಕಾನಂದರ ಚಿಂತನೆಗಳು

ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.
1. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?
ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರು – "ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ. ಹಿಂದೆ ಅದು ವಿಕಾಸವಾಗುತ್ತಿತ್ತು.ಈಗ ಅದು ಘನೀಭೂತವಾಗಿದೆ.ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.
2. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು, ಏಕೆ?
ಕೋಮುವಾದವು ಏಕಧರ್ಮ ಮತ್ತು ಏಕಸಂಸ್ಕೃತಿಯೇ ಶ್ರೇಷ್ಠವೆಂದೂ ಅದೇ ಅಂತಿಮವೆಂದೂ ನಂಬುತ್ತ ನಂಬಿಸುತ್ತ, ಪರಮಧರ್ಮ ದ್ವೇಷವನ್ನು ಬಿತ್ತಿ ಬೆಳೆಸುತ್ತದೆ. ಆದ್ದರಿಂದ ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು.
3. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?
ಚಿಕಾಗೊದ ಸರ್ವಧರ್ಮ ಸಮ್ಮೇಳನದಲ್ಲಿ ಮಾತನಾಡುತ್ತ ಅವರು: "ಸ್ವಮತಾಭಿಮಾನ, ಅನ್ಯ ಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ, ಘೋರ ಧಾರ್ಮಿಕ ದುರಭಿಮಾನಗಳು ಈ ಸುಂದರ ಜಗತ್ತನ್ನು ಆವರಿಸಿಕೊಂಡಿವೆ. ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಬಹಳ ಮುಂದುವರೆಯುತ್ತಿತ್ತು" ಎಂದು ಹೇಳಿದರು.

## ಪಠ್ಯಪೋಷಕ ಅಧ್ಯಯನ

## 2. ವಸಂತ ಮುಖ ತೋರಲಿಲ್ಲ

1. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?
ಪುಟ್ಟ ಪೋರಿ ಮುಸುರೆ ತಿಕ್ಕುತ್ತಿದ್ದಾಳೆ.
2. ಅಮ್ಮ ಎಲ್ಲಿ ಮಲಗಿದ್ದಾಳೆ?
ಅಮ್ಮ ಗುಡಿಸಲಿನಲ್ಲಿ ಮಲಗಿದ್ದಾಳೆ.
3. ಯಾರಿಗೆ ವಸಂತಮುಖ ತೋರಲಿಲ್ಲ?
ಕಮ್ಮಾರ, ನೇಕಾರ, ಕುಂಬಾರ, ಕೇರಿಯ ಮಾರ ಮತ್ತು ಪುಟ್ಟಿಗೆ ವಸಂತ ಮುಖ ತೋರಲಿಲ್ಲ.
4. ಪುಟ್ಟಿಯ ಪ್ರಶ್ನೆಗಳೇನು?
ಗುಡಿಸಲೊಳಗೆ ಬರಲು ವಸಂತ ಹೆದರಿದನೆ? ಹರಿದ ಚಿಂದಿ ಬಟ್ಟೆಗಳ ಕಂಡು ಅವನು ಮರುಗಿದನೆ? ಇವು ಪುಟ್ಟಿಯ ಪ್ರಶ್ನೆಗಳಾಗಿವೆ.
5. ಇಳೆಗೆ ಯಾವ ಸಂಭ್ರಮವೆಂದು ಕವಿ ಹೇಳಿದ್ದಾರೆ?
ಇಳೆಗೆ ಕಡಲುಕ್ಕಿ ಹರಿಯುವ ಸಂಭ್ರಮ ಎಂದು ಕವಿ ಹೇಳಿದ್ದಾರೆ.
6. ಮಾವಿನ ಮರಗಳು ಎಲ್ಲಿ ಮೈ ತುಂಬಿ ನಿಂತಿವೆ?
ಮಾವಿನ ಮರಗಳು ಒಡೆಯನ ಅಂಗಳದಲಿ ಮೈ ತುಂಬಿ ನಿಂತಿವೆ.

7. ಕೋಗಿಲೆ ಹೇಗೆ ಹಾಡುತ್ತದೆಂದು ಕವಿ ಹೇಳಿದ್ದಾರೆ?
ಕೋಗಿಲೆ ಮನದುಂಬಿ ಹಾಡುತ್ತದೆಂದು ಕವಿ ಹೇಳಿದ್ದಾರೆ.
8. ಪುಟ್ಟಿ ಏನನ್ನು ಕಂಡು ಮೂಕವಿಸ್ಮಿತಳಾದಳು?
ಪುಟ್ಟಿ ಥಳಥಳ ಹೊಳೆಯುವ ಸೂರ್ಯನನ್ನು ಕಂಡು ಮೂಕವಿಸ್ಮಿತಳಾದಳು.
9. ಯಾರ ಒಲೆ ಉರಿಯಲಿಲ್ಲ?
ಕೇರಿಯ ಮಾರನ ಒಲೆ ಉರಿಯ್ತುಲಿಲ್ಲ.
10. ಬಾಲರವಿ ಎಲ್ಲಿ ಸೊರಗಿದ್ದಾನೆ?
ತೂತು ಬಿದ್ದ ಸೀರೆಯಲ್ಲಿ ಬಾಲ ರವಿ ಸೊರಗಿದ್ದಾನೆ.

## ಪಠ್ಯ ಪೋಷಕ ಅಧ್ಯಯನ 3.ಭಗತ್ ಸಿಂಗ್.

1. ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣೆ ಏನು?
* ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ: "ಏಪ್ರಿಲ್–13, 1919 ರಂದು ಬ್ರಿಟೀಷರ ಗುಂಡುಗಳಿಗೆ ಆಹುತಿಯಾದ
* ಸುಮಾರು 2000 ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ."
2. ಬಾಲಕ ಭಗತ್‌ಸಿಂಗ್ ಊಟಮಾಡದೆ ಉಪವಾಸವಿದ್ದುದಕ್ಕೆ ಕಾರಣವೇನು?
* ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಪ್ರಾಣ ಕಳೆದುಕೊಂಡಿದ್ದವರಿಗೆ ನಮನ ಸಲ್ಲಿಸಲು ಭಗತ್‌ಸಿಂಗ್ ಹೋಗಿದ್ದನು.ಅಲ್ಲಿದ್ದ ಸ್ವಲ್ಪ ಮಣ್ಣನ್ನು ತೆಗೆದುಕೊಂಡು ಹಣೆಗಿಟ್ಟುಕೊಂಡ.ಇನ್ನಷ್ಟನ್ನು ಡಬ್ಬಿಯಲ್ಲಿ ಶೇಖರಿಸಿಕೊಂಡು ಹಿಂತಿರುಗಿದ.ಜಲಿಯನ್ ವಾಲಾಬಾಗ್ ಘಟನೆ ಆತನ ಮನಸ್ಸಿನ ಮೇಲೆ ತೀವ್ರವಾದ ಪರಿಣಾಮ ಬೀರಿತ್ತು. ಆದ್ದರಿಂದ ಅವನ ಸಹೋದರಿ ರಾತ್ರಿ ಎಂದಿನಂತೆ ಊಟಕ್ಕೆಬ್ಬಿಸಿದಾಗ ಅವನು ಒಲ್ಲೆನೆಂದು ಮುಖ ತಿರುಗಿಸಿದ.
3. ಭಗತ್‌ಸಿಂಗ್ ಮತ್ತು ಆತನ ಸಹಚರರಿಗೆ ಗಲ್ಲುಶಿಕ್ಷೆಯಾಗಲು ಕಾರಣವೇನು?
* ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದ ಬಾಲಕ ಭಗತ್‌ಸಿಂಗ್ ಮುಂದೆ ತನ್ನ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ಮರಣ ದಂಡನೆಗೆ ಈಡಾದನು.
4. ಜನರಲ್ ಡಯರ್‌ನ ಪೈಶಾಚಿಕ ಕೃತ್ಯವನ್ನು ಕುರಿತು ತಿಳಿಸಿ.
* ಜನರಲ್ ಡಯರ್ ಕ್ರೂರ ಮಾರ್ಗದಿಂದ ಭಾರತೀಯರನ್ನೂ ಬಗ್ಗು ಬಡಿಯಬಹುದೆಂದು ಭಾವಿಸಿದನು. ಒಟ್ಟು 1650 ಸುತ್ತುಗಳಷ್ಟು ಗುಂಡಿನ ಮಳೆ ಕರೆಯಿಸಿದ್ದ ಅವನು ಹೆಮ್ಮೆಯಿಂದ ಹೇಳಿಕೊಂಡದ್ದು ಇದು."ಒಂದೇ ಒಂದು ಗುಂಡು ಸಹ ದಂಡವಾಗಲಿಲ್ಲ".ಅಂದು ಪ್ರಾಣ ಕಳೆದುಕೊಂಡವರ ಸಂಖ್ಯೆ ಇದನ್ನು ಖಚಿತಗೊಳಿಸಿತ್ತು.
5. ತನ್ನ ಹಳ್ಳಿಯಿಂದ ರೈಲಿನಲ್ಲಿ ಅಮೃತಸರದಲ್ಲಿ ಬಂದಿಳಿದಿದ್ದ ಬಾಲಕ ಭಗತ್ ಸಿಂಗ್ ಅಲ್ಲಿ ಏನು ಮಾಡಿದನು?
* ಹುಡುಗ ಜಲಿಯನ್ ವಾಲಾಬಾಗ್‌ನಲ್ಲಿ ಒಂದೆಡೆ ಅಂತರ್ಮುಖಿಯಾಗಿ ಬಹುಕಾಲ ನಿಂತ.ನಂತರ ಅಲ್ಲಿದ್ದ ಸ್ವಲ್ಪ ಮಣ್ಣನ್ನು ತೆಗೆದುಕೊಂಡು ಹಣೆಗಿಟ್ಟುಕೊಂಡ.ಇನ್ನಷ್ಟನ್ನು ತನ್ನಲ್ಲಿದ್ದ ಡಬ್ಬಿಯಲ್ಲಿ ಶೇಖರಿಸಿಕೊಂಡು ಹಿಂತಿರುಗಿದ.

## ಪಠ್ಯ ಪೋಷಕ ಅಧ್ಯಯನ 4. ಮೃಗ ಮತ್ತು ಸುಂದರಿ

1. ಬಡತನ ಸುಂದರಿ ಹಾಗೂ ಅವಳ ತಂದೆಗೆ ಕಷ್ಟವಾಗಲಿಲ್ಲ ಏಕೆ?
* ಬಡತನ ಸುಂದರಿ ಹಾಗೂ ಅವಳ ತಂದೆಗೆ ಕಷ್ಟವಾಗಲಿಲ್ಲ. * ಏಕೆಂದರೆ ಅವರ ಜೀವನ ಸರಳವಾಗಿತ್ತು.
2. ಮೃಗದ ಬಾಹ್ಯ ಆಕಾರ ಹೇಗಿತ್ತು?
* ಮೃಗದ ಬಾಹ್ಯ ಆಕಾರ ಭೀಕರವಾಗಿತ್ತು.ಕೋರೆ ಹಲ್ಲು, ಹಂದಿಯ ದೇಹ, ತೋಳದ ಚಲನೆಯನ್ನು ಪಡೆದಿತ್ತು.
3. ಕನ್ಯೆ ಕೊಟ್ಟ ಶಾಪವೇನು?
* 'ನಿನ್ನನ್ನು ಕನ್ಯೆಯೊಬ್ಬಳು ಮನಸಾರೆ ಒಪ್ಪಿ ಪ್ರೀತಿಸುವವರೆಗೆ ಮೃಗವಾಗಿಯೇ ಇರು' ಎಂದು ಕನ್ಯೆ ಶಾಪ ಹಾಕಿದ್ದಳು.
4. ಶಾಪ ವಿಮೋಚನೆಯ ಫಲವೇನು?
* ಶಾಪ ವಿಮೋಚನೆಯ ನಂತರ ಮೃಗದ ಆಕಾರವೇ ಬದಲಾಯಿತು.ಅದು ಸುಂದರ ರಾಜಕುಮಾರನಾಗಿ ಬದಲಾಯಿತು.
5. ಮೃಗದ ಬಗೆಗೆ ಸುಂದರಿಯ ಮನ ಕರಗುತ್ತಿತ್ತು ಏಕೆ?
* ಮೃಗದ ಒರಟು ಮಾತು, ತಿಕ್ಕಲು ನಡವಳಿಕೆ ಮನಸ್ಸಿನಲ್ಲೇ ನಗು ತರುತ್ತಿದ್ದವು. ಹಾಗೂ ಆತನ ಕಾಳಜಿಯನ್ನು ನೆನೆದು ಮನ ಕರಗುತ್ತಿತ್ತು.

## ಪಠ್ಯ ಪೋಷಕ ಅಧ್ಯಯನ 5. ಒಗಟುಗಳು

1. ಒಗಟಿನ ಉತ್ತರ 'ಅಂಗಿ' ಎಂಬುದನ್ನು ಸಮರ್ಥಿಸುವಿರಿ.
* ಅಂಗಿಯ ಎರಡು ತೋಳುಗಳ ಭಾಗವೇ ಕೈ.ಅಂಗಿಗೆ ತಲೆಯಿಲ್ಲ. ಅಂಗಿಯ ಬೇರೆಬೇರೆ ಭಾಗ ಸೇರಿಸಿ ಹೊಲಿಗೆ ಹಾಕಿರುವುದೇ ನವಗಾಯ.ಮೆಲ್ಲನೆ ಬಂದು ಶರೀರಕ್ಕೆ ತೊಡಿಸುವುದರಿಂದ ಅದು ಅಂಗಿಯಾಗಿ ಎಲ್ಲರಿಗೂ ಪರಿಚಯವಾಗಿದೆ.
2. ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ?
* ಉಪ್ಪನ್ನು ನೀರಿನಲ್ಲೇ ಇರುವ ಅಂಶವಾಗಿದೆ. ಅದನ್ನು ನೀರಿನಿಂದಲೇ ತಯಾರಿಸಲಾಗುತ್ತದೆ.ಆದರೆ ಅದಕ್ಕೆ ನೀರು ತಾಕಿದರೆ ಕರಗಿ ಮಾಯವಾಗುತ್ತದೆ.ಎಂದು ಉಪ್ಪಿನ ವಿಶೇಷತೆ ಈ ಒಗಟಿನಲ್ಲಿ ವ್ಯಕ್ತವಾಗಿದೆ.
3. ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಒಗಟು ಹೇಗೆ ವಿವರಿಸುತ್ತದೆ?
* ಕಮಲದ ಹೂವು ಬೆಳೆಯಲು ಕೆಸರು ಬೇಕು. ಆದ್ದರಿಂದ ಅದು ಕೆಸರಿನಲ್ಲೆ ಹುಟ್ಟಿ, ಕೆಸರಿನಲ್ಲೆ ಬೆಳೆಯುವ ಒಂದು ವಿಧವಾದ ಗಿಡವಾಗಿದೆ.ಎಂದು ವರ್ಣಿಸಿರುವುದು ಸೂಕ್ತವಾಗಿದೆ.
4. ಹೊಲದಲ್ಲಿ ಹುಟ್ಟಿದ ಉತ್ತರಾಣಿ ಹಾಗೂ ಗರಿಕೆ ಕೊಡುವ ತೊಂದರೆಯನ್ನು ಒಗಟುಗಳು ಹೇಗೆ ವಿವರಿಸುತ್ತವೆ?
* ಹೊಲದ ಬದುವಿನಲ್ಲಿ ಹುಟ್ಟುವ ಉತ್ತರಾಣಿ ಗಿಡದಲ್ಲಿ ಬೆಳೆಯುವ ಬೀಜಗಳು ಮುಳ್ಳಿನಂತಿರುತ್ತವೆ. ಆ ಗಿಡವಿರುವ ಬದುವಿನಲ್ಲಿ ನಡೆದುಕೊಂಡು ಹೋಗುವವರ ಸೆರಗನ್ನು ಹಿಡಿದುಕೊಳ್ಳುತ್ತವೆ. ರೈತನಿಗೆ ಬಹಳ ತೊಂದರೆ ಕೊಡುವ ಗರಿಕೆಯನ್ನು ಎಷ್ಟೇ ಉತ್ತರೂ ಹೊಲದಲ್ಲಿ ನಾಶಪಡಿಸಲು ಸಾಧ್ಯವಿಲ್ಲ; ಅದು ಮತ್ತೆ ಚಿಗುರಿಕೊಳ್ಳುತ್ತದೆ.ರೈತನ ಪ್ರಯತ್ನವನ್ನು ಕಂಡು 'ನಿನ್ನದು ವ್ಯರ್ಥ ಪ್ರಯತ್ನ. ನನ್ನನ್ನು ನಾಶಪಡಿಸಲು ನಿನ್ನಿಂದ ಸಾಧ್ಯವಿಲ್ಲ' ವೆಂಬಂತೆ ನಗುತ್ತದೆ ಎಂದು ಒಗಟಿನಲ್ಲಿ ಸ್ವಾರಸ್ಯಕರವಾಗಿ ಹೇಳಲಾಗಿದೆ.
5. ಬೀಸುವ ಕಲ್ಲನ್ನು ಕುರಿತ ಒಗಟನ್ನು ವಿವರಿಸಿರಿ.
* ಬೀಸುವ ಕಲ್ಲಿನ ಮೇಲೆ ಮಧ್ಯಭಾಗದಲ್ಲಿರುವ ಬಾಯಿಗೆ ಧಾನ್ಯವನ್ನು ಹಾಕಲಾಗುತ್ತದೆ.ಬೀಸುತ್ತಿದ್ದಂತೆ ಅದು ಕಲ್ಲಿನ ಒಳಗೆ ಹೋಗುತ್ತದೆ.ಅದನ್ನೆ ಒಗಟಿನಲ್ಲಿ 'ಬಾಯಲ್ಲಿ ತಿಂಬೋದು' ಎನ್ನಲಾಗಿದೆ. ಹಾಗೆಯೇ ಅದರಲ್ಲಿ ಬೀಸುವಾಗ ಅದರ ಸುತ್ತ ಹಿಟ್ಟು ಚೆಲ್ಲುತ್ತದೆ, ಇದನ್ನೆ ಕುಕ್ಕುವುದು(ಕಕ್ಕುವುದು) ಎಂದು ಹೇಳಲಾಗಿದೆ.
6. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?
* ಒಗಟುಗಳಿಂದ ಚಿಂತನೆ ಮಾಡುವ ಮನೋಭಾವ ಹೆಚ್ಚುತ್ತದೆ. ಉತ್ತರ ಕಂಡುಕೊಳ್ಳಲು ಮನಸ್ಸು ಆಲೋಚಿಸುತ್ತದೆ.ಆಗ ಆಲೋಚನಾ ಶಕ್ತಿ ಹೆಚ್ಚಾಗುತ್ತದೆ.ಮುದುಡಿದ ಮನಸ್ಸನ್ನು ಅರಳಿಸಲು, ಮನೋರಂಜನೆ ನೀಡಲು ಒಗಟುಗಳು ಸಹಾಯಕವಾಗುತ್ತವೆ. ಜನಪದರ ಬುದ್ಧಿವಂತಿಕೆಯನ್ನು ತಿಳಿಯುವುದರ ಜೊತೆಗೆ ಒಂದು ವಸ್ತುವನ್ನು ಹೇಗೆಲ್ಲ ಬಣ್ಣಿಸಬಹುದೆಂಬ ಚಿಂತನೆ ಮೂಡುತ್ತದೆ.

ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

## ಗದ್ಯಪಾಠ–1. ಯುದ್ಧ

1. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?

ಡಾಕ್ಟರ್‌ಗೆ ವಿಮಾನದ ಪೈಲಟ್,ಡಾಕ್ಟರ್, ರೇಡಿಯೋ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗುತ್ತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೆ ಈ ಕತ್ತಲೆಯಲ್ಲ ಏನೂ ಕಾಣಿಸುತ್ತಿಲ್ಲವಲ್ಲ ?ಎಂದು ಹೇಳಿದನು.

2. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?

ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ?ಆ ಮನೆಯೊಳಗೆ ಏನು ಸಂಭವಿಸುತ್ತಿದೆ?ತಾನೀಗ ಈ ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು? ಬ್ಲಾಕ್ ಔಟ್ ನಿಯಮ ಪಾಲಿಸುವ ಈ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ?ಎಂಬ ಪ್ರಶ್ನೆಗಳು ಮೂಡಿದವು.

3. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?

ಮುದುಕಿಯು ರಾಹಿನ ಬಳಿ,ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು.ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ.ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು.ಜಮೀನು ಆಸ್ತಿ ನಮಗೆ ಸಾಕಾಗುವಷ್ಟಿತ್ತು. ಈಗಲೂ ಇದೆ ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕ್ಲ. ಯುದ್ಧವಂತೆ ಯುದ್ಧ! ಎಂದು ತಿರಸ್ಕಾರದಿಂದ ನುಡಿದಳು.

4. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?

ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಇಷ್ಟು ವರ್ಷಗಳಿಂದ ಹಂಬಲಿಸಿ ಹುಟ್ಟಿದ ಮಗುವು ಕೊನೆಗೂ ದಕ್ಕಲಿಲ್ಲವಲ್ಲ?ಈ ಯುದ್ಧವಿಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದ್ದೆನಲ್ಲ, ದೇವರೇ? ಈ ಮನುಷ್ಯರಿಗೆ ಎಂತಹ ದುಷ್ಟಬುದ್ಧಿ ಕೊಡುತ್ತೀಯಾ?' ಎಂದು ನುಡಿದಳು.

## ಗದ್ಯಪಾಠ–2.ಶಬರಿ

1. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?

ರಾಮನು ಗಿರಿವನಗಳನ್ನು ಕುರಿತು,ಗಿರಿವನಗಳೇ, ನಾನು ನಿಮ್ಮನ್ನು ಬೇಡಿಕೊಳ್ಳುವೆನು. ಹೇಳಿರಿ, ಪ್ರೀತಿಯ ರಾಣಿ ಸೀತೆಯು ನನಗೆ ದೊರೆಯುವಳೇ? ಅವಳು ಇರುವ ಸ್ಥಳವನ್ನು ನೀವು ತಿಳಿದಿರುವಿರೇ?ನನ್ನ ಹೃದಯದ ದುಃಖವು ನಾಶವಾಗುತ್ತಿಲ್ಲವಲ್ಲ ಎಂದು ಪ್ರಾರ್ಥಿಸಿದನು.

2. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ತಿಳಿಸಿ.

ಲಕ್ಷ್ಮಣನು ಸೀತೆಗಾಗಿ ಪರಿತಪಿಸುತ್ತಿದ್ದ ಅಣ್ಣನಾದ ರಾಮನನ್ನು ಕುರಿತುತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ತೇಜಗೆಡು ಕಾಂತಿಯನ್ನು ನೀಡುವವರು ಯಾರು?ರಾಮನೇ ಧೈರ್ಯಗೆಡಲು ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು?ಎಂದು ಸಂತೈಸಿದನು.

3. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?

ರಾಮನ ಸ್ವಾಗತಕ್ಕಾಗಿ ಶಬರಿಯು ಸವಿಯಾದ ಬಗೆಬಗೆಯ ಹಣ್ಣುಗಳನ್ನು, ಜೇನುತುಪ್ಪ ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು, ಸುವಾಸನೆಯಿಂದ ಕೂಡಿದ ಬಾಡದ ಹೂವುಗಳನ್ನು ಸಂಗ್ರಹಿಸಿ ಸಿದ್ಧಮಾಡಿಕೊಂಡಿದ್ದಳು.

4. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.

ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೊತ್ತಿಕೊಂಡಳು. ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ ಈ ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ. ನಿಮಗೆಂದೆ ತಂದೆನುಎಂದು ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.

5. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು?

ಆತಿಥ್ಯ ಸ್ವೀಕರಿಸಿದ ರಾಮಕ್ಷ್ಮಣರು ಶಬರಿಗೆ,ನಾವು ನಿನ್ನ ಪ್ರೀತಿಯ ಸ್ವಾಗತದಿಂದ ಸಂತಸಗೊಂಡೆವು.ನಿನ್ನ ಸುಖದಲ್ಲಿ ನಮ್ಮ ಸುಖ ಕಂಡೆವು.ಕಣ್ಣಿಗೆ ಕಾಣದ ಆನಂದವನ್ನು ಅನುಭವಿಸುವ ಪುಣ್ಯ ನಮ್ಮದಾಯಿತು.ನಾವು ನಿನಗೆ ಎಂದೆಂದಿಗೂ ಋಣಿಗಳು ಎಂದು ಹೇಳಿದರು.

## ಗದ್ಯಪಾಠ–3.ಲಂಡನ್ ನಗರ

1. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳು ಯಾವುವು?

ಲಂಡನ್ ನಗರದಲ್ಲಿನ 'ವೂವರ್ಥ' ಎಂಬ ಸ್ಟೇಶನರಿ ಅಂಗಡಿಯಲ್ಲಿ ಎಲ್ಲ ತರಹದ ಸಾಮಾನುಗಳು ದೊರೆಯುತ್ತವೆ. ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡುಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನುಗಳು, ಫೋಟೋ,ಅಡವಿಯ ಹೂವು, ಯುದ್ಧ ಸಾಮಗ್ರಿಗಳು ಎಲ್ಲವೂ ಇಲ್ಲಿ ದೊರೆಯುತ್ತವೆ.

2. ಲಂಡನ್ನಿನ ಹೆಣ್ಣುಮಕ್ಕಳು ಯಾವಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?

ಲಂಡನ್ನಿನಲ್ಲಿ ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ.ಉಪಹಾರ ಗೃಹಗಳಲ್ಲಿ ಕಾರ್ಯ ನಿರ್ವಹಿಸುವ ಮಾಣಿಗಳೂ ಸಹ ಹೆಣ್ಣುಮಕ್ಕಳೇ ಆಗಿರುತ್ತಾರೆ.ದೊಡ್ಡದೊಡ್ಡ ಅಂಗಡಿಗಳಲ್ಲಿ ಹೆಣ್ಣುಮಕ್ಕಳು ಕಾರಕೂನ ಹಾಗೂ ಟೈಪಿಸ್ಟ್ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ. ಸಿನಿಮಾ ಗೃಹದಲ್ಲಿ ಪ್ರೇಕ್ಷಕರಿಗೆ ಜಾಗವನ್ನು ಹುಡುಕಿಕೊಡುವ ಕಾರ್ಯ ನಿರ್ವಹಿಸುವವರೂ ಸಹ ಹೆಣ್ಣುಮಕ್ಕಳು. ಹೆಣ್ಣುಮಕ್ಕಳನ್ನು ಅತ್ಯಾದರದಿಂದ ನಡೆಸಿಕೊಳ್ಳುವ ಸಂಸ್ಕೃತಿಯ ಶಿಖರವನ್ನು ಇಂಗ್ಲೆಂಡಿನಲ್ಲಿ ಕಾಣಬಹುದು.

3. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?

ಲೇಖಕರು ಲಂಡನ್ ನಗರದಲ್ಲಿ ಹೆಣ್ಣುಮಕ್ಕಳು ಧರಿಸಿರುವ ಟೊಪ್ಪಿಗೆಯನ್ನು ಬಹು ಕುತೂಹಲದಿಂದ ನೋಡುತ್ತಾರೆ. ಒಂದು ಟೊಪ್ಪಿಗೆಯಂತೆ ಇನ್ನೊಂದು ಇರುವುದಿಲ್ಲ ಸಿಕ್ಕಿಸಿದ ಕುಚ್ಚವಾದರೂ ಕನಿಷ್ಠ ಪಕ್ಷಕ್ಕೆ ಬೇರೆಯಾಗಿರುತ್ತದೆ! ಕೋಟ್ಯಂತರ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಮನಗಾಣಬಹುದು.ಮನುಷ್ಯನಂತೆ ಟೊಪ್ಪಿಗೆಯಲ್ಲವೆ?ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ ಎಂಬುದು ಲೇಖಕರ ಅಭಿಪ್ರಾಯವಾಗಿದೆ.

4. ಪೊಯೆಟ್ಸ್ ಕಾರ್ನರ್‌ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ?

ಲಂಡನ್ ನಗರದ ಪೊಯೆಟ್ಸ್ ಕಾರ್ನರ್‌ನಲ್ಲಿ ಪ್ರಸಿದ್ಧ ಲೇಖಕ ಕಿಪ್ಲಿಂಗ್, ಹಾರ್ಡಿ, ಮೆಕಾಲೆ, ಜಾನ್ಸನ್, ಗೋಲ್ಡ್‌ಸ್ಮಿತ್, ವಿಮರ್ಶಕ ಮತ್ತು ಭಾಷಾಂತರಕಾರ ಡ್ರಾಯ್‌ಡನ್, ಪ್ರಖ್ಯಾತ ನಾಟಕಕಾರ ಬೆನ್‌ಜಾನ್‌ಸನ್ ಹಾಗೂ ಬ್ರಿಟನ್ನಿನ ಮಹೋನ್ನತ ರಾಷ್ಟ್ರಕವಿ ವರ್ಡ್ಸ್‌ವರ್ತ್ ಮೊದಲಾದ ಕವಿಪುಂಗವರ ಸಮಾಧಿಗಳಿವೆ.

ಆನಂದ ಗುರು ಅಂಗೊಂಡಹಳ್ಳಿ

**5. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆ ಏನು?**

ಲಂಡನ್ ನಗರದಲ್ಲಿ ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಅವರ ಸಿಂಹಾಸನದ ಮೇಲೆ ಒಂದು ಕಲ್ಲುಪಾಟಿಯನ್ನು ಹಾಕುತ್ತಾರೆ.ಪಟ್ಟಾಭಿಷೇಕವಾಗುವಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂಡಬೇಕು.ಈ ಶಿಲೆಯನ್ನು ಒಳಗೊಂಡ ಸಿಂಹಾಸನವು ವೆಸ್ಟ್‌ಮಿನ್‌ಸ್ಟರ್ ಮಂದಿರದಲ್ಲಯ ಒಂದು ಭಾಗದಲ್ಲದೆ. 'ಸ್ಟೋನ್ ಆಫ್ ಸ್ಕೋನ್' ಎಂದು ಇದರ ಹೆಸರು.ಮೂರನೆಯ ಎಡ್ವರ್ಡನು ಸ್ಕಾಟ್‌ಲೆಂಡಿನ ಅರಸರಿಂದ ಇದನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ.ಅಂದಿನಿಂದ ಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ.

## ಗದ್ಯಪಾಠ–4. ಭಾಗ್ಯಶಿಲ್ಪಿಗಳು

**1. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?**

ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರುಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗೂ ಪರಮೋಚ್ಚ ಪರಿಹಾರ.ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು.ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕುಎಂದು ಹೇಳಿದ್ದಾರೆ.

**2. ನೆಹರೂ ಅವರು ಸರ್. ಎಂ.ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?**

ನೆಹರೂ ಅವರು ಸರ್.ಎಂ. ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ವಿಶ್ವೇಶ್ವರಯ್ಯ ಅವರನ್ನು ಕುರಿತು ದುರದೃಷ್ಟವಾಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರು ಎಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ.ಅದನ್ನು ನಾವು ತಮ್ಮಿಂದ ಕಲಿಯೋಣ ಎಂದು ಹೇಳಿದ್ದಾರೆ.

**3. ಹೈದರಾಬಾದ್ ನಗರದಲ್ಲಿ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಸೇವೆ ಯಾವುದು?**

ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು. ಅದನ್ನು ತಡೆಯಲು ಎರಡು ನದಿಗಳಿಗೂ ಪ್ರತ್ಯೇಕ ಜಲಾಶಯ ನಿರ್ಮಿಸುವ ಮೂಲಕ ಸಮಸ್ಯೆಯನ್ನು ವಿಶ್ವೇಶ್ವಯ್ಯನವರು ಬಗೆಹರಿಸಿದರು.ಅವರು ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು.

**4. ಎಂಜಿನಿಯರ್‌ಗಳಿಗೆ ವಿಶ್ವೇಶ್ವರಯ್ಯ ಅವರು ಏನೆಂದು ಮಾರ್ಗದರ್ಶನ ಮಾಡಿದರು?**

ವಿಶ್ವೇಶ್ವರಯ್ಯ ಅವರು ಎಂಜಿನಿಯರುಗಳಿಗೆನಮ್ಮ ಕೆಲಸಗಳು ಪ್ರಮಾಣದಲ್ಲಿ ಚಿಕ್ಕದಿರಬಹುದು, ಆದರೆ ಪ್ರಪಂಚದಾದ್ಯಂತ ಯಾವುದೇ ವರ್ಗದ ಕಾಮಗಾರಿಯ ಎಂಜಿನಿಯರಿಂಗ್ ಗುಣಲಕ್ಷಣಗಳು ಒಂದೇ ಆಗಿರುತ್ತವೆ ಈ ಕಾಮಗಾರಿಗಳನ್ನು ಕುಶಲತೆ ಮತ್ತು ಕಡಿಮೆ ವೆಚ್ಚದಲ್ಲಿ ಕಾರ್ಯಗತಗೊಳಿಸಬೇಕೆಂದರೆ ಇತರ ಯಾವುದೇ ದೇಶದ ಎಂಜಿನಿಯರ್ ಪಡೆಯುವಷ್ಟೇ ತರಬೇತಿ ಮತ್ತು ಜ್ಞಾನವನ್ನು ಪಡೆಯಬೇಕು. ಮಾಹಿತಿಗಳಲ್ಲಾಗಲಿ, ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ. ಎಂದು ಮಾರ್ಗದರ್ಶನ ಮಾಡಿದರು.

**5. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?**

ವಿಶ್ವೇಶ್ವರಯ್ಯ ಅವರು ಕ್ರಿ.ಶ. 1913ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು.ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳು ರಚಿತಗೊಂಡವು.ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು.ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು.

## ಗದ್ಯಪಾಠ–5.ಎದೆಗೆ ಬಿದ್ದ ಅಕ್ಷರ

**1. ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವೇನು?**

ಕೆಲವರು ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್‌ನಲ್ಲಿ ಕೊಲೆ ದೃಶ್ಯವನ್ನು ನೋಡುತ್ತಿರುತ್ತಾರೆ. ಇನ್ನೊಂದು ಕೊಠಡಿಯಲ್ಲಿ ಇದರ ಅರಿವಿಲ್ಲದೆ ತಮ್ಮಷ್ಟಕ್ಕೆ ತಾವಿರುವ ಜನರಿಗೂ ಸ್ವಲ್ಪಮಟ್ಟಿಗೆ ದುಗುಡವಾಗುತ್ತದೆ. ಇದೇ ರೀತಿ ಕೊಠಡಿಯಲ್ಲಿ ನೃತ್ಯ ದೃಶ್ಯ ನೋಡುತ್ತಿರುವವರ ಖುಷಿ ಭಾವನೆಯು ಪಕ್ಕದ ಕೊಠಡಿಯಲ್ಲಿ ಇದನ್ನು ನೋಡದೆ ತಮ್ಮಷ್ಟಕ್ಕೆ ತಾವೇ ಇದ್ದವರ ಮನಸ್ಸಿನ ಮೇಲೂ ಪರಿಣಾಮ ಬೀರಿ ಸ್ವಲ್ಪಮಟ್ಟಿಗೆ ಸಂತೋಷದ ಭಾವನೆ ಉಂಟಾಗುತ್ತದೆ.ಇದು ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯ.

**2. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.**

ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ. ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು.ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ.ಅದು ತರ್ಕವಲ್ಲ; ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು.

**3. ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ್ಯ ಎಂಥದ್ದು?**

ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟೂ ಒಂದೇ ದೇಹದಲ್ಲಿ ಸಂಭವಿಸಿದ ಒಂದು ಉದಾಹರಣೆ ಪರಮಹಂಸ. ಯಾವುದನ್ನೂ ಕೊಲ್ಲದೆ, ಒಳಿತುಗಳನ್ನೇ ಕೂಡಿಸುತ್ತ ಕೂಡಿಸುತ್ತಾ ಹೋದವರು ಪರಮಹಂಸರು ಎಂಬುದು ದೇವನೂರು ಮಹಾದೇವ ಅವರ ಅಭಿಪ್ರಾಯವಾಗಿದೆ.

## ಗದ್ಯಪಾಠ–6.ವ್ಯಾಘ್ರಗೀತೆ

**1. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?**

ಶಾನುಭೋಗರು ಇರಸಾಲಿಗಾಗಿ ಚಿಕ್ಕನಾಯಕನ ಹಳ್ಳಿಗೆ ಹೋಗಿ, ಖಜಾನೆಗೆ ಹಣಕಟ್ಟಿ, ವಾಪಸ್ಸು ಹೊರಡುವ ವೇಳೆಗೆ ಸಂಜೆ ಆರುಗಂಟೆಯಾಗಿತ್ತು.ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿಹೋಗಬೇಕಾಗಿತ್ತು.ಮದಲಿಂಗನ ಕಣಿವೆ ಕಾಡುದಾರಿ, ಆದ್ದರಿಂದ ,ಸ್ವ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು' ಎಂದು ಯೋಚಿಸಿ ಬೇಗಬೇಗ ನಡೆದರು.

**2. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?**

ಯಾವ ನಾಡಿನಲ್ಲಿ ಶ್ರೀರಾಮನಂಥ ದೊರೆಗಳು ಆಳಿದರೋ, ಭಗವದ್ಗೀತೆಯಂಥ ಗ್ರಂಥ ಉದ್ಭವಿಸಿತೋ, ಆ ಭರತಭೂಮಿಯಲ್ಲಿ ಜನಿಸಿದ ಹುಲಿಗಳಾದರೂ ಅಧರ್ಮಕ್ಕೆಡೆಗೊಡುವುದುಂಟೇ?ಆದ್ದರಿಂದ ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಏಕೆಂದರೆ ಶತ್ರುಗಳಾದರೂ ಸರಿಯೆ, ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ. ಆದ್ದರಿಂದ ಹುಲಿಯು ಶಾನುಭೋಗರ ಬೆನ್ನ ಹಿಂದಿನಿಂದ ಹಾರಿ ಕೊಲ್ಲಲಿಲ್ಲ.

**3. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.**

ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರ ಗಾಡಿಯ ಎತ್ತುಗಳು ಮುಂದೆ ಹೋಗದೆ ನಿಂತವು. ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಗಂಟೆಯ ಸದ್ದನ್ನು, ರೈತರ ಮಾತನ್ನು ಕೇಳಿದ ಹುಲಿಯು ನಿರಾಶೆಯಿಂದ ಪಲಾಯನ ಮಾಡಿತು.ಅನಂತರ ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಕೈಲಾದಷ್ಟು ಗಲಭೆ ಮಾಡುತ್ತಾ, ತೆಂಗಿನಗರಿಯ ಪಂಜು ಹೊತ್ತಿಸಿಕೊಂಡು, ಜಾಗರೂಕತೆಯಿಂದ ಮುಂದೆ ಬಂದರು.ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು, ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

## ಗದ್ಯಪಾಠ–7.ವೃಕ್ಷಸಾಕ್ಷಿ

1. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?

ಧರ್ಮಬುದ್ಧಿಯ ದುಷ್ಟಬುದ್ಧಿಯನ್ನು ಕರೆದು, ಚಿನ್ನವನ್ನು ಹಂಚಿಕೊಳ್ಳೋಣ ಎಂದಾಗ ದುಷ್ಟಬುದ್ಧಿಯು ಪಾಪಬುದ್ಧಿಯವನಾಗಿ ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರಲು ಸಾಧ್ಯವಾಗುವುದಿಲ್ಲ. ಅಲ್ಲದೆ ಮತ್ತೆ ವ್ಯಾಪಾರಕ್ಕೆ ಹೋಗಬೇಕಾಗುತ್ತದೆ.ಆಕಾರಣದಿಂದ ನಿನಗೂ, ನನಗೂ ಖರ್ಚಿಗೆ ತಕ್ಕಷ್ಟು ಹೊನ್ನನ್ನು ತೆಗೆದುಕೊಂಡು, ಉಳಿದ ಹೊನ್ನೆಲ್ಲವನ್ನು ಇಲ್ಲಿಯೇ ಇಟ್ಟು ಬಿಡೋಣಎಂದು ಸಲಹೆಯಿತ್ತನು.

17. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?

ದುಷ್ಟಬುದ್ಧಿಯು ತನ್ನ ತಂದೆಯ ಕೈ ಹಿಡಿದು, ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿನಿನ್ನ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲವೂ ಪರಿಹಾರವಾಗಿ, ಹಲವು ಕಾಲ ಹಸಿಯದೆ ಊಟಮಾಡಿ ಬಾಳುವಂತಹ ಸಾಧನೆಯನ್ನು ಮಾಡಬಹುದು. ನೀನು ಆ ಮರದ ಪೊಟರೆಯಲ್ಲಿ ಅಡಗಿದ್ದು, ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡು ಹೋದನೆಂದು ಹೇಳು ಎಂದು ಹೇಳಿದನು.

18. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?

ಧರ್ಮಾಧಿಕರಣರು ವಟವೃಕ್ಷಕ್ಕೆ, ನೀನಾದರೋ ಯಕ್ಷಾದಿ ದಿವ್ಯ ದೇವತೆಗಳು ವಾಸ ಮಾಡುವಂತಹ ಮತ್ತು ಅವರ ಸೇವೆಯನ್ನು ಮಾಡುವಂತಹವನು ಆಗಿದ್ದೀಯಾ, ಆ ಕಾರಣದಿಂದ ನಿನ್ನನ್ನು ಸಾಕ್ಷಿ ಮಾಡಿ ಕೇಳುತ್ತಿದ್ದೇವೆ, ನೀನು ತಪ್ಪದೆ ಸಾಕ್ಷಿಯನ್ನು ನುಡಿ' ಎಂದು ಹೇಳಿದರು.

## ಗದ್ಯಪಾಠ–8.ಸುಕುಮಾರಸ್ವಾಮಿಯ ಕತೆ

1. ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು?

ಸುಕುಮಾರಸ್ವಾಮಿಯು ಅತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿಯಿಂದ ಕೂಡಿದ ಯುವಕನಾಗಿದ್ದನು.ಅವನಿಗೆ ಮೂವತ್ತೆರಡು ಲತಾಗೃಹಗಳಲ್ಲಿ ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಹಾವಭಾವ ವಿಲಾಸ ಸೌಂದರ್ಯಗಳಿಗೆ ಒಡತಿಯರಾದ ದೇವಲೋಕದ ಅಪ್ಸರೆಯರನ್ನು ಹೋಲುವಂತಹ ಮೂವತ್ತೆರಡು ಜನ ದಿವ್ಯರಾದ ಹೆಂಡತಿಯರು ಇದ್ದರು.ಅವನ ಮನೋರಂಜನೆಗಾಗಿ ಮೂವತ್ತೆರಡು ನೃತ್ಯಾಂಗನೆಯರು ನಾಟ್ಯವನ್ನು ಮಾಡುತ್ತಿದ್ದರು.ಅವನ ಬಳಿ ಮೂವತ್ತೆರಡು ಕೋಟಿ ಚಿನ್ನ, ಪಂಚರತ್ನಗಳು ಇದ್ದವು.ಇವುಗಳಿಂದ ಸುಕುಮಾರಸ್ವಾಮಿಯು ಸುಖಭೋಗಗಳನ್ನು ಅನುಭವಿಸುತ್ತಿದ್ದನು.

2. ಉಜ್ಜೇನಿ ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು?

ಒಂದು ದಿನ ರತ್ನದ್ವೀಪದಿಂದ ಬಂದ ವ್ಯಾಪಾರಿಯೊಬ್ಬನು ಲಕ್ಷ ದೀನಾರುಗಳ ಬೆಲೆಯುಳ್ಳ ಸರ್ವರತ್ನ ಕಂಬಳಿಗಳನ್ನು ತಂದು ಉಜ್ಜೇನಿ ಅರಸನಾದ ವೃಷಭಾಂಕನಿಗೆ ತೋರಿಸಿದಾಗ ಅವನು ಅದರ ಬೆಲೆಯನ್ನು ಕೇಳಿ ಕೊಳ್ಳಲಾಗದೆ ಹಿಂದಕ್ಕೆ ಕಳುಹಿಸಿದನು.ಆಗ ಆ ವ್ಯಾಪಾರಿಯು ಆ ರತ್ನಕಂಬಳಿಗಳನ್ನು ಯಶೋಭದ್ರೆಗೆ ತೋರಿಸಿದಾಗ ಅವಳು ಲಕ್ಷ ದೀನಾರುಗಳನ್ನು ಕೊಟ್ಟು ಕೊಂಡುಕೊಂಡು ಅದನ್ನು ಮೂವತ್ತೆರಡು ತುಂಡುಗಳಾಗಿ ಮಾಡಿ ತನ್ನ ಸೊಸೆಯಂದಿರಿಗೆ ಹಂಚಿಕೊಟ್ಟಳು.ಅವಳ ಸೊಸೆಯರು ಅವುಗಳನ್ನು ತಮ್ಮ ಪಾದರಕ್ಷೆಗಳಲ್ಲಿ ಹಾಕಿಕೊಂಡರು.ಇದನ್ನು ಕೇಳಿ ಉಜ್ಜೇನಿ ಅರಸ ವೃಷಭಾಂಕನು ಆಶ್ಚರ್ಯಗೊಂಡನು.

3. ಉಜ್ಜೇನಿ ಅರಸ ವೃಷಭಾಂಕನು ಸುಕುಮಾರಸ್ವಾಮಿಗೆ ಯಾವುದೋ ವ್ಯಾಧಿಯಿದೆ ಎಂದುಕೊಳ್ಳಲು ಕಾರಣವೇನು?

ಯಶೋಭದ್ರೆಯ ವೈಭವವನ್ನು ನೋಡಲು ಬಂದ ಉಜ್ಜೇನಿ ಅರಸ ವೃಷಭಾಂಕನನ್ನು ಹಾಗೂ ಸುಕುಮಾರಸ್ವಾಮಿಯನ್ನು ಸುಪ್ಪತ್ತಿಗೆಯ ಮೇಲೆ ಕೂರಿಸಿ, ಸ್ವಜನರು ಮತ್ತು ಪರಿಜನರು ಬಿಳಿಸಾಸಿವೆಕಾಳುಗಳುಳ್ಳ ಮಂತ್ರಾಕ್ಷತೆಯನ್ನು ಹಾಕಿದರು.ಆಗ ಅವು ಸುಕುಮಾರಸ್ವಾಮಿಯ ದೇಹದ ಹಿಂಭಾಗದ ಪೀಠಕ್ಕೆ ಒತ್ತಿದಂತಾಗಿ ಅವನು ತನ್ನ ದೇಹವನ್ನು ಅಲುಗಾಡಿಸುತ್ತಿದ್ದನು.ದೀಪದ ಬೆಳಕನ್ನು ನೋಡಿದಾಗ ಸುಕುಮಾರಸ್ವಾಮಿಯ ಕಣ್ಣಲ್ಲಿ ನೀರು ಸುರಿಯಲಾರಂಭಿಸಿತು. ಸುಕುಮಾರಸ್ವಾಮಿಯು ಊಟ ಮಾಡುವಾಗ ಅರ್ಧ ಆಹಾರವನ್ನು ನುಂಗುತ್ತ ಅರ್ಧ ಆಹಾರವನ್ನು ಉಗುಳುತ್ತಿದ್ದನು. ಇದನ್ನು ಕಂಡು ವೃಷಭಾಂಕನು ಸುಕುಮಾರಸ್ವಾಮಿಗೆ ಯಾವುದೋ ವ್ಯಾಧಿ ಇರಬೇಕೆಂದು ಅಂದುಕೊಂಡನು.

4. ಸುಕುಮಾರಸ್ವಾಮಿಯ ವ್ಯಾಧಿಗೆ ಮದ್ದನ್ನು ಏಕೆ ಮಾಡಿಸಿಲ್ಲ ಎಂದು ಅರಸನು ಕೇಳಿದಾಗ ತಾಯಿ ಯಶೋಭದ್ರೆ ಏನೆಂದು ಹೇಳಿದಳು?

ಸುಕುಮಾರಸ್ವಾಮಿಯ ವ್ಯಾಧಿಗೆ ಏಕೆ ಮದ್ದನ್ನು ಮಾಡಿಸಿಲ್ಲ ಎಂದು ಅರಸನು ಕೇಳಿದಾಗ ತಾಯಿ ಯಶೋಭದ್ರೆಯು, ಇವು ಇವನಿಗೆ ವ್ಯಾಧಿಯಲ್ಲ. ಮಂತ್ರಾಕ್ಷತೆಯ ಬಿಳಿಸಾಸಿವೆ ಕಾಳುಗಳು ಅವನ ಮೈಗೆ ಒತ್ತಿದಂತಾಗಿ ಅದನ್ನು ಸೈರಿಸಲಾರದೆ ತನ್ನ ಮೈಯನ್ನು ಅಲುಗಾಡಿಸುತ್ತಿದ್ದನು.ಅವನು ಯಾವಾಗಲೂ ಮಾಣಿಕ್ಯದ ಬೆಳಕಿನಲ್ಲೇ ಇದ್ದುದರಿಂದ ದೀಪದ ಬೆಳಕನ್ನು ನೋಡಿ ಅವನ ಕಣ್ಣಲ್ಲಿ ನೀರು ಬಂದಿತು.ಅವನು ಪ್ರತಿನಿತ್ಯ ಸುವಾಸಿತ ಅಕ್ಕಿಯ ಅನ್ನವನ್ನು ಊಟ ಮಾಡುವವನು.ಆದರೆ ಇಂದು ನೀವು ಬಂದ ಕಾರಣದಿಂದ ಸುವಾಸಿತ ಅಕ್ಕಿಯೊಡನೆ ಬೇರೆ ಅಕ್ಕಿಯನ್ನು ಬೆರೆಸಿ ಅನ್ನವನ್ನು ಮಾಡಿಸಲಾಗಿತ್ತು ಆದ್ದರಿಂದ ಆತನು ಸುವಾಸಿತ ಅಕ್ಕಿ ಅನ್ನವನ್ನು ಉಂಡು, ಬೇರೆ ಅಕ್ಕಿಯ ಅನ್ನವನ್ನು ಉಗುಳುತ್ತಿದ್ದನು ಎಂದು ಹೇಳಿದಳು.

## ಪದ್ಯಪಾಠ–1.ಸಂಕಲ್ಪಗೀತೆ

1. ಬರಡಾಗಿರುವ ಕಾಡುಮೇಡುಗಳನ್ನು ಹೇಗೆ ಮುಟ್ಟಬೇಕಿದೆ?

ಋತುಗಳ ರಾಜನಾದ ವಸಂತನು ಬರಡಾಗಿರುವ ಕಾಡುಗಳು ಹಚ್ಚಹಸಿರಿನಿಂದ ಕಂಗೊಳಿಸುವಂತೆ ಮುಟ್ಟಬೇಕಿದೆ.ವಸಂತನ ಆಗಮನದಿಂದ ಬರಡಾಗಿರುವ ಕಾಡಿನಲ್ಲಿ ಮರಗಿಡಗಳು ಚಿಗುರಿ ಪ್ರಕೃತಿಗೆ ನವಚೈತನ್ಯ ಮೂಡಬೇಕಿದೆ – ಎಂಬುದು ಕವಿಯ ಆಶಯವಾಗಿದೆ.

2. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?

ಭಾಷೆ, ಜಾತಿ, ಮತಧರ್ಮಗಳ ಭೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಸ್ನೇಹ, ಪ್ರೀತಿ, ನಂಬಿಕೆಯ ಮೂಲಕ ಮನುಜರ ನಡುವಿನ ಈ ಅಡ್ಡಗೋಡೆಗಳನ್ನು ಕೆಡವಬೇಕು.ಬದುಕಿನಲ್ಲಿ ಹೊಸ ಭರವಸೆಗಳನ್ನು ಮೂಡಿಸಿ ಮನುಜ ಮನುಜರ ನಡುವೆ ಸೇತುವೆಯಾಗಬೇಕಿದೆ.

3. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?

ಎಲ್ಲ ಮತಧರ್ಮಗಳು ದಾರಿ ತೋರಿಸುವ ದೀಪಗಳಾಗಿರುವುದರಿಂದ ಎಲ್ಲಾ ಮತಗಳನ್ನು ಪುರಸ್ಕರಿಸುವ ಎಚ್ಚರಿಕೆಯಲ್ಲಿ ನಾವು ಬದುಕಬೇಕು.ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ ಕನಸನ್ನು ಬಿತ್ತುತ್ತ ಬದುಕು ನಡೆಸಬೇಕು.

## ಪದ್ಯಪಾಠ–2.ಹಕ್ಕಿ ಹಾರುತಿದೆ ನೋಡಿದಿರಾ ?

1. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?

ತರತಮರಹಿತ ಸಮದೃಷ್ಟಿಯಿಂದ ಕೂಡಿದ ನೀಲಮೇಘಮಂಡಲ – ಸಮಬಣ್ಣದಂತೆ, ಅನಂತ ಆಕಾಶದಲ್ಲಿರುವ ಮುಗಿಲಿಗೆ ರೆಕ್ಕೆಗಳು ಮೂಡಿದಂತೆ, ನಕ್ಷತ್ರ ಮಾಲೆಯನ್ನು ಧರಿಸಿಕೊಂಡು, ಸೂರ್ಯ ಚಂದ್ರರನ್ನು ಕಣ್ಣಾಗಿಸಿಕೊಂಡು ಹಕ್ಕಿಯು ಹಾರಾಡುತ್ತಿರುವ ನೋಟ ಅದ್ಭುತವಾದುದು ಎಂದು ಕವಿಗಳು ವರ್ಣಿಸುತ್ತಾರೆ.

2. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?

ಹಕ್ಕಿಯು (ಕಾಲಪಕ್ಷಿಯು) ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಪರಿವರ್ತನೆಗೆ / ಪ್ರಗತಿಗೆ ಕಾರಣವಾಗಿದೆ. ಹಕ್ಕಿಯು (ಕಾಲಪಕ್ಷಿಯು) ತನ್ನ ಹಗಲು ರಾತ್ರಿಗಳೆಂಬ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಹೊಸಗಾಲದ ಹಸುಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂದು ಕವಿಗಳು ವರ್ಣಿಸುತ್ತಾರೆ.

## ಪದ್ಯಪಾಠ–3.ಹಲಗಲಿ ಬೇಡರು

1. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?

ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶವನ್ನು ನೀಡಿತು ಈ ಆದೇಶವನ್ನು ವಿರೋಧಿಸಿ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ಇದ್ದದ್ದು ಹಲಗಲಿಯ ಬೇಡರು ದಂಗೆ ಏಳಲು ಕಾರಣವಾಯಿತು.

2. ಹಲಗಲಿಗೆ ದಂಡು ಬರಲು ಕಾರಣವೇನು?

ಹಲಗಲಿಯ ಬೇಡರಾದ ಪೂಜೇರಿ ಹನುಮ, ಬ್ಯಾಡರ ಬಾಲ, ರಾಮ, ಜಡಗ ಇವರುಗಳು ಬ್ರಿಟಿಷ್ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದರು. ಈ ದಂಗೆಯನ್ನು ಹತ್ತಿಕ್ಕಲು ಬಂದ ಕಾರಕೂನನ ಕಪಾಳಕ್ಕೆ ಹೊಡೆದು ಸಿಪಾಯಿಗಳನ್ನು ಹೊಡೆದುರುಳಿಸಿದರು ಇದರಿಂದ ಕೋಪಗೊಂಡ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಯ ಬೇಡರ ದಂಗೆಯನ್ನು ಬಗ್ಗುಬಡಿಯಲು ದಂಡನ್ನು ಕರೆಯಿಸಿದರು.

3. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?

ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದಿತು.ಬ್ರಿಟಿಷರ ದಂಡಿನ ಸಿಪಾಯಿಗಳು ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದರು.ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು.ಬ್ರಿಟಿಷ್ ಸಿಪಾಯಿಗಳ ಗುಂಡಿಗೆ ಹೆದರಿ ಹಲಗಲಿಯ ಬೇಡರು ಗುಡ್ಡದ ಕಡೆಗೆ ಓಡಿ ತಲೆಮರೆಸಿಕೊಂಡರು.

4. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?

ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ.ಒಂದು ಘಟನೆಯನ್ನು ಆಧರಿಸಿ, ಕಥನಾತ್ಮಕವಾಗಿ ಕಟ್ಟಿದ ಹಾಡನ್ನು ಲಾವಣಿಗಳು ಎನ್ನುವರು.ಲಾವಣಿಗಳು ಸಾಮಾನ್ಯವಾಗಿ ವೀರತನ ಹಾಗೂ ಸಾಹಸವನ್ನು ವರ್ಣಿಸುವುದರಿಂದ ಅವುಗಳನ್ನು ವೀರಗೀತೆಗಳು ಎನ್ನುವರು.

## ಪದ್ಯಪಾಠ–4.ಕೌರವೇಂದ್ರನ ಕೊಂದೆ ನೀನು

1. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಉಭಯವನ್ನು ಬಿತ್ತಿದನು?

ಕರ್ಣ ನಿಮಗೂ ಯಾದವ, ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನಾಣೆ. ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ ಎಂದು ಹೇಳುತ್ತಾ ಕೃಷ್ಣನು ಕರ್ಣನ ಕಿವಿಯಲ್ಲಿ ಉಭಯವನ್ನು (ದ್ವಂದ್ವವನ್ನು) ಬಿತ್ತಿದನು.

2. ಕುಂತಿ, ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?

ಕುಂತಿಯು ಸೂರ್ಯನ ಅನುಗ್ರಹದಿಂದ ಕರ್ಣನನ್ನು, ಯಮಧರ್ಮನ ಅನುಗ್ರಹದಿಂದ ಧರ್ಮರಾಯನನ್ನು, ವಾಯುವಿನ ಅನುಗ್ರಹದಿಂದ ಭೀಮನನ್ನು, ಇಂದ್ರನ ಅನುಗ್ರಹದಿಂದ ಅರ್ಜುನನ್ನು ಪಡೆದಳು.ಮಾದ್ರಿಯು ಅಶ್ವಿನೀದೇವತೆಗಳ ಅನುಗ್ರಹದಿಂದ ನಕುಲ ಸಹದೇವರನ್ನು ಪಡೆದಳು.

3. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?

ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕೊರಳಸೆರೆ ಹಿಗ್ಗಿದವು, ಕಂಬನಿಯು ರಭಸದಿಂದ ಮುಂದೆ ಬಂದು, ಅಧಿಕವಾಗಿ ಕರ್ಣನು ದುಃಖಗೊಂಡು ಮನದೊಳಗೆ ಅಯ್ಯೋ, ದುರ್ಯೋಧನನಿಗೆ ಕೇಡಾದುದು ಎಂದನು. ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ; ಸುಮ್ಮನೆ ಹೋಗುವುದೆ ?ಕೃಷ್ಣನು ನನ್ನ ವಂಶದ ಜನ್ಮರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು ಎಂದು ಮನದಲ್ಲಿ ನೊಂದುಕೊಂಡನು.

4. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?

ಕರ್ಣನು ಕೃಷ್ಣನಿಗೆನಾನು ರಾಜ್ಯದ ಸಂಪತ್ತಿಗೆ ಸೋಲುವವನಲ್ಲ. ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಉತ್ಸಾಹದಲ್ಲಿ ಇದ್ದೆನು.ಆದರೆ ನೀನು ನನ್ನ ಜನ್ಮ ರಹಸ್ಯನ್ನು ತಿಳಿಸಿ ದುರ್ಯೋಧನನ್ನು ಕೊಂದೆಎಂದನು.

5. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?

ಕರ್ಣನು ಕೃಷ್ಣನನ್ನು ಕುರಿತು ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು ಮೃತ್ಯುದೇವತೆಗೆ ಭೋಜನ ಕೂಟ ಆಗುವುದು. ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರನ್ನು ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು.ಸೂರ್ಯನ ಮೇಲಾಣೆ ಪಾಂಡವರೈವರನ್ನು ನೋಯಿಸೆನು ಎಂದನು.

## ಪದ್ಯಪಾಠ–5.ಹಸುರು

1. ಕವಿಗೆ ಯಾವಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತಿದೆ?

ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರಿನಿಂದ ಕವಿಗೆ ಆಗಸವು ಹಾಗೂ ಆಗಸದಲ್ಲಿನ ಮುಗಿಲ ಬಣ್ಣವು ಹಸುರಾಗಿ ಕಾಣುತ್ತದೆ.ಗದ್ದೆಯ ಬಯಲಿನಲ್ಲಿ ಸೊಂಪಾಗಿ ಬೆಳೆದ ಬತ್ತದ ಪೈರುಗಳು ಹಸುರಾಗಿ ಕಾಣುತ್ತದೆ.ಮಲೆಯಲ್ಲಿ ಹಾಗೂ ಕಣಿವೆಯಲ್ಲಿ ದಟ್ಟವಾಗಿ ಬೆಳೆದ ಗಿಡಮರಗಳು ಹಸುರಾಗಿ ಕಾಣುತ್ತದೆ.ಪ್ರಕೃತಿಯೇ ಹಚ್ಚ ಹಸುರಿನಿಂದ ಕೂಡಿರುವುದರಿಂದ ಸಂಜೆಯ ಬಿಸಿಲೂ ಸಹ ಕವಿಗೆ ಹಸುರಾಗಿ ಕಾಣುತ್ತದೆ.

2. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?

ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರಿನಿಂದ ಕವಿಗೆ ಸಕಲೇಂದ್ರಿಯಗಳಲ್ಲೂ ಹಸುರಿನ ಭಾವ ಕಾಣುತ್ತದೆ.ಪ್ರಕೃತಿಯಲ್ಲಿ ಅರಳಿದ ಹೊಸಹೂವಿನ ಕಂಪನ್ನು ಹಸುರಿನ ಭಾವದಿಂದ ಮೂಗು ಆಘ್ರಾಣಿಸುತ್ತದೆ.ಎಲೆಗಳ ತಂಪು ಮೈಗೆ ಹಸುರು ಸ್ಪರ್ಷದ ಆನಂದವನ್ನು ನೀಡುತ್ತದೆ.ಮರಗಿಡಗಳ ಪೊದರಿನಿಂದ ಬರುವ ಹಕ್ಕಿಯ ಕೊರಲಿನ ಇಂಪು ಕವಿಗೆ ಹಸುರಿನ ಆನಂದವನ್ನು ನೀಡುತ್ತದೆ. ಹಸುರು ಇಳೆಯ ಉಸಿರಾಗಿದೆ. ಹೀಗೆ ಹಸುರಿನ ಶಾಂತತೆಯ ಭಾವ ಆನಂದದ ಅನುಭವವನ್ನು ನೀಡುತ್ತದೆ.

3. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?

ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರಿನಿಂದ ಕವಿಯಾತ್ಮವು ಪ್ರೇರಿತವಾಗಿದೆ.ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಎತ್ತ ನೋಡಿದರೂ ಹಸುರು ಕಂಗೊಳಿಸುತ್ತದೆ.ಅಲ್ಲಿ, ಇಲ್ಲಿ, ಎಲ್ಲೆಲ್ಲೂ ಹಾಗೂ ಕಡಲಿನಲ್ಲೂ ಪ್ರಕೃತಿಯು ಹಸುರಿನಿಂದ ಕೂಡಿ ಹಚ್ಚ ಹಸುರಾಗಿದೆ. ಕವಿಯ ಒಡಲಿನ ನೆತ್ತರು ಸಹ ಈ ಹಸುರಿನ ಭಾವದಿಂದ ಕೂಡಿ ಪುಳಕಗೊಳ್ಳುತ್ತದೆ.ಪ್ರಕೃತಿಯ ಹಚ್ಚ ಹಸುರಿನ ಹಿನ್ನೆಲೆಯಲ್ಲಿ ಕವಿಯಾತ್ಮವು ಹಸುರುಗಟ್ಟಿ ಹಸುರು ಭಾವವನ್ನು ಮೈದುಂಬಿಕೊಂಡು ಶಾಂತಿಯನ್ನು ಅನುಭವಿಸುತ್ತದೆ.

## ಪದ್ಯಪಾಠ-6.ಛಲಮನೆ ಮೆರೆವೆಂ

**1. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ?**

ದುರ್ಯೋಧನನ್ನು ನಂಬಿದ ಭೀಷ್ಮಾಚಾರ್ಯರಿಗೆ "ನಾನು ಭೂಮಿಗಾಗಿ ಹೋರಾಡುತ್ತಿಲ್ಲ ಆದರೆ ನನ್ನ ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿ. ನನ್ನ ಒಡಹುಟ್ಟಿದ ನೂರುಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು.ಸತ್ತವರು ಮತ್ತೆ ಹುಟ್ಟುವುದಿಲ್ಲವೇ?ಆದ್ದರಿಂದ ನಾನು ಪಾಂಡವರೊಡನೆ ಹೋರಾಡಿ ಛಲವನ್ನೇ ಮೆರೆಯುತ್ತೇನೆ ಎಂದನು.

**2. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ?**

ಭೀಷ್ಮಾಚಾರ್ಯರು ಪಾಂಡುವರೊಡನೆ ಸಂಧಿ ಮಾಡಿಕೋ ಎಂದು ಸಲಹೆ ಮಾಡಿದಾಗ ದುರ್ಯೋಧನನು ಅದಕ್ಕೆ ಒಪ್ಪುವುದಿಲ್ಲ. "ನಾನು ಭೂಮಿಗಾಗಿ ಹೋರಾಡುತ್ತಿಲ್ಲ ಆದರೆ ನನ್ನ ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿ. ನನ್ನ ಪ್ರಿಯ ಗೆಳೆಯನಾದ ಕರ್ಣನನ್ನು ಕೊಲ್ಲಿಸಿದ ಈ ಭೂಮಿಯೊಡನೆ ಮತ್ತೆ ನಣೂ ಶಃಬಖ್ವಲ್ವೆ ಮಾಡುವುದಿಲ್ಲ ಎನ್ನುತ್ತಾನೆ.

**3. ಪಾರ್ಥ-ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?**

ನನ್ನ ಪ್ರೀತಯ ಗೆಳೆಯನಾದ ಕರ್ಣನನ್ನು, ಪ್ರೀತಿಯ ತಮ್ಮನಾದ ದುಶ್ಯಾಸನನ್ನು ಕೊಂದ ಅರ್ಜುನ-ಭೀಮರು ಬದುಕಿರುವವರೆಗೂ, ನನ್ನ ದೇಹದಲ್ಲಿ ಪ್ರಾಣ ಇರುವವರೆಗೂ ನಾನು ಸಂಧಿಮಾಡಿಕೊಳ್ಳಲು ಒಪ್ಪುವುದಿಲ್ಲ. ಮೊದಲು ಆ ಇಬ್ಬರನ್ನು ಕೊಲ್ಲುವೆನು.ಬಳಿಕ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳುತ್ತೇನೆ ಎಂಬುದು ಪಾರ್ಥ-ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವಾಗಿದೆ.

## ಪದ್ಯಪಾಠ-7. ವೀರಲವ

**1. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.**

ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧ ಯಾಗವನ್ನು ಕೈಗೊಂಡು, ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು.ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು.

**2. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?**

ಯಜ್ಞಾಶ್ವದ ಹಣೆಯಲ್ಲದ್ದ ಪಟ್ಟಿಯಲ್ಲಿ ಭೂಮಂಡದಲ್ಲಿ ಕೌಸಲ್ಯೆಯ ಮಗನಾದ ರಾಮನು ಒಬ್ಬನೇ ವೀರನು.ಇದು ಅವನ ಯಜ್ಞ ಕುದುರೆ.ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರೂ ತಡೆಯಲಿ ಎಂದು ಬರೆಯಲಾಗಿತ್ತು.

**3. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.**

ಲವನು ಆಶ್ರಮವನ್ನು ಹೊಕ್ಕ ಯಜ್ಞಾಶ್ವವನ್ನು ತನ್ನ ಉತ್ತರೀಯದಿಂದ ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಹೆದರಿದ ಮುನಿಸುತರು, ಬೇಡಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯುವರು' ಎಂದು ಹೇಳಿದರು.ಆಗ ಲವನು ನಗುತ, ಬ್ರಾಹ್ಮಣರ ಮಕ್ಕಳು ಹೆದರಿದರೆ, ಜಾನಕಿಯ ಮಗನು ಇದಕ್ಕೆ ಹೆದರುವನೇ, ನೀವು ಹೋಗಿ ಎಂದು ಶೌರ್ಯದಿಂದ ಹೇಳಿದನು.

## ಪದ್ಯಪಾಠ-8. ಕೆಮ್ಮನೆ ಮೀಸೆವೊತ್ತನೆ

**1. ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?**

ಪರಶುರಾಮನು ತನ್ನ ಆಸ್ತಿಯನ್ನು ಬೇಡಿದವರಿಗೆ ಕೊಟ್ಟಿದ್ದನು.ಭೂಮಂಡಲವನ್ನು ಗುರುವಿಗೆ ಕೊಟ್ಟಿದ್ದನು.ಈಗ ಅವನ ಬಳಿ ಒಂದು ಅಡಕೆಯೂ ಇರಲಿಲ್ಲ, ಚಿನ್ನದ ಪಾತ್ರೆಯೂ ಇರಲಿಲ್ಲ. ಆದುದರಿಂದ ಪರಶುರಾಮನು ದ್ರೋಣನಿಗೆ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಟ್ಟನು.

**2. ದ್ರುಪದನು ದ್ರೋಣನಿಗೆ ಹೇಳಿದ ಮಾತುಗಳು ಯಾವುವು?**

ದ್ರುಪದನು ದ್ರೋಣನಿಗೆ, ನಿನ್ನನ್ನು ನಾನು ತಿಳಿಯೆನು. ನೀನು ಅದೆಲ್ಲಿ ನನ್ನನ್ನು ಕಂಡಿದ್ದಿಯೋ?ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಗೆಳೆತನವೋ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರಾಗುತ್ತಾರೆಯೇ? ಎಂಬ ಮಾತುಗಳಿಂದ ಮರ್ಮಭೇದಕವಾಗುವಂತೆ ತೀವ್ರವಾದ ನಾಚಿಕೆಗೆ ಈಡಾಗುವಂತೆ ಮಾಡಿದನು.

**3. ದ್ರುಪದನ ಮಾತಿಗೆ ದ್ರೋಣನ ಪ್ರತ್ಯುತ್ತರವೇನು?**

ದ್ರೋಣನು ದ್ರುಪದನನ್ನು ಕುರಿತು ಎಲೈ ನೀಚನೇ, 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು' ಎಂಬ ಗಾದೆಯಂತೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೇ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ನಾನು ಕೊಲ್ಲಲಾರೆನು. ಈ ಸಭಾ ಮಂಡಲದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿಪಡುವಂತೆ ಬಂಧಿಸದೆ ಬಿಟ್ಟರೆ ನಾನು ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ? ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ.

## ಲೇಖಕರ ಪರಿಚಯ : ಗದ್ಯ ಭಾಗ

ಲೇಖಕರ ಪರಿಚಯ: ಸಾರಾ ಅಬೂಬಕ್ಕರ್

* ಜನನ: 30 ಜೂನ್ 1936 ಸ್ಥಳ: ಕಾಸರಗೋಡು
* ಪ್ರಮುಖ ಕೃತಿಗಳು: ಚಪ್ಪಲಿಗಳು, ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ಮೊದಲಾದುವು
* ಪ್ರಶಸ್ತಿಗಳು: ನೃಪತುಂಗ ಪ್ರಶಸ್ತಿ

ಲೇಖಕರ ಪರಿಚಯ: ಪು. ತಿ. ನರಸಿಂಹಾಚಾರ್

* ಪೂರ್ಣ ಹೆಸರು: ಪುರೋಹಿತ ತಿರುನಾರಾಯಣಯ್ಯಂಗಾರ್ಯ

ಲೇಖಕರ ಪರಿಚಯ: ನರಸಿಂಹಾಚಾರ್ಯ

* ಜನನ: ಕ್ರಿ. ಶ. 1905 ಸ್ಥಳ: ಮಂಡ್ಯ ಜಿಲ್ಲೆಯ ಮೇಲುಕೋಟೆ
* ಪ್ರಮುಖ ಕೃತಿಗಳು :ಶಬರಿ, ಅಹಲ್ಯೆ, ಮೊದಲಾದವು.
* ಪ್ರಶಸ್ತಿಗಳು: ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಶ್ರೀ ಹರಿಚರಿತೆ' ಕೃತಿಗೆ ಕರ್ನಾಟಕ ಸರ್ಕಾರದಿಂದ 'ಪಂಪ ಪ್ರಶಸ್ತಿ'.

ಲೇಖಕರ ಪರಿಚಯ: ವಿ.ಕೃ.ಗೋಕಾಕ್

* ಪೂರ್ಣ ಹೆಸರು: ವಿನಾಯಕ ಕೃಷ್ಣ ಗೋಕಾಕ್
* ಜನನ: ಕ್ರಿ. ಶ. 1909 ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ
* ಪ್ರಮುಖ ಕೃತಿಗಳು: ಜೀವನಪಾಠಗಳು, ಭಾರತ ಸಿಂಧು ರಶ್ಮಿ
* ಪ್ರಶಸ್ತಿಗಳು: ಪದ್ಮಶ್ರೀ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಾಕ್ಟರೇಟ್ ಪದವಿ.

ಲೇಖಕರ ಪರಿಚಯ: ಡಿ.ಎಸ್.ಜಯಪ್ಪಗೌಡ

ಜನನ: 1947 ಸ್ಥಳ: ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿಯಲ್ಲಿ

ಪೂರ್ಣ ಹೆಸರು: ದಾರದಹಳ್ಳಿ ಸುಬ್ಬೇಗೌಡ ಜಯಪ್ಪಗೌಡ.

ಪ್ರಮುಖ ಕೃತಿಗಳೆಂದರೆ: 'ಕರ್ನಾಟಕದ ಕಡಲಾಚೆಯ ಸಂಪರ್ಕಗಳು', 'ದಿವಾನ್ ಸರ್.ಎಂ.ವಿಶ್ವೇಶ್ವರಯ್ಯನವರ ಕಾರ್ಯ ಸಾಧನೆಗಳು'

ಪ್ರಶಸ್ತಿಗಳು: ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಧಾರವಾಡ ಕರ್ನಾಟಕ ಸಂಘದ ಸಂಶೋಧನಾ ಬಹುಮಾನ ಲಭಿಸಿದೆ.

ಆನಂದ್ ಗುರು ಅಂಗೊಂಡಹಳ್ಳಿ

## ಲೇಖಕರ ಪರಿಚಯ: ದೇವನೂರ ಮಹಾದೇವ

ಜನನ: ಕ್ರಿ.ಶ. 1949 ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರಿನಲ್ಲಿ

ಪ್ರಮುಖ ಕೃತಿಗಳು: ಎದೆಗೆ ಬಿದ್ದಅಕ್ಷರ, ಕುಸುಮಬಾಲೆ, ದ್ಯಾವನೂರು, ಒಡಲಾಳ

ಪ್ರಶಸ್ತಿಗಳು: 'ಕುಸುಮಬಾಲೆ' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

## ಲೇಖಕರ ಪರಿಚಯ: ಎ.ಎನ್.ಮೂರ್ತಿರಾವ್

* ಪೂರ್ಣ ಹೆಸರು; ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾವ್
* ಜನನ: ಕ್ರಿ. ಶ. 1900 ರಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜ ಪೇಟೆ ತಾಲೂಕಿನ ಅಕ್ಕಿಹೆಬ್ಬಾಳು ಗ್ರಾಮದಲ್ಲಿ
* ಪ್ರಮುಖ ಕೃತಿಗಳು: ಸಮಗ್ರ ಲಲಿತಪ್ರಬಂಧಗಳು, ದೇವರು, ಹಗಲುಗನಸು, ಅಲೆಯುವಮನ, ಚಂಡಮಾರುತ, ಮಿನುಗು–ಮಿಂಚು
* ಪ್ರಶಸ್ತಿಗಳು: ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾಲಯದ ಗೌರವ ಡಿ.ಲಿಟ್ ಪದವಿ

## ಲೇಖಕರ ಪರಿಚಯ: ದುರ್ಗಸಿಂಹ

* ಜನನ: ಕ್ರಿ. ಶ. ಸು. 1031 ರಲ್ಲಿ ಕಿಸುಕಾಡು ನಾಡಿನ ಸಯ್ಯಡಿಯಲ್ಲಿ
* ಒಂದನೆಯ ಜಗದೇಕಮಲ್ಲನ ಆಸ್ಥಾನದಲ್ಲಿ ದಂಡನಾಯಕನೂ ಸಂಧಿವಿಗ್ರಹಿಯೂ ಆಗಿದ್ದನು.
* ಈತ ಸಯ್ಯಡಿಯಲ್ಲಿ ಹಲವಾರು ಹರಿಹರ ಭವನಗಳನ್ನು ನಿರ್ಮಿಸಿದ್ದಾನೆ.
* ಕೃತಿ: 'ಕರ್ಣಾಟಕ ಪಂಚತಂತ್ರ'.

## ಲೇಖಕರ ಪರಿಚಯ: ಶಿವಕೋಟ್ಯಾಚಾರ್ಯ

* ಶಿವಕೋಟ್ಯಾಚಾರ್ಯ ಕನ್ನಡದ ಪ್ರಥಮ ಗದ್ಯಕೃತಿ 'ವಡ್ಡಾರಾಧನೆ'ಯ ಕರ್ತೃ.
* ಇವನ ಕಾಲ:– ಕ್ರಿ. ಶ. ಸುಮಾರು 10 ನೆಯ ಶತಮಾನ.
* ಸ್ಥಳ:– ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಕೋಗಳಿ ನಾಡು.
* ಜೈನ ಧಾರ್ಮಿಕ ಕಥೆಗಳ ಸಂಗ್ರಹವಾದ ವಡ್ಡಾರಾಧನೆಯಲ್ಲಿ 19 ಕಥೆಗಳಿವೆ.

## ಕವಿ ಪರಿಚಯ : ಜಿ.ಎಸ್.ಶಿವರುದ್ರಪ್ಪ

* ಇವರು ಕ್ರಿ.ಶ. 1926 ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರು.
* ಪ್ರಮುಖ ಕೃತಿಗಳು; 'ಸಾಮಗಾನ', 'ಚೆಲುವು–ಒಲವು' ಇತ್ಯಾದಿ.
* ಪ್ರಶಸ್ತಿಗಳು: ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ನಾಡೋಜ', 'ರಾಷ್ಟ್ರಕವಿ', 'ಗೌರವ ಡಿ.ಲಿಟ್' ಪ್ರಶಸ್ತಿ.

## ಕವಿ ಪರಿಚಯ: ದ.ರಾಬೇಂದ್ರೆ

* ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದವರು.
* ಇವರು ಕ್ರಿ. ಶ. 1896 ರಲ್ಲಿ ಧಾರವಾಡದಲ್ಲಿ ಜನಿಸಿದರು.
* ಇವರು ಗರಿ, ನಾಕುತಂತಿ, ನಾದಲೀಲೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.
* ಇವರಿಗೆ ಪದ್ಮಶ್ರೀ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳು ಲಭಿಸಿವೆ.

## ಕವಿ ಪರಿಚಯ: ಕುಮಾರವ್ಯಾಸ

* ನಿಜನಾಮ: ಗದುಗಿನ ನಾರಣಪ್ಪನು
* ಈತನು ಕ್ರಿ. ಶ. ಸುಮಾರು 1430 ರಲ್ಲಿ ಗದಗ ಪ್ರಾಂತ್ಯದ ಕೋಳಿವಾಡದಲ್ಲಿ ಜನಿಸಿದನು.
* ಕರ್ನಾಟ ಭಾರತ ಕಥಾ ಮಂಜರಿ ಮತ್ತು ಐರಾವತ ಎಂಬ ಕೃತಿಗಳನ್ನು ರಚಿಸಿದ್ದಾನೆ.
* ಈತನಿಗಿದ್ದ ಬಿರುದು: ರೂಪಕ ಸಾಮ್ರಾಜ್ಯ ಚಕ್ರವರ್ತಿ.

## ಕವಿ ಪರಿಚಯ : ಕುವೆಂಪು

* ಪೂರ್ಣ ಹೆಸರು: ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ.
* ಜನನ: ಜನನ 1904 ಡಿಸೆಂಬರ್ 29 ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸಮೀಪದ ಕುಪ್ಪಳಿಯಲ್ಲಿ.
* ಪ್ರಮುಖ ಕೃತಿಗಳು: ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು – ಕಾದಂಬರಿಗಳು.ಜಲಗಾರ, ಯಮನ ಸೋಲು, ಬೆರಳ್ಗೆ ಕೊರಳ್ – ನಾಟಕಗಳು, ನೆನಪಿನ ದೋಣಿಯಲ್ಲಿ – ಆತ್ಮಕಥನ
* ಲಭಿಸಿರುವ ಪ್ರಶಸ್ತಿಗಳು: ಕೇಂದ್ರ ಸಾಹಿತ್ಯ ಅಕಾಡೆಮಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ, ರಾಷ್ಟ್ರಕವಿ ಬಿರುದು, ಪಂಪ ಪ್ರಶಸ್ತಿ, ಪದ್ಮವಿಭೂಷಣ ಪ್ರಶಸ್ತಿ ಗೌರವ ಡಾಕ್ಟರೇಟ್, ಕರ್ನಾಟಕ ರತ್ನ ಪ್ರಶಸ್ತಿ ಮುಂತಾದ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ

## ಕವಿ ಪರಿಚಯ : ರನ್ನ

* ರನ್ನ ಕ್ರಿ. ಶ. ಸುಮಾರು 949 ರಲ್ಲಿ ಬಾಗಲಕೋಟೆ ಜಿಲ್ಲೆಯ ಮುದುವೊಳಲು ಎಂಬ ಗ್ರಾಮದಲ್ಲಿ ಜನಿಸಿದನು.
* ಇವನ ತಂದೆ ಜಿನವಲ್ಲಭ, ತಾಯಿ ಅಬ್ಬಲಬ್ಬೆ. ಈತನು ಚಾಲುಕ್ಯ ದೊರೆಯಾದ ತೈಲಪನ ಆಸ್ಥಾನದಲ್ಲಿದ್ದನು.
* ಕೃತಿಗಳು: 'ಸಾಹಸ ಭೀಮ ವಿಜಯಂ' (ಗದಾಯುದ್ಧ), 'ಅಜಿತ ತೀರ್ಥಂಕರ ಪುರಾಣತಿಲಕಂ', 'ಪರಶುರಾಮಚರಿತಂ', 'ಚಕ್ರೇಶ್ವರಚರಿತಂ'
* ಇವನಿಗೆ ತೈಲಪನು 'ಕವಿಚಕ್ರವರ್ತಿ' ಎಂಬ ಬಿರುದನ್ನು ಕೊಟ್ಟನು. ಈತನು ಕನ್ನಡದ ರತ್ನತ್ರಯರಲ್ಲಿ ಒಬ್ಬನು.

## ಕವಿ ಪರಿಚಯ : ಲಕ್ಷ್ಮೀಶ

* ಕ್ರಿ. ಶ. ಸುಮಾರು 1550 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರಿನಲ್ಲಿ ಜನಿಸಿದನು.
* ಇವನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇದ್ದವು.
* ಇವನು 'ಜೈಮಿನಿ ಭಾರತ' ಎಂಬ ಕಾವ್ಯವನ್ನು ರಚಿಸಿದ್ದಾನೆ.
* ಈತನಿಗೆ ಉಪಮಾಲೋಲ, ಕರ್ಣಾಟ ಕವಿಚೂತವನಚೈತ್ರ ಎಂಬ ಬಿರುದುಗಳನ್ನು ಹೊಂದಿದ್ದನು.

## ಕವಿ ಪರಿಚಯ : ಪಂಪ

* ಪಂಪನು ವೆಂಗಿ ಮಂಡಲದ ವೆಂಗಿಪಳು ಎಂಬ ಅಗ್ರಹಾರದವನು. * ಈತನ ಕಾಲ: ಕ್ರಿ.ಶ. 941.
* ಈತನು ಚಾಲುಕ್ಯರ ಅರಿಕೇಸರಿಯ ಆಸ್ಥಾನಕವಿಯಾಗಿದ್ದನು. * ಕನ್ನಡದ ರತ್ನತ್ರಯರಲ್ಲಿ ಈತನೂ ಒಬ್ಬ.
* ಈತನ ಎರಡು ಕೃತಿಗಳು: ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯಂ.
* ವಿಕ್ರಮಾರ್ಜುನ ವಿಜಯ ಕಾವ್ಯಕ್ಕೆ ಪಂಪಭಾರತ ಎಂಬ ಮತ್ತೊಂದು ಹೆಸರಿದೆ.
* ಈತನಿಗಿದ್ದ ಬಿರುದುಗಳು: ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾಗುಣಾರ್ಣವ.

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

### ಗದ್ಯಪಾಠ–1. ಯುದ್ಧ

1. "ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ"

ಆಯ್ಕೆ: ಈ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ರಚಿಸಿರುವ 'ಚಪ್ಪಲಿಗಳು' ಕವನ ಸಂಕಲನದಿಂದ ಆರಿಸಲಾದ 'ಯುದ್ಧ'ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಡಾಕ್ಟರ್ ರಾಹಿಲನು ಶತ್ರು ಸೈನಿಕರ ದಾಳಿಯಿಂದ ಗಾಯಗೊಂಡು ತಪ್ಪಿಸಿಕೊಂಡು ಬರುವಾಗ ರಕ್ಷಣೆಪಡೆಯಲು ಹುಡುಕುತಿದ್ದಾಗಳಗ ದೊರೆತ ಒಚಿಟಿ ಮನೆಯನ್ನು ಕಂಡು ಈ ಮೇಲಿನಂತೆ ಹೇಳುತ್ತಾನೆ.

ಸ್ವಾರಸ್ಯ: ರಾಹಿಲನು ಶತ್ರುಗಳಿಂದ ತಪ್ಪಿಸಿಕೊಂಡು ಶತ್ರುದೇಶದ ಮನೆಗೇ ಬಂದು ರಕ್ಷಣೆಗಾಗಿ ಬೇಡುವುದು ಕಥೆಯಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

2. "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ"

ಆಯ್ಕೆ: ಈ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ರಚಿಸಿರುವ 'ಚಪ್ಪಲಿಗಳು' ಕವನ ಸಂಕಲನದಿಂದ ಆರಿಸಲಾದ 'ಯುದ್ಧ' ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಮುದುಕಿಯ ಸೊಸೆ ಹೆರಿಗೆ ನೋವಿನಿಂದ ನರಳುತಿದ್ದಾಳೆ ಯಾರಾದರೂ ವೈದ್ಯರನ್ನೋ, ಸೂಲಗಿತ್ತಿಯನ್ನೋ ಕರೆಯೋಣವೆಂದರೆ ಯುದ್ಧದ ಸಂದರ್ಭ ಬೇರೆ ಎಂದು ತನ್ನ ಅಳಲನ್ನು ರಾಹಿಲನ ಬಳಿ ಹೇಳಿಕೊಂಡಾಗ, ರಾಹಿಲನು ನಾನೇ ಪರೀಕ್ಷಿಸುತ್ತೇನೆ ಎಂದು ಈ ಮೇಲಿನಂತೆ ಹೇಳುತ್ತಾನೆ.

ಸ್ವಾರಸ್ಯ: ತನ್ನ ಕಾಲಿಗೆ ಪೆಟ್ಟಾಗಿದ್ದರೂ ಮಾನವೀಯತೆ ಮತ್ತು ತನ್ನ ವೃತ್ತಿಧರ್ಮ ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

3. "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?"

ಆಯ್ಕೆ: ಈ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ರಚಿಸಿರುವ 'ಚಪ್ಪಲಿಗಳು' ಕವನ ಸಂಕಲನದಿಂದ ಆರಿಸಲಾದ 'ಯುದ್ಧ' ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಸಹಾಯಕ್ಕಾಗಿ ಬಂದವನು ತಮ್ಮ ಕಡೆಯವನಲ್ಲ ಎಂಬ ಮುದುಕಿಯ ಸಂದೇಹ ನಿಜವಾಗಿತ್ತು. ತಮಗೂ, ತಮ್ಮ ದೇಶಕ್ಕೂ ದ್ರೋಹ ಬಗೆಯುವವನು ಎಂದು ಒಂದು ಕ್ಷಣ ಯೋಚಿಸಿ ರೋಷದಿಂದ ಬಾಗಿಲ ಬಳಿ ತೆರಳಿ ಮುಖ ನೋಡಿದ ಸಂದರ್ಭದಲ್ಲಿ ಈ ಮೇಲಿನಂತೆ ಹೇಳುತ್ತಾಳೆ.

ಸ್ವಾರಸ್ಯ: ಕಷ್ಟದಲ್ಲಿದ್ದ ಸಮಯದಲ್ಲಿಯೂ ತನ್ನ ಮಗನನ್ನು ನೆನೆಸಿಕೊಳ್ಳುವ 'ಪುತ್ರವಾತ್ಸಲ್ಯ' ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

4. "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!"

ಆಯ್ಕೆ: ಈ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ರಚಿಸಿರುವ 'ಚಪ್ಪಲಿಗಳು' ಕವನ ಸಂಕಲನದಿಂದ ಆರಿಸಲಾದ 'ಯುದ್ಧ' ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:ಸೈನಿಕರ ಉಡುಪಿನಲ್ಲಿದ್ದ ನಾಲ್ಕೈದು ಮಂದಿ ಅಜ್ಜಿಯ ಮನೆಗೆ ಬಂದು 'ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ' ಎಂದು ದರ್ಪದಿಂದ ಒಳನುಗ್ಗಿ ಹೆದರಿಸಿದಾಗ ನೋವಿನಲ್ಲಿದ್ದ ಮುದುಕಿಯು ಈ ಮೇಲಿನಂತೆ ಹೇಳುತ್ತಾಳೆ.

ಸ್ವಾರಸ್ಯ: ಕಷ್ಟದಲ್ಲಿದ್ದವರಿಗೆ ಸಹಾಯ ಮಾಡುವುದು ಮಾನವೀಯ ಧರ್ಮ ಎಂಬ ಮಾನವೀಯಗುಣ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

### ಗದ್ಯಪಾಠ–2. ಶಬರಿ

1. "ಆವುದೀ ಮರುಳು? ನಮ್ಮೆಡೆಗೆ ಬರುತಿಹುದು."

ಆಯ್ಕೆ :– ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ 'ಶಬರಿ'ಗೀತನಾಟಕದಿಂದ ಆಯ್ದ 'ಶಬರಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಸೀತಾಪಹರಣದ ಅನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ, ತಪಸ್ವಿ ದನುಪುತ್ರರ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸುವ ಸಂದರ್ಭದಲ್ಲಿ ಎದುರಿಗೆ ಬರುತ್ತಿದ್ದ ವೃದ್ಧೆಯನ್ನು (ಶಬರಿಯನ್ನು)
ಕಂಡು ರಾಮನು ಈ ಮಾತನ್ನು ಲಕ್ಷ್ಮಣನಿಗೆ ಹೇಳುತ್ತಾನೆ.

ಸ್ವಾರಸ್ಯ :– ಶ್ರೀರಾಮನ ಬರುವಿಕೆಗಾಗಿ ಕಾದು, ಕಾತರಿಸಿ,ಮರುಳಳಂತೆ ಆಗಿದ್ದ ವೃದ್ಧೆ ಶಬರಿಯನ್ನು ಕಂಡು ರಾಮಲಕ್ಷ್ಮಣರು
ಭಯಗೊಂಡದ್ದನ್ನು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ.

2. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?"

ಆಯ್ಕೆ :– ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ 'ಶಬರಿ' ಗೀತನಾಟಕದಿಂದ ಆಯ್ದ 'ಶಬರಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಮತಂಗಾಶ್ರಮವನ್ನು ಪ್ರವೇಶಿಸಿದ ಸಂದರ್ಭದಲ್ಲಿ "ಎಂದು ಕಾಣುವೆನು ಶ್ರೀರಾಮನನ್ನು, ಸನ್ಮಂಗಳ ಮೂರುತಿಯನ್ನು" ಎಂದು ಹಾಡುತ್ತ ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕಂಡು ರಾಮನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :– ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕುರಿತು ರಾಮನು ಏನೂ ಅರಿಯದವನಂತೆ"ದಾರಿಗರಾದ ನಮಗೆ ಇಲ್ಲಿ ಉಳಿದುಕೊಳ್ಳಲು ಸ್ಥಳಾವಕಾಶ ದೊರೆಯುವುದೇ?" ಎಂದು ಕೇಳುವುದು ಸ್ವಾರಸ್ಯಪೂರ್ಣವಾಗಿದೆ.

3. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ?"

ಆಯ್ಕೆ :– ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ 'ಶಬರಿ'ಗೀತನಾಟಕದಿಂದ ಆಯ್ದ 'ಶಬರಿ' ಎಂಬ
ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ರಾಮನು ಶಬರಿಯ ಅತಿಥಿ ಸತ್ಕಾರದ ಪರಿಯನ್ನು ಕುರಿತು "ನಿನ್ನ ಆತಿಥ್ಯದ ಸವಿಯು ಅಯೋಧ್ಯೆಯ ಅರಮನೆಯ ಆತಿಥ್ಯಕ್ಕಿಂತ ಮಿಗಿಲಾದುದು, ಇಷಂಂಟೆ ಪ್ರೀತಿಯನ್ನು ತೋರುವ ನಿನ್ನನ್ನು ತಾಯಿ ಎಂದು ತಿಳಿಯುವೆವು" ಎಂದ ಸಂದರ್ಭದಲ್ಲಿ ಶಬರಿಯು ಈ ಮಾತನ್ನು ಹೇಳುತ್ತಾಳೆ.

ಸ್ವಾರಸ್ಯ :– "ರಾಮನ ಪ್ರೀತಿಯ ಮಾತುಗಳು ಅವನ ರೂಪಿನಂತೆ ಮಧುರವಾದುದು" ಎಂದು ಹೇಳುವ ಮೂಲಕ ಶಬರಿಯು ರಾಮನ ವ್ಯಕ್ತಿತ್ವವನ್ನು ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾಳೆ.

4. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು."

ಆಯ್ಕೆ :– ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ 'ಶಬರಿ'ಗೀತನಾಟಕದಿಂದ ಆಯ್ದ 'ಶಬರಿ' ಎಂಬ
ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ರಾಮನ ದರ್ಶನ ಭಾಗ್ಯದಿಂದ ಸಂತೋಷಿತಳಾದ ಶಬರಿಯು ಮುಕ್ತಿಯನ್ನು ಪಡೆಯುವುದಕ್ಕಾಗಿ ಅಗ್ನಿ ಪ್ರವೇಶಿಸಿದ ಸಂದರ್ಭದಲ್ಲಿ ರಾಮನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :– "ಬೆಳಕಿಗೆ ಒಲಿದವರು ಉರಿವ ಬತ್ತಿಯ ಕಪ್ಪನ್ನು ನೋಡುವುದಿಲ್ಲ" ಎಂಬ ಮಾತು ಶಬರಿಯ ರಾಮಭಕ್ತಿಯ ಶ್ರೇಷ್ಟತೆಯನ್ನು ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತದೆ.

### ಗದ್ಯಪಾಠ–3. ಲಂಡನ್ ನಗರ

1. "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ"

ಆಯ್ಕೆ: ಈ ವಾಕ್ಯವನ್ನು ವಿ.ಕೃ.ಗೋಕಾಕ ಅವರ'ಸಮುದ್ರಾಚೆಯಿಂದ ಎಂಬ ಪ್ರವಾಸ ಕಥನದಿಂದ ಆರಿಸಲಾಗಿರುವ 'ಲಂಡನ್ ನಗರ' ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಲೇಖಕರು ಲಂಡನ್ ನಗರದ ಪ್ರವಾಸದ ಸಮಯದಲ್ಲಿ ಲಂಡನ್ನಿನ ಬೀದಿಬೀದಿಗಳಲ್ಲಿ ಇತಿಹಾಸ ಪ್ರಸಿದ್ಧವಾದ, ಕೈಯೆತ್ತಿ ನಿಂತಿರುವ ಪುಣ್ಯ ಪುರುಷರ ಪ್ರತಿಮೆಗಳನ್ನು ನೋಡಿ ಈ ಮೇಲಿನಂತೆ ಹೇಳುತ್ತಾರೆ.

ಸ್ವಾರಸ್ಯ: ದೇಶಕ್ಕಾಗಿ ದುಡಿದ ತಮ್ಮ ನಾಡಿನ ಪುಣ್ಯ ಪುರುಷರಿಗೆ ನೀಡಿದ ಗೌರವವು ಇಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ.

**2. "ಹೊತ್ತು ! ಹೊತ್ತು ! ಹೊತ್ತೇ ಹಣ"**

ಆಯ್ಕೆ:ಈ ವಾಕ್ಯವನ್ನು ವಿ.ಕೃ.ಗೋಕಾಕ ಅವರ 'ಸಮುದ್ರಾಚೆಯಿಂದ ಎಂಬ ಪ್ರವಾಸ ಕಥನದಿಂದ ಆರಿಸಲಾಗಿರುವ 'ಲಂಡನ್ ನಗರ' ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಲಂಡನ್ ನಗರದಲ್ಲಿ ಲಕ್ಷಾಂತರ ಜನ ಗಡಿಬಿಡಿಯಿಂದ ಓಡಾಡುತ್ತಿರುವುದನ್ನು ನೋಡಿದ ಲೇಕಕರು ಈ ಮೇಲಿನಂತೆ ಹೇಳುತ್ತಾರೆ.

ಸ್ವಾರಸ್ಯ:ಸಮಯಕ್ಕೆ ಬೆಲೆ ಇದೆ, ದೇಶದ ಏಳಿಗೆಗ ದುಡಿಮೆಯೇ ಮೂಲ, ಹಣ ಎಂಬ ಮಾತು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**3. "ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು?ಎಲ್ಲವೂ ಅಷ್ಟೆ! ಮಣ್ಣು! ಮಣ್ಣು!"**

ಆಯ್ಕೆ: ಈ ವಾಕ್ಯವನ್ನು ವಿ.ಕೃ.ಗೋಕಾಕ ಅವರ 'ಸಮುದ್ರಾಚೆಯಿಂದ ಎಂಬ ಪ್ರವಾಸ ಕಥನದಿಂದ ಆರಿಸಲಾಗಿರುವ 'ಲಂಡನ್ ನಗರ' ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: 'ವೆಸ್ಟ್ ಮಿನಿಸ್ಟರ್ ಅಬೆ' ಎಂಬ ಪ್ರಾಥನಾ ಮಂದಿರದ ಆವರಣದಲ್ಲಿ ಸ್ಥಾಪಿಸಲಾಗಿದ್ದ ಕವಿಗಳ, ಸಾರ್ವಭೌಮರ ನೆನಪಿಗಾಗಿ ಕಲ್ಲಿನ ಹಾಸುಗಳ ಮೇಲೆ ನಡೆದುಹೋಗಬೇಕಾದ ಸಂದರ್ಭದಲ್ಲಿ ಲೇಖಕರು ಈ ಮೇಲಿನಂತೆ ಹೇಳುತ್ತಾರೆ.

ಸ್ವಾರಸ್ಯ: ಸಾಧಕರು ನಮ್ಮಿಂದ ದೂರವಾದಾಗ ನಾವು ಕೊಡುವ ಗೌರವ ಮತ್ತು ಸತ್ತ ನಂತರ ಎಲ್ಲವೂ ಮಣ್ಣು ಎಂಬುದು ಸ್ವಾರಸ್ಯಕರವಾಗಿ ಮೂಡಿಬಂದಿದೆ.

**4. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ"**

ಆಯ್ಕೆ: ಈ ವಾಕ್ಯವನ್ನು ವಿ.ಕೃ.ಗೋಕಾಕ ಅವರ 'ಸಮುದ್ರಾಚೆಯಿಂದ ಎಂಬ ಪ್ರವಾಸ ಕಥನದಿಂದ ಆರಿಸಲಾಗಿರುವ 'ಲಂಡನ್ ನಗರ' ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:ಪ್ರವಾಸದ ಕೊನೆಯ ದಿನಗಳಲ್ಲಿ ಶೈಕ್ಷಣಿಕ ಮಹತ್ವವನ್ನು ತಿಳಿಸುವಾಗ ಪ್ರವಾಸವೂ ಶಿಕ್ಷಣದ ಅವಿಭಾಜ್ಯ ಅಂಗ ಎಂಬಂತೆ ಲೇಖಕರು ಈ ಮೇಲಿನಂತೆ ಹೇಳುತ್ತಾರೆ.

ಸ್ವಾರಸ್ಯ: ಮೂರ್ತಕಲ್ಪನೆಗಳನ್ನು ಕಟ್ಟಿಕೊಳ್ಳಲು, ಸಂಸ್ಕೃತಿಯನ್ನು ಅರಿಯಲು ಪ್ರವಾಸ ಮುಖ್ಯ, ದೇಶಸುತ್ತಬೇಕು–ಕೋಶ ಓದಬೇಕು ಎಂಬುದು ಸ್ವಾರಸ್ಯಕರವಾಗಿ ಮೂಡಿಬಂದಿದೆ.

## ಗದ್ಯಪಾಠ–4. ಭಾಗ್ಯಶಿಲ್ಪಿಗಳು

**1. "ಸಾಮಾಜಿಕ ಕಾನೂನುಗಳ ಹರಿಕಾರ."**

ಆಯ್ಕೆ:–ಈ ವಾಕ್ಯವನ್ನು ಶ್ರೀ ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :– ನಾಲ್ವಡಿ ಕೃಷ್ಣರಾಜ ಒಡೆಯರ ಸಾಧನೆಗಳನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ಈ ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ :– ರಾಜರು ಆಡಳಿತದಲ್ಲಿ ವಿಕೇಂದ್ರೀಕರಣ ಮತ್ತು ಅಭಿವೃದ್ಧಿಯ ಹರಿಕಾರರು ಸಾಧನೆಗೆ ಸಂದ ಗೌರವ ಎಂಬುದು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**2. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು."**

ಆಯ್ಕೆ :– ಈ ವಾಕ್ಯವನ್ನು ಶ್ರೀ ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ಮೊದಲೇ ಉತ್ತುಂಗ ಶಿಖರದಲ್ಲಿದ್ದ ವಿಶ್ವೇಶ್ವರಯ್ಯನವರು ಪುನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ತಾವೆ ಸ್ವತಃ ಅಳವಡಿಸಿದ್ದರಿಂದ ಅವರ ಸಾಧನೆಯನ್ನು ಉಲ್ಲೇಖಿಸುತ್ತಾ ಲೇಖಕರು ಈ ಮೇಲಿನ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ:– ವಿಶ್ವೇಶ್ವರಯ್ಯನವರ ಸಾಧನಾ ಶಕ್ತಿ, ಬುದ್ಧಿವಂತಿಕೆ, ಛಲ ಇಲ್ಲಿ ಸಾಔರಸ್ಯಪೂರ್ಣವಾಗಿ ಮೂಡಿಬಂದಿದೆ.

**3. "ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ."**

ಆಯ್ಕೆ:– ಈ ವಾಕ್ಯವನ್ನು ಶ್ರೀ ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ಅಭಿವೃದ್ಧಿಯ ಹರಿಕಾರರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಸಂಸ್ಥಾನಕ್ಕೆ ಮತ್ತಷ್ಟು ಮೆರಗುಕೊಟ್ಟ ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳನ್ನು ಹೊಗಳುವ ಸಂದರ್ಭದಲ್ಲಿ ಜನರು ಈ ಮೇಲಿನಂತೆ ಹೇಳುತ್ತಾರೆ.

ಸ್ವಾರಸ್ಯ:– ವಿಶ್ವೇಶ್ವರಯ್ಯನವರು ಮೈಸೂರಿನ ಅಭಿವೃದ್ಧಿಗೆ ಕಂಕಣಬದ್ಧರಾಗಿದ್ದರು ಎಂಬ ಜನರ ಶ್ಲಾಘನೀಯ ಮಾತುಗಳು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**4. "ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು."**

ಆಯ್ಕೆ:– ಈ ವಾಕ್ಯವನ್ನು ಶ್ರೀ ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ತ್ರೀಯರಿಗೂ ಸಮಾನವಾದ ಅವಕಾಶಗಳು ಇದ್ದವು ಎಂದು ಲೇಖಕರು ಈ ಮೇಲಿನಂತೆ ಹೇಳುತ್ತಾರೆ.

ಸ್ವಾರಸ್ಯ:– ಸ್ತ್ರೀಯರಿಗೂ ಸಹ ಸರಿಸಮಾನವಾದ ಸ್ಥಾನಮಾನಗಳು ಒಡೆಯರ ಕಾಲದಲ್ಲಿ ಇದ್ದವು ಎಂಬ ಸಾಮಾಜಿಕ ಸಮಾನತೆ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

## ಗದ್ಯಪಾಠ–5. ಎದೆಗೆ ಬಿದ್ದ ಅಕ್ಷರ

**1. "ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ?"**

ಆಯ್ಕೆ :– ಈ ವಾಕ್ಯವನ್ನು ಶ್ರೀ ದೇವನೂರು ಮಹಾದೇವ ಅವರು ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ :– ಗ್ರಾಮದೇವತೆ ಮಂಚಮ್ಮನಿಗೆ ಗುಡಿ ಕಟ್ಟಲು ಜನ ಪ್ರಾರಂಭಿಸಿದ ಸಂದರ್ಭದಲ್ಲಿ ಒಬ್ಬನ ಮೈ ಮೇಲೆ ಗ್ರಾಮದೇವತೆ ಮಂಚಮ್ಮ ಆವಾಹಿಸಿಕೊಂಡು ಬಂದು ಜನರಿಗೆ ಈ ಪ್ರಶ್ನೆಯನ್ನು ಕೇಳುತ್ತಾಳೆ.

ಸ್ವಾರಸ್ಯ :– ಸ್ವತಃ ತಮಗೆ ಮನೆ ಇಲ್ಲದಿದ್ದರೂ ದೇವರಿಗೆ ಮನೆ ಕಟ್ಟಲು ಹೊರಟ ಜನರ ಮುಗ್ಧತೆಯನ್ನು ಪ್ರಶ್ನಿಸುವ ಮೂಲಕ ಮಂಚಮ್ಮ ಕಾರುಣ್ಯ ಮತ್ತು ಸಮಾನತೆ ದೇವತೆಯಂತೆ ಕಾಣುವುದು ಈ ಮಾತಿನ ಸ್ವಾರಸ್ಯವಾಗಿದೆ.

ಆನಂದ್ ಗುರು ಅಂಗೊಂಡಹಳ್ಳಿ

2. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ."

ಆಯ್ಕೆ :– ಈ ವಾಕ್ಯವನ್ನು ಶ್ರೀ ದೇವನೂರು ಮಹಾದೇವ ಅವರು ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ :– ಗ್ರಾಮದೇವತೆ ಮಂಚಮ್ಮನಿಗೆ ಗುಡಿ ಕಟ್ಟಲು ಜನ ಪ್ರಾರಂಭಿಸಿದಾಗ, ಒಬ್ಬನ ಮೈ ಮೇಲೆ ಗ್ರಾಮದೇವತೆ ಮಂಚಮ್ಮ ಆವಾಹಿಸಿಕೊಂಡು ಬಂದು ಜನರೊಡನೆ ಮಾತನಾಡುವ ಸಂದರ್ಭದಲ್ಲಿ ಈ ಮಾತನ್ನು ಗ್ರಾಮದೇವತೆ ಮಂಚಮ್ಮ ಜನರಿಗೆ ಹೇಳುತ್ತಾಳೆ.

ಸ್ವಾರಸ್ಯ :– ತನ್ನ ಭಕ್ತರಿಗೆ ಮನೆ ಇಲ್ಲದ ಮೇಲೆ ನನಗೂ ಮನೆ ಬೇಡ ಎಂಬ ಮಂಚಮ್ಮ ದೇವತೆಯ ಮಾತು ಕಾರುಣ್ಯ ಮತ್ತು ಸಮಾನತೆಯ ದ್ಯೋತಕವಾಗಿರುವುದು ಈ ಮಾತಿನ ಸ್ವಾರಸ್ಯವಾಗಿದೆ.

3. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ."

ಆಯ್ಕೆ :– ಈ ವಾಕ್ಯವನ್ನು ಶ್ರೀ ದೇವನೂರು ಮಹಾದೇವ ಅವರು ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ :– ಲೇಖಕರಾದ ದೇವನೂರು ಮಹಾದೇವ ಅವರು ಡಾ. ಅಶೋಕ ಪೈ ಅವರ ಒಂದು ಸಂಶೋಧನಾ ಸತ್ಯಕತೆಯನ್ನು ಉದಾಹರಣೆ ನೀಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– "ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ, ಎಲ್ಲಾ ಜೀವಿಗಳಲ್ಲೂ ಕಂಪನ ಉಂಟುಮಾಡುತ್ತಿರುತ್ತದೆ" ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

## ಗದ್ಯಪಾಠ–6. ವ್ಯಾಘ್ರಗೀತೆ

1. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ"

ಆಯ್ಕೆ :– ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ 'ಸಮಗ್ರ ಲಲಿತ ಪ್ರಬಂಧಗಳು' ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :– ಮದಲಿಂಗನ ಕಣಿವೆಯ ಕಾಲುದಾರಿಯಲ್ಲಿ ಶಾನುಭೋಗರ ಬೆನ್ನ ಹಿಂದೆ ಬಂದ ಹುಲಿಯು 'ವೈರಿಯಾದರೂ ಸರಿಯೇ ಹಿಂದಿನಿಂದ ಹಾರಿ ಕೊಲ್ಲಬಾರದು' ಎಂಬ ತನ್ನ ಧರ್ಮವನ್ನು ನೆನೆದು, ಗೊಂದಲದಲ್ಲಿ ಇದ್ದ ಸಂದರ್ಭದಲ್ಲಿ ಪುಣ್ಯಕೋಟಿಯ ಈ ಮಾತನ್ನು ಲೇಖಕರು ನೆನಪಿಸಿಕೊಳ್ಳುತ್ತಾರೆ.

ಸ್ವಾರಸ್ಯ :– ತನ್ನನ್ನು ತಿನ್ನಲು ಆಹ್ವಾನ ಕೊಟ್ಟಾಗಲೂ ಹುಲಿರಾಯ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನದೆ ಪ್ರಾಣಬಿಟ್ಟು, ತನ್ನ ಆದರ್ಶವನ್ನು ಹಾಗೂ ಧರ್ಮಶ್ರದ್ಧೆಯನ್ನು ಮೆರೆಯಿತು ಎಂಬುದನ್ನು ಈ ವಾಕ್ಯದಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

2. "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು"

ಆಯ್ಕೆ :– ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ 'ಸಮಗ್ರ ಲಲಿತ ಪ್ರಬಂಧಗಳು' ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :– ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯಾಕ್ರಮಣದಿಂದ ತಪ್ಪಿಸಿಕೊಳ್ಳಲು, ಶಾನುಭೋಗರ ಖಿರ್ದಿ ಪುಸ್ತಕವನ್ನು ಹುಲಿಯ ಮುಖದ ಮೇಲೆ ಎಸೆದು, ಮರದ ಕಡೆಗೆ ಓಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– 'ಸಂಕಟ ಬಂದಾಗ ವೆಂಕಟರಮಣ' ಎಂಬಂತೆ ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಡು ಎಂದು ದೇವರನ್ನು ಪ್ರಾರ್ಥಿಸುವುದು ಬಹು ಸ್ವಾರಸ್ಯಪೂರ್ಣವಾಗಿದೆ.

3. "ನಾನು ಮುಖ ಮೇಲಾಗಿ ಬಿದ್ದಿದ್ದೇನೇ?"

ಆಯ್ಕೆ :– ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ 'ಸಮಗ್ರ ಲಲಿತ ಪ್ರಬಂಧಗಳು' ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :– ಶಾನುಭೋಗರು ಹುಲಿಯ ಆಕ್ರಮಣದಿಂದ ಹೆದರಿ, ಮರ ಹತ್ತಲು ಓಡುವಾಗ ಕಲ್ಲನ್ನು ಎಡವಿ ಬಿದ್ದು, ಪ್ರಜ್ಞೆ ತಪ್ಪಿದಾಗ, ಅದೇ ದಾರಿಯಲ್ಲಿ ಹೋಗುತ್ತಿದ್ದ ರೈತರು ಅವರ ಮುಖದ ಮೇಲೆ ನೀರೆರೆಚಿ ಎಚ್ಚರಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– "ನಾನು ಪ್ರಜ್ಞೆ ತಪ್ಪಿ ಬಿದ್ದಿದ್ದಾಗ ಹುಲಿಯು ಏಕೆ ಎಳೆದುಕೊಂಡು ಹೋಗಲಿಲ್ಲ?" ಎಂಬ ಸಮಸ್ಯೆಗೆ ಶಾನುಭೋಗರು ಈ ಪ್ರಶ್ನೆಯ ಮೂಲಕ ಉತ್ತರ ಕಂಡುಕೊಳ್ಳುವುದು ಇಲ್ಲಿಯ ಸ್ವಾರಸ್ಯವಾಗಿದೆ.

4. "ಹುಲಿ ಈಗ ಎಷ್ಟು ಹಸಿದಿರಬೇಕು"

ಆಯ್ಕೆ :– ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ 'ಸಮಗ್ರ ಲಲಿತ ಪ್ರಬಂಧಗಳು' ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :– ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಂಡ ಶಾನುಭೋಗರು ಜೀವ ಸಹಿತ ಮನೆಗೆ ಬಂದು ರಸದೂಟವನ್ನು ಮಾಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– ನಾನು ಹುಲಿಯಿಂದ ತಪ್ಪಿಸಿಕೊಂಡು ಬಂದು ರಸದೂಟವನ್ನು ಮಾಡುತ್ತಿದ್ದೇನೆ ಆದರೆ ನನ್ನನ್ನು ಕೊಲ್ಲಲು ಬಂದ ಹುಲಿಯು ಕೊಲ್ಲಲಾಗದೆ ಹಸಿವಿನಿಂದ ಬಳಲುತ್ತಿರಬಹುದು ಎಂದು ಶಾನುಭೋಗರು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

## ಗದ್ಯಪಾಠ–7. ವೃಕ್ಷಸಾಕ್ಷಿ

1. "ಪೊನ್ನನೆಲ್ಲಮಂ ನೀನೆ ಕೊಂಡೆ"

ಆಯ್ಕೆ :–ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ "ಕರ್ನಾಟಕ ಪಂಚತಂತ್ರ" ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ :– ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ಮೋಸಗೊಳಿಸಿ ಹೂತಿಟ್ಟ ಹೊನ್ನೆಲ್ಲವನ್ನು ತೆಗೆದುಕೊಂಡು ಗುಳಿಯನ್ನು ಮೊದಲಿನಂತೆ ಮುಚ್ಚಿ, ತಾನೇ ಧರ್ಮಬುದ್ಧಿಯ ಹತ್ತಿರ ಬಂದು "ಖರ್ಚಿಗೆ ಹೊನ್ನು ಇಲ್ಲ, ಸ್ವಲ್ಪ ಹೊನ್ನನ್ನು ತೆಗೆದುಕೊಳ್ಳೋಣ ಬಾ" ಣೆಂದು ಜೊತೆಯಲ್ಲಿ ಕರೆದುಕೊಂಡು ಹೋಗಿ, ಹೂತಿಟ್ಟ ಸ್ಥಳದಲ್ಲಿ ಹೊನ್ನನ್ನು ಕಾಣದೆ ಇದ್ದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :– ದುಷ್ಟಬುದ್ಧಿಯು ಇನ್ನುಮಾತನಾಡದಿದ್ದರೆ ಅಪವಾದವು ತನ್ನ ಮೇಲೆ ಬರುವುದೆಂದು, "ಹೊನ್ನೆಲ್ಲವನ್ನು ನೀನೆ ತೆಗೆದುಕೊಂಡಿದ್ದೀಯೆ" ಎಂದನು ಎಂದು ಕವಿ ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ.

2. "ಈತನ ಮಾತು ಅಶ್ರುತಪೂರ್ವಮ್"

ಆಯ್ಕೆ :– ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ "ಕರ್ನಾಟಕ ಪಂಚತಂತ್ರ" ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ :– ದುಷ್ಟಬುದ್ಧಿಯು "ಆ ಸ್ಥಳದಲ್ಲಿ ಹೊನ್ನನ್ನು ಇಡುವಾಗ ಈತ ಮತ್ತು ನಾನು ಅಲ್ಲದೆ ಬೇರೆ ಯಾರು ಮನುಷ್ಯರು ಇರಲಿಲ್ಲ. ಆ ಸ್ಥಳದಲ್ಲಿ ಇದ್ದ ಆಲದ ಮರವೇ ಸಾಕ್ಷಿ" ಎಂದ ಸಂದರ್ಭದಲ್ಲಿ ಧರ್ಮಾಧಿಕರಣರು ಆಶ್ಚರ್ಯಗೊಂಡು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– ಧರ್ಮಾಧಿಕರಣರು "ವೃಕ್ಷವು ಸಾಕ್ಷಿಯನ್ನು ಹೇಳುವುದುಎಂಬುದನ್ನು ಹಿಂದೆ ಎಂದೂ ಕೇಳಿಲ್ಲ"ಎಂದು ವಿಸ್ಮಯದಿಂದ ಹೇಳುವುದು ಬಹುಸ್ವಾರಸ್ಯಪೂರ್ಣವಾಗಿದೆ.

3. "ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ"

ಆಯ್ಕೆ :–ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ "ಕರ್ನಾಟಕ ಪಂಚತಂತ್ರ" ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ :– ಮರದ ಪೊಟರೆಯೊಳಗೆ ಅಡಗಿದ್ದ ದುಷ್ಟಬುದ್ಧಿಯ ತಂದೆ ಪ್ರೇಮಮತಿಯು ಮತಿಗೆಟ್ಟು, ಧರ್ಮದ ಹಾದಿಯನ್ನು ಬಿಟ್ಟು "ಧರ್ಮಬುದ್ಧಿಯೇ ಹೊನ್ನನ್ನು ತೆಗೆದುಕೊಂಡನೆಂದು" ನುಡಿದ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :– ಪಾಪಕರ್ಮನಾದ ದುಷ್ಟಬುದ್ದಿಯ ಮಗನ ಮಾತನ್ನು ಕೇಳಿ ತಂದೆಯು ತೊಂದರೆಗೆ ಒಳಗಾದನು ಎಂಬುದನ್ನು 'ಪ್ರಕೃತಿಯೇ ವಿಕೃತಿಯಾದರೆ ಮನುಷ್ಯನ ಆಯುಷ್ಯವು ಕಡಿಮೆಯಾಗುತ್ತದೆ' ಎಂಬ ಮಾತು ಸ್ವಾರಸ್ಯಪೂರ್ಣವಾಗಿ ವರ್ಣಿಸಲ್ಪಟ್ಟಿದೆ.

## ಗದ್ಯಪಾಠ–8. ಸುಕುಮಾರಸ್ವಾಮಿಯ ಕತೆ

1. "ರಿಸಿಯರ ರೂಪಂ ಕಾಣ್ಗುಮಂದೀತನುಂ ತಪಂಬಡುಗುಮ್"

ಆಯ್ಕೆ: ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರುವ 'ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ ಸುಕುಮಾರಸ್ವಾಮಿ ಕತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಸುಕುಮಾರಸ್ವಾಮಿಯ ಭವಿಷ್ಯವನ್ನು ಯಶೋಭದ್ರೆಗೆ ಹೇಳುವ ಸಂದರ್ಭದಲ್ಲಿ ಜೋಯಿಸು ಈ ಮಾತನ್ನು ಹೇಳುತ್ತಾರೆ. ಒಂದುದಿನ ಅರಮನೆಗೆ ಬಂದ ಒಬ್ಬ ಜೋಯಿಸರು " ಈ ಸುಕುಮಾರಸ್ವಾಮಿ ಯಾವಾಗ ಋಷಿಗಳ ರೂಪವನ್ನು ಕಾಣುವನೋ ಅಂದೇ ತಪಸ್ಸಿಗೆ ತೆರಳುವನು" ಎಂದು ಭವಿಷ್ಯವನ್ನು ಕೇಳಿದ ಯಶೋಭದ್ರೆಯು ತನ್ನ ಮನೆಗೆ ಋಷಿಗಳು ಪ್ರವೇಶಿಸದಂತೆ ಕಾವಲಿಟ್ಟಳು.

ಸ್ವಾರಸ್ಯ: ಇಲ್ಲಿ ವಿಧಿಯನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂಬುದು ಸತ್ಯವಾದರೂ ಸುಕುಮಾರಸ್ವಾಮಿಯು ವೈರಾಗ್ಯ ಹೊಂದುವುದನ್ನು ತಡೆಯಲು ಯಶೋಧರೆ ಮಾಡುವ ಪ್ರಯತ್ನ ಸ್ವಾರಸ್ಯವಾಗಿ ಮೂಡಿಬಂದಿದೆ.

2. "ನಮ್ಮನಾಳ್ವರುಮೊಳರೆ ಎಂದು ವಿಸ್ಮಯಂಬಟ್ಟು"

ಆಯ್ಕೆ: ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರುವ 'ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ ಸುಕುಮಾರಸ್ವಾಮಿ ಕತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ರಾಜ ವೃಷಭಾಂಕರನು ಸುಕುಮಾರಸ್ವಾಮಿಯ ಮನಗೆ ಬಂದು "ಸುಕುಮಾರನು ಎಲ್ಲಿದ್ದಾನೆ" ಎಂದು ಕೇಳಿದಾಗ ಅದಕ್ಕೆ ಉತ್ತರವಾಗಿ ಉಪ್ಪರಿಗೆಯ ಮೇಲೆ ಇದ್ದಾನೆ ಎಂದು ಹೇಳಿ ಸುಕುಮಾರನ ಬಳಿಗೆ ಬಂದು ರಾಜನು ಬಂದಿದ್ದಾನೆ ಎಂದು ಹೇಳಿದಾಗ ಆಗ ಸುಕುಮಾರನು ರಾಜನೆಂದರೆ ಯಾರು? ಎಂದು ಕೇಳುವ ಸಂದರ್ಭದಲ್ಲಿ ಸುಕುಮಾರಸ್ವಾಮಿಯು ಈ ಮೇಲಿನಂತೆ ಹೇಳುತ್ತಾನೆ.

ಸ್ವಾರಸ್ಯ: ಹಹೊರಗಿನ ಪ್ರಪಂಚದ ಅರಿವೇ ಇಲ್ಲದ ಸುಕುಮಾರನು ತನ್ನ ಮನೇ ಅರಮನೆ, ನಾವೇ ಆಳುವವರು ಎಂದು ಭಾವಿಸಿದ್ದ ಸುಕುಮಾರಸ್ವಾಮಿಯು ನಮ್ಮನ್ನು ಆಳುವವರೂ ಇದ್ದಾರೆಯೇ ಎಂದು ವಿಸ್ಮಯಪಡುವುದು ಸ್ವಾರಸ್ಯವಾಗಿ ಮೂಡಿಬಂದಿದೆ.

3. "ಅರ್ಧಾಹಾರಮಂ ನುಂಗುಗುಮರ್ಧಾಹಾರಮನುಗುಟ್ಟುಮದಂ ನೋಡಿ"

ಆಯ್ಕೆ: ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರುವ 'ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ ಸುಕುಮಾರಸ್ವಾಮಿ ಕತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ರಾಜನು ಸುಕುಮಾರಸ್ವಾಮಿಯೊಂದಿಗೆ ಊಟದ ತಟ್ಟೆಯ ಮುಂದೆ ಕುಳಿತುಕೊಂಡು ಹಲವು ವಿಧದ ಸವಿಯಾದ ಊಟವನ್ನು ಮಾಡುತ್ತಿದ್ದ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ಇಲ್ಲಿ ಸುಕುಮಾರಸ್ವಾಮಿಯ ವೈಭವ, ಆತನ ಸ್ಥಿತಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

4. "ಅವಂತಿ ಸುಕುಮಾರನೆಂದು ಪೆಸರನಿಟ್ಟಂ"

ಆಯ್ಕೆ: ಈ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರುವ 'ವಡ್ಡಾರಾಧನೆ' ಎಂಬ ಕೃತಿಯಿಂದ ಆರಿಸಲಾದ ಸುಕುಮಾರಸ್ವಾಮಿ ಕತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಸುಕುಮಾರನು ತಾಯಿಯ ಮೂಲಕ ಆತನ ವೈಭವ ಗುಣ–ನಡತೆಗಳನ್ನು ಅನುಭವಿಸುತ್ತಿದ್ದ ಸುಖ ಭೋಗಗಳು ಇಡೀ ಅರಸುತನದಲ್ಲಿ ಅನುಭವಿಸಿದ ಸುಖ–ಭೋಗಗಳಿಗೆ ಸಮವಾಗುವುದಿಲ್ಲ. ಆದುದರಿಂದ ಲೋಕದಲ್ಲಿ ಈತನೇ ಸುಖಿ ಎಂಬ ಸಂಧರ್ಭದಲ್ಲಿ ಈ ಮೇಲಿನ ಮಾತು ಬಂಧಿದೆ.

ಸ್ವಾರಸ್ಯ: ರಾಜನೇ ಸ್ವತಃ ಸುಕುಮಾರಸ್ವಾಮಿಯ ವೈಭವವನ್ನು ಮೆಚ್ಚಿ ಈತನ ವೈಭವದ ಮುಂದೆ ತನ್ನ ವೈಭವ ಏನೂ ಇಲ್ಲ ಎಂದು ಅವನಿಗೆ ಸುಕುಮಾರಸ್ವಾಮಿ ಎಂದು ಹೆಸರಿಟ್ಟಿರುವುದು ಸ್ವಾರಸ್ಯಕರವಾಗಿದೆ.

## ಪದ್ಯಪಾಠ : 1. ಸಂಕಲ್ಪ ಗೀತೆ

1. "ಪ್ರೀತಿಯ ಹಣತೆಯ ಹಚ್ಚೋಣ"

ಆಯ್ಕೆ :– ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ 'ಎದೆತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ :–ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– "ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದಇಜಂಷಂರಂಹಿತ ಸಮಾಜ ನಿರ್ಮಾಣ ಮಾಡಬಹುದು" ಎಂದು ಕವಿಗಳುಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

2. "ಮುಂಗಾರಿನ ಮಳೆಯಾಗೋಣ"

ಆಯ್ಕೆ :– ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ 'ಎದೆತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ :–ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– "ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಸಂಕಲ್ಪ ಕೈಗೊಳ್ಳುವುದರಿಂದ ನದೀಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು" ಎಂದು ಕವಿಗಳುಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

3. "ಹೊಸ ಭರವಸೆಗಳ ಕಟ್ಟೋಣ"

ಆಯ್ಕೆ :–ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ 'ಎದೆತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ :– ಕವಿಗಳು ಜೀವನದಲ್ಲಿ ಧನಾತ್ಮಕ ಮನೋಭಾವನೆಯ ದೃಢಸಂಕಲ್ಪವನ್ನು ಹೊಂದಿರಬೇಕು ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಕವಿ ಹೇಳುತ್ತಾರೆ.

ಆನಂದ ಗುರು ಅಂಗೊಂಡಹಳ್ಳಿ

ಸ್ವಾರಸ್ಯ :– ನಾವು ಹೊಸ ಭರವಸೆಗಳನ್ನು ಮೂಡಿಸುವ ಸಂಕಲ್ಪವನ್ನು ಕೈಗೊಳ್ಳುವುದರಿಂದ ಸಮಾಜದ ನೈತಿಕ ಅದಃಪತನವನ್ನು ತಡೆಯಬಹುದು ಎಂಬ ಕವಿಗಳ ಮಾತು ಸ್ವಾರಸ್ಯಪೂರ್ಣವಾಗಿದೆ.

**4. "ಹೊಸ ಎಚ್ಚರದೊಳು ಬದುಕೋಣ"**

ಆಯ್ಕೆ :– ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ 'ಎದೆತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ :– ಕವಿಗಳು ಜೀವನದಲ್ಲಿ ಧನಾತ್ಮಕ ಮನೋಭಾವನೆಯ ದೃಢಸಂಕಲ್ಪವನ್ನು ಹೊಂದಿರಬೇಕು ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಕವಿ ಹೇಳುತ್ತಾರೆ.

ಸ್ವಾರಸ್ಯ :– ಎಲ್ಲ ಮತಗಳ ಸಾಧನೆಯ ದಾರಿಗಳು ಒಂದೇ ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪವನ್ನು ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿ ನೆಲೆಸುವಂತೆ ಮಾಡಬಹುದು ಎಂದು ಕವಿ ಸ್ವಾರಸ್ಯಪೂರ್ಣವಾಗಿ ಹೇಳಿದ್ದಾರೆ.

## ಪದ್ಯಪಾಠ : 2. ಹಕ್ಕಿ ಹಾರುತಿದೆ ನೋಡಿದಿ

**1. "ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ"**

ಆಯ್ಕೆ :– ಈ ವಾಕ್ಯವನ್ನು 'ಅಂಬಿಕಾತನಯದತ್ತ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ. ರಾ. ಬೇಂದ್ರೆ ಅವರು ರಚಿಸಿರುವ 'ಗರಿ' ಕವನ ಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ತನ್ನ ಪಯಣದಲ್ಲಿ ಅನೇಕ ಸಣ್ಣಸಣ್ಣ ರಾಜಮನೆತನಗಳನ್ನು ಹಾಗೂ ದೊಡ್ಡದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ, ಬೆಳೆಯಿಸಿ, ಅವುಗಳ ಫಲಿತವನ್ನು ಕೊಯ್ಲು ಮಾಡಿದೆ ಎಂಬ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– ಕಾಲಪಕ್ಷಿಯು ಅನೇಕ ಸಾಮ್ರಾಜ್ಯದ ಏಳುಬೀಳುಗಳಿಗೆ ಸಾಕ್ಷಿಯಾಗಿದೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**2. "ಸಾರ್ವಭೌಮರ ನೆತ್ತಿಯ ಕುಕ್ಕಿ"**

ಆಯ್ಕೆ :– ಈ ವಾಕ್ಯವನ್ನು 'ಅಂಬಿಕಾತನಯದತ್ತ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ. ರಾ. ಬೇಂದ್ರೆ ಅವರು ರಚಿಸಿರುವ 'ಗರಿ' ಕವನ ಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂಬ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– ಕಾಲದ ಗತಿಯಲ್ಲಿ ವೈಭವದಿಂದ, ಅಹಂಕಾರದಿಂದ ಮೆರೆದ ಸಾರ್ವಭೌಮರೆಲ್ಲರೂ ನಾಮಾವಶೇಷವಾಗಿದ್ದಾರೆ. ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**3. ಮನ್ವಂತರಗಳ ಭಾಗ್ಯವ ತೆರೆಸಿ"**

ಆಯ್ಕೆ :– ಈ ವಾಕ್ಯವನ್ನು 'ಅಂಬಿಕಾತನಯದತ್ತ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ. ರಾ. ಬೇಂದ್ರೆ ಅವರು ರಚಿಸಿರುವ 'ಗರಿ' ಕವನ ಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಪರಿವರ್ತನೆಗೆ / ಪ್ರಗತಿಗೆ ಕಾರಣವಾಗಿದೆ ಎಂಬ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– ಕಾಲಪಕ್ಷಿಯು ಪ್ರಪಂಚದ ಹೊಸ ಪರಿವರ್ತನೆಗೆ / ಪ್ರಗತಿಗೆ ಕಾರಣೀಭೂತವಾಗಿದೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**4. "ಹೊಸಗಾಲದ ಹಸುಮಕ್ಕಳ ಹರಸಿ"**

ಆಯ್ಕೆ :– ಈ ವಾಕ್ಯವನ್ನು 'ಅಂಬಿಕಾತನಯದತ್ತ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ. ರಾ. ಬೇಂದ್ರೆ ಅವರು ರಚಿಸಿರುವ 'ಗರಿ' ಕವನ ಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಮುಂದಿನ ಜನಾಂಗದ ಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂಬ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– ಕಾಲಪಕ್ಷಿಯು ಯುಗಯುಗದಲ್ಲೂ ಜನರಿಗೆ ಚೈತನ್ಯವನ್ನು ತುಂಬಿ ಮುಂದಿನ ಜನಾಂಗವನ್ನು ಹರಸುತ್ತಿದೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

## ಪದ್ಯಪಾಠ : 3. ಹಲಗಲಿ ಬೇಡರು

**1. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"**

ಆಯ್ಕೆ :–ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿ ಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ
ಆಯ್ದ 'ಹಲಗಲಿಯ ಬೇಡರು' ಎಂಬ ಲಾವಣಿಯಿಂದ ಆರಿಸಲಾಗಿದೆ.

ಸಂದರ್ಭ :– "ಕ್ರಿ.ಶ. 1857 ರ ಪ್ರಥಮ ಸ್ವಾತಂತ್ರ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು" ಎಂಬ ಆದೇಶವನ್ನು ನೀಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ :– ಭಾರತೀಯರ ಮೇಲಿನ ಬ್ರಿಟಿಷರ ದರ್ಪ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**2. "ಜೀವ ಸತ್ತು ಹೋಗುವುದು ಗೊತ್ತ"**

ಆಯ್ಕೆ :– ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿ ಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ
ಆಯ್ದ 'ಹಲಗಲಿಯ ಬೇಡರು' ಎಂಬ ಲಾವಣಿಯಿಂದ ಆರಿಸಲಾಗಿದೆ.

ಸಂದರ್ಭ :– ಬ್ರಿಟಿಷರು ಆಜ್ಞೆಯನ್ನು ಹೊರಡಿಸಿ, ಜನರಿಂದ ಆಯುಧಗಳನ್ನು ಬಲವಂತವಾಗಿ ಕಿತ್ತುಕೊಳ್ಳಲು ಪ್ರಯತ್ನಿಸಿದಾಗ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ, ನೀಡಿದರೆ ತಾವು ಸತ್ತಂತೆ ಎಂದು ಹೇಳಿಕೊಂಡ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ :– ಹಲಗಲಿಯ ಬೇಡರು"ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದುದು ಎಂಬ ಭಾವನೆಯನ್ನು ಹೊಂದಿದ್ದರು" ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

ಆನಂದ್ ಗುರು ಅಂಗೊಂಡಹಳ್ಳಿ

## ಪದ್ಯಪಾಠ : 4. ಕೌರವೇಂದ್ರನ ಕೊಂದೆ ನೀನು

1. "ರವಿಸುತನ ಕಿವಿಯಲಿ ಬಿತ್ತಿದನು ಭಯವ"

ಆಯ್ಕೆ :– ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಮಹಾಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕವಿಯು ಹೇಳುತ್ತಾನೆ.

ಸ್ವಾರಸ್ಯ :– "ಕರ್ಣ ನಿಮ್ಮಲ್ಲಿ, ಯಾದವರು ಕೌರವರಲ್ಲಿ ಭೇದವಿಲ್ಲ. ಹೇಳುವುದಾದರೆ ವಂಶದಲ್ಲಿ ಮೊದಲೆರಡಿಲ್ಲ ನಿನ್ನಾಣೆ. ರಾಜ ನೀನು. ಮನದಲ್ಲಿ ಈ ಹಿಂದೆ ನಡೆದಿರುವ ಘಟನೆಯ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಉಭಯವನ್ನು (ದ್ವಂದ್ವವನ್ನು) ಬಿತ್ತಿದನು ಎಂದು ಕವಿಯು ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ.

2. "ಬಾಯ್ದಂಬುಲಕೆ ಕೈಯಾನುವರೆ"

ಆಯ್ಕೆ :– ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಮಹಾಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನುಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

ಸ್ವಾರಸ್ಯ :– "ಕರ್ಣ ನೀನು ಹಸ್ತಿನಾಪುರದ ರಾಜನಾದರೆ ನಿನಗೆ ಕೌರವರು ಮತ್ತು ಪಾಂಡವರು ಸೇವೆಯನ್ನು ಮಾಡುವರು ಅದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದು ಸರಿಯೇ" ಎಂದು ಕೃಷ್ಣನು ಹೇಳಿರುವುದು ಸ್ವಾರಸ್ಯಪೂರ್ಣವಾಗಿದೆ.

3. "ಮಾರಿಗೌತಣವಾಯ್ತು ನಾಳಿನ ಭಾರತವು"

ಆಯ್ಕೆ :–ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಮಹಾಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕರ್ಣನು ಕೃಷ್ಣನಿಗೆ ಹೇಳುತ್ತಾನೆ.

ಸ್ವಾರಸ್ಯ :– ಕರ್ಣನು ಮುಂದೆ ನಡೆಯುವ ಮಹಾಭಾರತ ಕುರುಕ್ಷೇತ್ರ ಯುದ್ಧದ ಭೀಕರತೆಯನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

4. "ಜೀಯ ಹಸಾದವೆಂಬುದು ಕಷ್ಟ"

ಆಯ್ಕೆ :–ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಮಹಾಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕೃಷ್ಣನು ಪಾಂಡವ ಮತ್ತು ಕೌರವರ ನಡುವೆ ಸಂಧಿ ಮಾಡಲು ಹೋಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಕೃಷ್ಣನು ಕರ್ಣನಿಗೆ ಮೇಲಿನಂತೆ ಹೇಳುತ್ತಾನೆ.

ಸ್ವಾರಸ್ಯ :– ಕರ್ಣ ನಿನ್ನ ಎಡಗಡೆ ಕೌರವರು, ಬಲಗಡೆ ಪಾಂಡವರು ಎದುರಿನಲ್ಲಿ ಮಾದ್ರ, ಮಾಗದ ಯಾದವಾದಿಗಳು ಇರುವಾಗ ನೀನು ಓಲಗದಲ್ಲಿ ವಿಲಾಸದಿಂದ ಮೆರೆಯುವುದನ್ನು ಬಿಟ್ಟು ನೀನು ಕೌರವನಿಗೆ ಜೀಯ, ಪ್ರಸಾದ ಎಂಬುದು ಕಷ್ಟವಾಗುವುದಿಲ್ಲವೇ ಎಂದು ಕೃಷ್ಣನು ಹೇಳುವ ಮಾತು ಸ್ವಾರಸ್ಯಪೂರ್ಣವಾಗಿದೆ.

## ಪದ್ಯಪಾಠ–5. ಹಸುರು

1. "ಹಸುರಾದುದು ಕವಿಯಾತ್ಮಂ"

ಆಯ್ಕೆ:–ಈ ವಾಕ್ಯವನ್ನು ಕುವೆಂಪು ಅವರ 'ಪಕ್ಷಿಕಾಶಿ' ಎಂಬ ಕವನ ಸಂಕಲನದಿಂದ ಆರಿಸಲಾಗಿರುವ 'ಹಸುರು' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:–ಪ್ರಕೃತಿಯಲ್ಲಿ ವ್ಯಾಪಿಸಿರುವ ಹಸುರಿನ ಬಗ್ಗೆ ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :– ನವರಾತ್ರಿಯ ಕಪ್ಪು ಕಡಲಿನಲ್ಲಿಯೂ ಹಸುರನ್ನು ಕಾಣುವ ಕುವೆಂಪುರವರ ಕವಿಯಾತ್ಮದ ರಸಸ್ವಾದನೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

2. "ಬೇರೆ ಬಣ್ಣವನೆ ಕಾಣೆ"

ಆಯ್ಕೆ :–ಈ ವಾಕ್ಯವನ್ನು ಕುವೆಂಪು ಅವರ 'ಪಕ್ಷಿಕಾಶಿ' ಎಂಬ ಕವನ ಸಂಕಲನದಿಂದ ಆರಿಸಲಾಗಿರುವ 'ಹಸುರು' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:–ಅಶ್ವೀಜ ಮಾಸದಲ್ಲಿ ಭತ್ತದ ಗದ್ದೆಗೆ ಮುತ್ತುವ ಹಸಿರು ಗಿಳಿಗಳು, ಹಸುರು ಬಣ್ಣದ ನೋಟ, ಅದರ ಪಕ್ಕದಲ್ಲೇ ಕಾಡಂಚಿನಲ್ಲಿರುವ ಫಲಭರಿತ ಅಡಕೆಯ ತೋಟ, ಹಸುರಿನ ಮಕ್ಕಮಲ್ಲಿನಂತೆ ಹಾಸಿದ ಜಮಖಾನೆಯೆಂಬಂತೆ ಹಸುರಿನ ಸಿರಿಯನ್ನು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ:– ಭೂಮಿಯೆಲ್ಲಾ ಭಾಗಗಳಲ್ಲಿಯೂ ಹಸುರು ಪಸರಿಸಿರುವುದನ್ನು ನೋಡಿ, ಈ ಭೂಮಿಯ ಮೇಲೆ ಬೇರೆ ಬಣ್ಣವನ್ನೇ ಕಾಣಲಾಗದು ಎಂದು ಹಸುರಿನ ಮಹತ್ವವನ್ನು ಸಾರಿರುವುದು ಸ್ವಾರಸ್ಯಪೂರ್ಣವಾಗಿದೆ.

3. "ಹಸುರತ್ತಲ್, ಹಸಲ್ತ್ತಲ್, ಹಸುರೆತ್ತಲ್"

ಆಯ್ಕೆ :–ಈ ವಾಕ್ಯವನ್ನು ಕುವೆಂಪು ಅವರ 'ಪಕ್ಷಿಕಾಶಿ' ಎಂಬ ಕವನ ಸಂಕಲನದಿಂದ ಆರಿಸಲಾಗಿರುವ 'ಹಸುರು' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ಅತ್ತ–ಇತ್ತ–ಎತ್ತಲೂ ಹಸುರೇ ಆವರಿಸಿರುವುದನ್ನು ಕವಿದೃಷ್ಟಿಯಿಣದ ನೋಡಿದ ಕುವೆಂಪು ಅವರು ಎಲ್ಲೆಲೆಯೂ ಹಸಿರುಮಯ ಎಂಬುದನ್ನು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ:– ಹಸುರು ಕೇವಲ ಸಸ್ಯವರ್ಗಕ್ಕೆ ಮಾತ್ರ ಸೀಮಿತವಲ್ಲ, ಇಡೀ ಪ್ರಕೃತಿಯ ಚೈತನ್ಯಕ್ಕೆ ಅದೇ ಕಾರಣ, ರಕ್ತದಲ್ಲೂ ಹಸುರು ವ್ಯಾಪಿಸಿದೆ ಎಂದು ಹೇಳಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿದೆ.

## . ಪದ್ಯಪಾಠ–6. ಛಲಮನೆ ಮೆರೆವೆಂ

1. "ನೆಲಕಿಟೆವೆನೆಂದು ಬಗೆದಿರೆ ಚಲಕಿಟೆವೆಂ"

ಆಯ್ಕೆ: ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ 'ಸಾಹಸ ಭೀಮ ವಿಜಯ' ಎಂಬ ಕೃತಿಯಿಂದ ಆಯ್ದ 'ಛಲಮನೆ ಮೆಱೆವೆಂ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಭೀಷ್ಮಾಚಾರ್ಯರು ಪಾಂಡವರನ್ನು ಒಪ್ಪಿಸುತ್ತೇನೆ ಸಂಧಿ ಮಾಡಿಕೋ ಎಂದು ಹೇಳಿದಾಗ ದುರ್ಯೋಧನನು ಅಜ್ಜಾ

ನಾನುಈ ಭೂಮಿಗಾಗಿ ಯುದ್ಧ ಮಾಡುಉನೆಂದು ಭಾವಿಸಿರುವಿರಾ? ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು.ಈ ಭೂಮಿ ನನಗೆ ಪಾಳುಬಿದ್ದ ನೆಲಕ್ಕೆ ಸಮ ಎನ್ನುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ: ಧುರ್ಯೋಧನನ ಈ ಮಾತಿನಲ್ಲಿ ನಶ್ವರವಾದ ಈ ಶರೀರಕ್ಕಿಂತ ಛಲದಿಂದ ಬಾಳುವುದೇ ನಿಜವಾದ ಕ್ಷತ್ರಿಯನ ಗುಣ. ಸಂಧಿಮಾಡಿಕೊಳ್ಳುವುದು ಹೇಡಿತನದ ಲಕ್ಷಣ ಎಂಬ ಧ್ವನಿ ಸ್ವಾರಸ್ಯಪೂರ್ಣವಾಗಿದೆ.

2. "ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ."

ಆಯ್ಕೆ: ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ 'ಸಾಹಸ ಭೀಮ ವಿಜಯ' ಎಂಬ ಕೃತಿಯಿಂದ ಆಯ್ದ 'ಛಲಮನೆ ಮೆಱೆವೆಂ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:ಭೀಷ್ಮಾಚಾರ್ಯರು ನೀನು ಒಪ್ಪುವುದಾದರೆ ಪಾಂಡವರನ್ನು ಒಪ್ಪಿಸಿ ಒಪ್ಪಂದ ಮಾಡಿ ಮೊದಲಿನಂತೆ ನಡೆಯುವ ಹಾಗೆ ಮಾಡುವೆನು. ಈಗಲೂ ಕೂಡ ಅವರು ನಮ್ಮ ಮಾತನ್ನು ಮೀರದೆ ಪಾಲಿಸುತ್ತಾರೆ.ನೀನು ಕೂಡ ನಮ್ಮ ಮಾತನ್ನು ಮೀರದೆ ನಡೆದುಕೊಳ್ಳಬೇಕು ಎಂದು ಭೀಷ್ಮರು ಹೇಳಿದಾಗ ದುರ್ಯೋಧನನು ಮುಗುಳುನಗೆ ನಕ್ಕು ಅಜ್ಜಾ ನಿಮಗೆ ನಮಸ್ಕರಿಸಿ ಹೋಗಲೆಂದು ಬಂದೆನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನೇರ್ಪಡಿಸಲು ಬಂದೆನೇ?ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ: "ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ."ಎಂದು ಹೇಳುವ ದುರ್ಯೋಧನನ ಮಾತಿನಲ್ಲಿ ಸಂಧಿ ಮಾಡಿಕೊಳ್ಳುವ ಮಾತೊಂದನ್ನು ಬಿಟ್ಟು, ಯುದ್ಧದಲ್ಲಿ ನಾನೇನು ಮಾಡಬಹುದು ಎಂಬುದನ್ನು ಹೇಳಿ ಎಂಬ ಮಾತು ಸ್ವಾರಸ್ಯಪೂರ್ಣವಾಗಿದೆ.

3. "ಪಾಂಡವರೊಳಿಜೆದು ಛಲಮನೆ ಮೆರೆವೆಂ."

ಆಯ್ಕೆ: ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ 'ಸಾಹಸ ಭೀಮ ವಿಜಯ' ಎಂಬ ಕೃತಿಯಿಂದ ಆಯ್ದ 'ಛಲಮನೆ ಮೆಱೆವೆಂ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:ನಿನ್ನ ಒಡಹುಟ್ಟಿದ ನೂರು ಮಂದಿ ಸಹೋದರರು ಹೋರಾಡಿ ಸತ್ತರು. ಆದ್ದರಿಂದ ನನ್ನಲ್ಲಿ ಕೋಪ ಹುಟ್ಟಿ ಬೆಳೆಯಿತು. ಸತ್ತವರು ಮತ್ತೆ ಹುಟ್ಟುವುದಿಲ್ಲವೇ ?ಆದುದರಿಂದ ಪಾಂಡವರೊಡನೆ ಹೋರಾಡಿ ಛಲವನ್ನೇ ಮೆರೆಯುತ್ತೇನೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ:ದುರ್ಯೋಧನನು ತನಗೆ ಕೋಪ ಹೆಚ್ಚಾಗಲು ಕಾರಣವನ್ನು ನೀಡುವುದಲ್ಲದೆ ತನ್ನ ಸಹೋದರರು ಸತ್ತಿಲ್ಲ, ಮತ್ತೆ ಹುಟ್ಟಿ ಬರುವರೆಂಬ ನಂಬಿಕೆ ಹೊಂದಿರುವುದು ಹಾಗೂ ಛಲಕ್ಕಾಗಿ ಹೋರಾಡುವ ಆತನ ನಿಲುವು ಇಲ್ಲಿ ಸ್ವಾರಸ್ಯಪೂರ್ಣವಾಗಿದೆ.

4. "ಮೇಣಾಯ್ತು ಕೌರವಂಗವನಿತಳಂ."

ಆಯ್ಕೆ: ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ 'ಸಾಹಸ ಭೀಮ ವಿಜಯ' ಎಂಬ ಕೃತಿಯಿಂದ ಆಯ್ದ 'ಛಲಮನೆ ಮೆಱೆವೆಂ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:ಸಂಧಿಗೆ ಒಪ್ಪದ ದುರ್ಯೋಧನನ್ನು "ಅಜ್ಜ ನಾನು ಹೋರಾಡದೇ ಬಿಡುವುದಿಲ್ಲ. ಇಂದಿನ ಯುದ್ಧದಲ್ಲಿ ಪಾಂಡವರು ಉಳಿಯಬೇಕು ಇಲ್ಲವೇ ನಾನು ಉಳಿಯಬೇಕು. ಆದ್ದರಿಂದ ಈ ಭೂಮಿ ಪಾಂಡವರದಾಗಬೇಕು ಇಲ್ಲ ಈ ಕೌರವನದಾಗಬೇಕು.ಎಂದು ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರಿಗೆ ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ:ತನ್ನ ಕೊನೆಯುಸಿರು ಇರುವವರೆಗೂ ಪಾಂಡವರ ವಿರುದ್ಧ ಹೋರಾಡುತ್ತೇನೆಂಬ ದುರ್ಯೋಧನನ ದಿಟ್ಟ ನಿರ್ಧಾರ ಸ್ವಾರಸ್ಯಪೂರ್ಣವಾಗಿದೆ.

## ಪದ್ಯಪಾಠ–7. ವೀರಲವ

1. "ರಘೂದ್ವಹನ ಸೊಲ್ಗೇಳಿ ನಮಿಸಲ್"

ಆಯ್ಕೆ: ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ 'ಜೈಮಿನಿ ಭಾರತ' ದಿಂದ ಆಯ್ದ 'ವೀರಲವ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ:ಶ್ರೀರಾಮನ ಅಶ್ವಮೇಧ ಯಾಗದ ಯಜ್ಞಾಶ್ವಕ್ಕೆ ದೊರೆತ ಗೌರವವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ: ಶ್ರೀರಾಮನ ಹೆಸರನ್ನು ಕೇಳಿಯೇ ಪರಾಕ್ರಮಿಗಳಾದ ರಾಜರುಗಳು ಗೌರವದಿಂದ ನಮಿಸಿ ಶರಣಾದರು ಎಂಬುದು ಸ್ವಾರಸ್ಯಪೂರ್ಣವಾಗಿದೆ.

2. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"

ಆಯ್ಕೆ: ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ 'ಜೈಮಿನಿ ಭಾರತ' ದಿಂದ ಆಯ್ದ 'ವೀರಲವ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ಯಜ್ಞಾಶ್ವದ ಹಣೆಯಲ್ಲಿದ್ದ ಬರಹವನ್ನು ಓದಿ ಅದನ್ನು ಕಟ್ಟಿಹಾಕಲು ನಿರ್ಧರಿಸಿದ ಸಂದರ್ಭದಲ್ಲಿ ಲವನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ: ಕುದುರೆಯನ್ನು ಕಟ್ಟದಿದ್ದರೆ ತಾನು ಜಾನಕಿಯ ಮಗನಾಗಿ ಜನಿಸಿದ್ದು ಏನು ಪ್ರಯೋಜನ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

3. "ಅರಸುಗಳ ವಾಜಿಯಂ ಬಿಡು"

ಆಯ್ಕೆ: ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ 'ಜೈಮಿನಿ ಭಾರತ' ದಿಂದ ಆಯ್ದ 'ವೀರಲವ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ವೀರಲವನು ಯಜ್ಞಾಶ್ವವನ್ನು ಕಟ್ಟಿಹಾಕಿದ್ದನ್ನು ನೋಡಿದ ಮುನಿಕುಮಾರರರು ಈ ಮಾತನ್ನು ಲವನಿಗೆ ಹೇಳುತ್ತಾರೆ.

ಸ್ವಾರಸ್ಯ:ಯಜ್ಞಾಶ್ವವನ್ನು ಕಟ್ಟಿಹಾಕಿದರೆ ಮುಂದೆ ತೊಂದರೆ ಉಂಟಾಗುತ್ತದೆ ಎಂದು ಮುನಿಪುತ್ರರು ಭಯಗೊಳ್ಳುವುದು ಸ್ವಾರಸ್ಯಕರವಾಗಿದೆ.

4. "ಜಾನಕಿಯ ಮಗನಿದಕೆ ಬೆದರುವನೆ"

ಆಯ್ಕೆ: ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ 'ಜೈಮಿನಿ ಭಾರತ' ದಿಂದ ಆಯ್ದ 'ವೀರಲವ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ:ಮುನಿಪುತ್ರರು ಕುದುರೆಯನ್ನು ಬಿಡು ಎಂದು ಹೆದರುತ್ತಾ ಹೇಳಿದ ಸಂದರ್ಭದಲ್ಲಿ ಲವನು ಮುನಿಪುತ್ರರಿಗೆ ಹೇಳುತ್ತಾನೆ.

ಸ್ವಾರಸ್ಯ:'ಜಾನಕಿಯ ಮಗನಾಗಿರುವ ತಾನು ಹೆದರುವೆನೆ' ಎಂಬ ಕೆಚ್ಚಿನ ಮಾತು ಮತ್ತು ಆತನ ಧೈರ್ಯ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿದೆ.

## ಪದ್ಯಪಾಠ–8. ಕೆಮ್ಮನೆ ಮೀಸೆವೊತ್ತನೇ

1. 'ಈಗಳೊಂದಡಕೆಯುಮಿಲ್ಲ ಕೈಯೊಳ್'

ಆಯ್ಕೆ : ಪಂಪನ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆರಿಸಿದ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ: ದ್ರೋಣನು ತನಗೆ ಬಡತನವುಂಟಾಗಲು ದೇಶದೇಶಗಳಲ್ಲೆಲ್ಲ ಸುತ್ತಿ ಪರಶುರಾಮನ ಬಳಿಗೆ ಬಂದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಪರಶುರಾಮನು ಬೇಸರದಿಂದ ತನ್ನ ನಿಜ ಸ್ಥಿತಿಯನ್ನು ಹೇಳಿಕೊಳ್ಳುವುದು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ.

2. 'ವಿದ್ಯಾಧನಮೆ ಧನಮಪ್ಪುದು'

ಆಯ್ಕೆ: ಪಂಪನ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆರಿಸಿದ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ: ಪರಶುರಾಮನು ತನ್ನಲ್ಲಿ ಬಿಲ್ಲು-ಬಾಣವಲ್ಲದೆ ಬೇರೆ ಏನೂ ಇಲ್ಲ. ಎಂದಾಗ ದ್ರೋಣನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ: 'ವಿದ್ಯಾಧನವೇ ನಿಜವಾದ ಸಂಪತ್ತು' ಎಂದು ಹೇಳುವ ಮೂಲಕ ದ್ರೋಣನು ವಿದ್ಯೆಯ ಮಹತ್ವವನ್ನು ತಿಳಿಸಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

3. 'ಎಂತು ನಾಣಿಲಿಗರಪ್ಪರೆ ಮಾನಸರ್'

ಆಯ್ಕೆ: ಪಂಪನ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆರಿಸಿದ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ: ದ್ರೋಣನು "ನಾವಿಬ್ಬರೂ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದನ್ನು ತಿಳಿದಿಲ್ಲವೇ?" ಎನ್ನಲು ದ್ರುಪದನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ: ತನ್ನ ಸ್ನೇಹಿತ ಒಬ್ಬ ಬಡವನೆಂಬ ಕಾರಣಕ್ಕೆ 'ನೀನಾರೋ ನನಗೆ ತಿಳಿದಿಲ್ಲ' ಎಂದು ಹೇಳುವ ದ್ರೋಣನ ಅಹಂಕಾರ ಇಲ್ಲಿ ವ್ಯಕ್ತವಾಗಿದೆ.

4. 'ಜಲಕ್ಕನೀಗಳಜಿದೆಂ ಸಿರಿ ಕೆಳ್ಗೊಡವುಟ್ಟಿತೆಂಬುದಂ'

ಆಯ್ಕೆ:ಪಂಪನ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆರಿಸಿದ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ :- ದ್ರುಪದನು ದ್ರೋಣನನ್ನು "ನಾಚಿಕೆಗೆಟ್ಟವನೆಂದು ಹೀಯಾಳಿಸಿದ ಸಂದರ್ಭದಲ್ಲಿ ದ್ರೋಣನು ಹೀಗೆ ಹೇಳುತ್ತಾನೆ.

ಸ್ವಾರಸ್ಯ :- ಸಮುದ್ರಮಥನ ಕಾಲದಲ್ಲಿ ಲಕ್ಷ್ಮಿ(ಹಣ) ಮತ್ತು ಕಳ್ಳು (ಮದ್ಯ) ಹುಟ್ಟಿದವು. ಅದನ್ನು 'ದ್ರುಪದನ ಐಶ್ವರ್ಯ ಮದಕ್ಕೆ' ಅನ್ವಯಿಸಲಾಗಿದೆ.

(ಕಂಠಪಾಠ ಪದ್ಯಗಳು)

*1. ಸಂಕಲ್ಪಗೀತೆ*

ಮತಗಳೆಲ್ಲವು ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

*2. ಹಕ್ಕಿ ಹಾರುತಿದೆ ನೋಡಿದಿರಾ*

ಯುಗ-ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

*2. ಕೌರವೇಂದ್ರನ ಕೊಂದೆ ನೀನು*

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು ॥
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರ್ವೈವರ ನೋಯಿಸೆನು ರಾಜೀವಸಖನಾಣೆ ॥

*4. ಛಲಮನೆ ಮೆಱೆವೆಂ*

ನೆಲಕಿಜಿವೆನೆಂದು ಬಗೆದಿರ
ಚಲಕಿಜಿವೆಂ ಪಾಂಡುಸುತರೊಳೀನೆಲನಿದು ಪಾ ।
ಟ್ಟೆಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಟ್ದಪೆನೇ ॥

ಪದ್ಯಗಳ ಸಾರಾಂಶ

ಈ ಕೆಳಗಿನ ಪದ್ಯದಲ್ಲಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.

ಸಂಕಲ್ಪಗೀತೆ

ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸಬರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡ ಗೋಡೆಗಳ
ಕೆಡುವುತ ಸೇತುವೆಯಾಗೋಣ.

ಈ ಮೇಲಿನ ಪದ್ಯಭಾಗವನ್ನು ಕವಿ ಜಿ. ಎಸ್. ಶಿವರುದ್ರಪ್ಪನವರು ಬರೆದಿರುವ 'ಎದೆತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಭಾಗದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

ಕವಿ ಜಿ. ಎಸ್. ಶಿವರುದ್ರಪ್ಪನವರು ಬರೆದಿರುವ 'ಸಂಕಲ್ಪಗೀತೆ' ಪದ್ಯಭಾಗದಲ್ಲಿ; ನಾವು ಜೀವನದಲ್ಲಿ ಧನಾತ್ಮಕ ಭಾವನೆಗಳನ್ನು ಬೆಳೆಸಿಕೊಳ್ಳುವ ಧೃಢಸಂಕಲ್ಪ ಹೊಂದಬೇಕೆಂದು ಹೇಳಿದ್ದಾರೆ.

ಶಾಶ್ವತವಲ್ಲದ ಈ ಬದುಕು ಬಿದ್ದು ಹೋಗುವಂತದ್ದೇ, ನಾವು ಪ್ರೀತಿ ಪ್ರೇಮ, ನಂಬಿಕೆ ವಿಶ್ವಾಸಗಳಿಂದ ಬಿದ್ದು ಹೋಗಿರುವ ಈ ಬದುಕನ್ನು ಮೌಲ್ಯಾಧಾರಿತವಾಗಿ ಹೊಸ ಬರವಸೆಗಳಿಂದ ಕಟ್ಟೋಣ.ಜಾತಿ ಮತ ಪಂಥಗಳಿಂದ ಅಡ್ಡವಾಗಿರುವ ಗೋಡೆಯನ್ನು ಕೆಡವಿ, ಒಡೆದ ಮನಸ್ಸುಗಳ ನಡುವೆ ಸೇತುವೆಯನ್ನು ಕಟ್ಟಬೇಕಿದೆ ಎಂದು ಕವಿ ಆಶಿಸುತ್ತಾರೆ.

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣಳು
ನಾಳಿನ ಕನಸನು ಬಿತ್ತೋಣ.

ಈ ಮೇಲಿನ ಪದ್ಯಭಾಗವನ್ನು ಕವಿ ಜಿ. ಎಸ್. ಶಿವರುದ್ರಪ್ಪನವರು ಬರೆದಿರುವ 'ಎದೆತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಭಾಗದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

ಕವಿ ಜಿ.ಎಸ್.ಶಿವರುದ್ರಪ್ಪನವರು ಬರೆದಿರುವ 'ಸಂಕಲ್ಪಗೀತೆ' ಪದ್ಯಭಾಗದಲ್ಲಿ; ನಾವು ಜೀವನದಲ್ಲಿ ಧನಾತ್ಮಕ ಭಾವನೆಗಳನ್ನು ಬೆಳೆಸಿಕೊಳ್ಳುವ ಧೃಢಸಂಕಲ್ಪ ಹೊಂದಬೇಕೆಂದು ಹೇಳಿದ್ದಾರೆ.
ನಾವು ಮತ ಧರ್ಮಗಳ ಹೆಸರಿನಲ್ಲಿ ಕುರುಡಾಗಬಾರದು.ಎಲ್ಲಾ ಮತ ಧರ್ಮಗಳು ಮಾನವನ ಏಳಿಗೆಗೆ ಇರುವ ದಾರಿದೀಪಗಳು.ಎಂಬ ಭಾವನೆಯಿರಬೇಕೇ ಹೊರತು ಧರ್ಮಾಂಧತೆಯಲ್ಲ. ಭಯ ಸಂಶಯಗಳಿಂದ ಆತಂಕ ತುಂಬಿದ ಜನರ ಕಣ್ಣುಗಳಲ್ಲಿ ಹೊಸ ಭರವಸೆಯ ಬೆಳಕನ್ನು ಮೂಡಿಸಿ ಹೊಸ ಬಗೆಯ ಕನಸನ್ನು ಕಾಣಲು ನೆರವಾಗೋಣವೆಂದು ಕವಿ ಆಶಿಸುತ್ತಾರೆ.

ಹಕ್ಕಿ ಹಾರುತಿದೆ ನೋಡಿದಿರಾ ?

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ-ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ-ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತ್ತಿದೆ ನೋಡಿದಿರಾ?

ಈ ಮೇಲಿನ ಪದ್ಯಭಾಗವನ್ನು ದ.ರಾ. ಬೇಂದ್ರೆಯವರು ವಿರಚಿತ 'ಗರಿ' ಎಂಬ ಕವನ ಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ?' ಎಂಬ ಪದ್ಯಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಇಲ್ಲಿ ಕವಿ ಬೇಂದ್ರೆಯವರು 'ಕಾಲ'ವನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ವರ್ಣಿಸಿರುವುದು ವಿಶೇಷವಾಗಿದೆ. ಕವಿ ಇಲ್ಲಿ ಕಾಲದ ಮುಂದೆ ಯಾವುದು ಶಾಶ್ವತವಲ್ಲ; ಎಲ್ಲವೂ ನಶ್ವರ ಎಂಬುದನ್ನು ಹೇಳಿದ್ದಾರೆ. ಎಷ್ಟೋ ರಾಜ್ಯ, ಸಾಮ್ರಾಜ್ಯಗಳನ್ನು ಕಾಲಪಕ್ಷಿಯು ತೆನೆಯಿಂದ ಕಾಳನ್ನು ಬೇರ್ಪಡಿಸಿ ತಿನ್ನುವಂತೆ ತಿಂದಿದೆ, ಅಲ್ಲದೆ ಮಂಡಲಗಳು ಕೋಟೆ ಕೊತ್ತಲಗಳನ್ನು ಮುಕ್ಕಿದೆ. ದೊಡ್ಡ ದೊಡ್ಡ ಭೂಭಾಗಗಳನ್ನು ತೇಲಿಸಿ ಮುಳುಗಿಸಿ ಎಷ್ಟೋ ಸಾರ್ವಭೌಮರ ಅಹಂಕಾರವನ್ನು ಇಲ್ಲವಾಗಿಸಿದೆ. ಎಂದು ವರ್ಣಿಸಿದ್ದಾರೆ.

ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳ ಲೋಕದ ಅಂಗಳಕೇರಿ
ಹಕ್ಕಿ ಹಾರುತಿದೆ ನೋಡಿದಿರಾ?

ಇಲ್ಲಿ ಕವಿ ಬೇಂದ್ರೆಯವರು 'ಕಾಲ'ವನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ವರ್ಣಿಸಿರುವುದು ವಿಶೇಷವಾಗಿದೆ. ಕವಿ ಇಲ್ಲಿ ಕಾಲದ ಓಟದಲ್ಲಿ ಮಾನವನ ಅನ್ವೇಷಣೆ, ವೈಜ್ಞಾನಿಕ ಸಂಶೋಧನೆಗಳಲ್ಲಿ ಸಾಧಿಸಿರುವ ಅದ್ಭುತಗಳನ್ನು ವರ್ಣಿಸಿದ್ದಾರೆ.ಮಾನವನು ವೈಜ್ಞಾನಿಕವಾಗಿ ಮುಂದುವರೆಯುತ್ತಾ ನಕ್ಷತ್ರಲೋಕ ದಾಟುತ್ತಾ, ಚಂದ್ರಲೋಕದಲ್ಲಿ ನೀರಿನ ಬಗ್ಗೆ ಸಂಶೋಧಿಸುತ್ತಾ, ಅದನ್ನು ಮೀರಿ ಮಂಗಳ ಗ್ರಹದ ಅನ್ವೇಷಣೆಯಲ್ಲಿ ತೊಡಗಿರುವುದನ್ನು ಕವಿ ಬಹಳ ಸುಂದರವಾಗಿ ವರ್ಣಿಸಿದ್ದಾರೆ.

ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ

ಕುಮಾರವ್ಯಾಸನು ಬರೆದಿರುವ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಶ್ರೀಕೃಷ್ಣನು ಕರ್ಣನ ಮನಸ್ಸನು ಬದಲಿಸಿ ಪಾಂಡವರ ಪರವಹಿಸುವಂತೆ ಮಾಡಲು ಹಲವಾರು ಆಮಿಷಗಳನ್ನು ಒಡ್ಡುತ್ತಾನೆ. ನಿಜವಾಗಿ ನೀನೇ ರಾಜ.ಪಾಂಡವ-ಕೌರವರೆಲ್ಲರೂ ನಿನ್ನ ಸೇವೆ ಮಾಡುತ್ತಾರೆ.ಎಂದೆಲ್ಲಾ ಹೇಳುತ್ತಾನೆ. ಆತನ ಮಾತುಗಳನ್ನು ಕೇಳಿದ ಕರ್ಣನು ಈ ರೀತಿ ಹೇಳುತ್ತಾನೆ.

"ದಡ್ಡ ಕೃಷ್ಣನೇ, ನಾನು ಈ ರಾಜ್ಯ-ಕೋಶಗಳಿಗೆಲ್ಲಾ ಸೋಲುವವನಲ್ಲ. ಪಾಂಡವರು ಮತ್ತು ಕೌರವರಿಂದ ಸೇವೆ ಮಾಡಿಡಿಕೊಳ್ಳುವುದು ನನಗೆ ಇಷ್ಟವಿಲ್ಲ. ನನ್ನನ್ನು ಕಾಪಾಡಿದ ಒಡೆಯನಿಗೆ ಶತ್ರುಗಳ ಶಿರವನ್ನು ಕತ್ತರಿಸಿ ಒಪ್ಪಿಸುತ್ತೇನೆಂಬ ಉತ್ಸಾಹದಲ್ಲಿದ್ದೆ. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ಹೇಳಿ ಕೌರವನನ್ನು ಕೊಂದೆ" ಎಂದು ಕರ್ಣ ಈ ಸಂದರ್ಭದಲ್ಲಿ ದುಃಖಿಸುತ್ತಾನೆ.

## ಪಠ್ಯ ಪೋಷಕ ಅಧ್ಯಯನ

### 1. ಸ್ವಾಮಿ ವಿವೇಕಾನಂದರ ಚಿಂತನೆಗಳು

ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?

* ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರು – "ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ.
* ಹಿಂದೆ ಅದು ವಿಕಾಸವಾಗುತ್ತಿತ್ತು.ಈಗ ಅದು ಘನೀಭೂತವಾಗಿದೆ.
* ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.

2. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು, ಏಕೆ?

* ಕೋಮುವಾದವು ಏಕಧರ್ಮ ಮತ್ತು ಏಕಸಂಸ್ಕೃತಿಯೇ ಶ್ರೇಷ್ಠವೆಂದೂ ಅದೇ ಅಂತಿಮವೆಂದೂ ನಂಬುತ್ತ ನಂಬಿಸುತ್ತ,
* ಪರಮಧರ್ಮ ದ್ವೇಷವನ್ನು ಬಿತ್ತಿ ಬೆಳೆಸುತ್ತದೆ.ಆದ್ದರಿಂದ ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು.

3. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?

* ಚಿಕಾಗೊದ ಸರ್ವಧರ್ಮ ಸಮ್ಮೇಳನದಲ್ಲಿ ಮಾತನಾಡುತ್ತ ಅವರು: "ಸ್ವಮತಾಭಿಮಾನ, ಅನ್ಯ ಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ,
* ಘೋರ ಧಾರ್ಮಿಕ ದುರಭಿಮಾನಗಳು ಈ ಸುಂದರ ಜಗತ್ತನ್ನು ಆವರಿಸಿಕೊಂಡಿವೆ.
* ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಬಹಳ ಮುಂದುವರೆಯುತ್ತಿತ್ತು" ಎಂದು ಹೇಳಿದರು.

### 2. ವಸಂತ ಮುಖ ತೋರಲಿಲ್ಲ

1. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?

ಉ: ಪುಟ್ಟ ಪೋರಿ ಮುಸುರೆ ತಿಕ್ಕುತ್ತಿದ್ದಾಳೆ.

2. ಅಮ್ಮ ಎಲ್ಲಿ ಮಲಗಿದ್ದಾಳೆ?

ಉ: ಅಮ್ಮ ಗುಡಿಸಲಿನಲ್ಲಿ ಮಲಗಿದ್ದಾಳೆ.

3. ಯಾರಿಗೆ ವಸಂತಮುಖ ತೋರಲಿಲ್ಲ?

ಉ: ಕಮ್ಮಾರ, ನೇಕಾರ, ಕುಂಬಾರ, ಕೇರಿಯ ಮಾರ ಮತ್ತು ಪುಟ್ಟಿಗೆ ವಸಂತ ಮುಖ ತೋರಲಿಲ್ಲ.

4. ಪುಟ್ಟಿಯ ಪ್ರಶ್ನೆಗಳೇನು?

ಉ: ಗುಡಿಸಲೊಳಗೆ ಬರಲು ವಸಂತ ಹೆದರಿದನೆ? ಹರಿದ ಚಿಂದಿ ಬಟ್ಟೆಗಳ ಕಂಡು ಅವನು ಮರುಗಿದನೆ? ಇವು ಪುಟ್ಟಿಯ ಪ್ರಶ್ನೆಗಳಾಗಿವೆ.

5. ಇಳೆಗೆ ಯಾವ ಸಂಭ್ರಮವೆಂದು ಕವಿ ಹೇಳಿದ್ದಾರೆ?

ಉ: ಇಳೆಗೆ ಕಡಲುಕ್ಕಿ ಹರಿಯುವ ಸಂಭ್ರಮ ಎಂದು ಕವಿ ಹೇಳಿದ್ದಾರೆ.

6. ಮಾವಿನ ಮರಗಳು ಎಲ್ಲಿ ಮೈ ತುಂಬಿ ನಿಂತಿವೆ?

ಉ: ಮಾವಿನ ಮರಗಳು ಒಡೆಯನ ಅಂಗಳದಲಿ ಮೈ ತುಂಬಿ ನಿಂತಿವೆ.

7. ಕೋಗಿಲೆ ಹೇಗೆ ಹಾಡುತ್ತದೆಂದು ಕವಿ ಹೇಳಿದ್ದಾರೆ?

ಉ: ಕೋಗಿಲೆ ಮನದುಂಬಿ ಹಾಡುತ್ತದೆಂದು ಕವಿ ಹೇಳಿದ್ದಾರೆ.

8. ಪುಟ್ಟಿ ಏನನ್ನು ಕಂಡು ಮೂಕವಿಸ್ಮಿತಳಾದಳು?

ಉ: ಪುಟ್ಟಿ ಥಳಥಳ ಹೊಳೆಯುವ ಸೂರ್ಯನನ್ನು ಕಂಡು ಮೂಕವಿಸ್ಮಿತಳಾದಳು.

9. ಯಾರ ಒಲೆ ಉರಿಯಲಿಲ್ಲ?

ಉ: ಕೇರಿಯ ಮಾರನ ಒಲೆ ಹೊತ್ತಲಿಲ್ಲ.

10. ಬಾಲರವಿ ಎಲ್ಲಿ ಸೊರಗಿದ್ದಾನೆ?

ಉ: ತೂತು ಬಿದ್ದ ಸೀರೆಯಲ್ಲಿ ಬಾಲ ರವಿ ಸೊರಗಿದ್ದಾನೆ.

### 3. ಭಗತ್ ಸಿಂಗ್.

1. ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣೆ ಏನು?

* ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ: "ಏಪ್ರಿಲ್-13, 1919 ರಂದು ಬ್ರಿಟೀಷರ ಗುಂಡುಗಳಿಗೆ ಆಹುತಿಯಾದ
* ಸುಮಾರು 2000 ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ."

ಆನಂದ ಗುರು ಅಂಗೊಂಡಹಳ್ಳಿ

2. ಬಾಲಕ ಭಗತ್‌ಸಿಂಗ್ ಊಟಮಾಡದೆ ಉಪವಾಸವಿದ್ದುದಕ್ಕೆ ಕಾರಣವೇನು?

* ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಪ್ರಾಣ ಕಳೆದುಕೊಂಡಿದ್ದವರಿಗೆ ನಮನ ಸಲ್ಲಿಸಲು ಭಗತ್‌ಸಿಂಗ್ ಹೋಗಿದ್ದನು.

* ಅಲ್ಲಿದ್ದ ಸ್ವಲ್ಪ ಮಣ್ಣನ್ನು ತೆಗೆದುಕೊಂಡು ಹಣೆಗಿಟ್ಟುಕೊಂಡ. ಇನ್ನಷ್ಟನ್ನು ಡಬ್ಬಿಯಲ್ಲಿ ಶೇಖರಿಸಿಕೊಂಡು ಹಿಂತಿರುಗಿದ.

* ಜಲಿಯನ್ ವಾಲಾಬಾಗ್ ಘಟನೆ ಆತನ ಮನಸ್ಸಿನ ಮೇಲೆ ತೀವ್ರವಾದ ಪರಿಣಾಮ ಬೀರಿತ್ತು.

* ಆದ್ದರಿಂದ ಅವನ ಸಹೋದರಿ ರಾತ್ರಿ ಎಂದಿನಂತೆ ಊಟಕ್ಕೆಬ್ಬಿಸಿದಾಗ ಅವನು ಒಲ್ಲೆನೆಂದು ಮುಖ ತಿರುಗಿಸಿದ.

3. ಭಗತ್‌ಸಿಂಗ್ ಮತ್ತು ಆತನ ಸಹಚರರಿಗೆ ಗಲ್ಲುಶಿಕ್ಷೆಯಾಗಲು ಕಾರಣವೇನು?

* ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದ ಬಾಲಕ ಭಗತ್‌ಸಿಂಗ್

* ಮುಂದೆ ತನ್ನ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ.

* ಇದರ ಫಲವಾಗಿ ಮರಣ ದಂಡನೆಗೆ ಈಡಾದನು.

4. ಜನರಲ್ ಡಯರ್‌ನ ಪೈಶಾಚಿಕ ಕೃತ್ಯವನ್ನು ಕುರಿತು ತಿಳಿಸಿ.

* ಜನರಲ್ ಡಯರ್ ಕ್ರೂರ ಮಾರ್ಗದಿಂದ ಭಾರತೀಯರನ್ನೂ ಬಗ್ಗು ಬಡಿಯಬಹುದೆಂದು ಭಾವಿಸಿದನು.

* ಒಟ್ಟು 1650 ಸುತ್ತುಗಳಷ್ಟು ಗುಂಡಿನ ಮಳೆ ಕರೆಯಿಸಿದ್ದ ಅವನು ಹೆಮ್ಮೆಯಿಂದ ಹೇಳಿಕೊಂಡದ್ದು ಇದು

* "ಒಂದೇ ಒಂದು ಗುಂಡು ಸಹ ದಂಡವಾಗಲಿಲ್ಲ".ಅಂದು ಪ್ರಾಣ ಕಳೆದುಕೊಂಡವರ ಸಂಖ್ಯೆ ಇದನ್ನು ಖಚಿತಗೊಳಿಸಿತ್ತು.

5. ತನ್ನ ಹಳ್ಳಿಯಿಂದ ರೈಲಿನಲ್ಲಿ ಅಮೃತಸರದಲ್ಲಿ ಬಂದಿಳಿದಿದ್ದ ಬಾಲಕ ಭಗತ್ ಸಿಂಗ್ ಅಲ್ಲಿ ಏನು ಮಾಡಿದನು?

* ಹುಡುಗ ಜಲಿಯನ್ ವಾಲಾಭಾಗ್‌ನಲ್ಲಿ ಒಂದೆಡೆ ಅಂತರ್ಮುಖಿಯಾಗಿ ಬಹುಕಾಲ ನಿಂತ.

* ನಂತರ ಅಲ್ಲಿದ್ದ ಸ್ವಲ್ಪ ಮಣ್ಣನ್ನು ತೆಗೆದುಕೊಂಡು ಹಣೆಗಿಟ್ಟುಕೊಂಡ.

* ಇನ್ನಷ್ಟನ್ನು ತನ್ನಲ್ಲಿದ್ದ ಡಬ್ಬಿಯಲ್ಲಿ ಶೇಖರಿಸಿಕೊಂಡು ಹಿಂತಿರುಗಿದ.

ನಿಗದಿತ ಅಂಕಗಳು – 2

4. ಮೃಗ ಮತ್ತು ಸುಂದರಿ

1. ಬಡತನ ಸುಂದರಿ ಹಾಗೂ ಅವಳ ತಂದೆಗೆ ಕಷ್ಟವಾಗಲಿಲ್ಲ ಏಕೆ?

* ಬಡತನ ಸುಂದರಿ ಹಾಗೂ ಅವಳ ತಂದೆಗೆ ಕಷ್ಟವಾಗಲಿಲ್ಲ. * ಏಕೆಂದರೆ ಅವರ ಜೀವನ ಸರಳವಾಗಿತ್ತು.

2. ಮೃಗದ ಬಾಹ್ಯ ಆಕಾರ ಹೇಗಿತ್ತು?

* ಮೃಗದ ಬಾಹ್ಯ ಆಕಾರ ಭೀಕರವಾಗಿತ್ತು.ಕೋರೆ ಹಲ್ಲು, ಹಂದಿಯ ದೇಹ, ತೋಳದ ಚಲನೆಯನ್ನು ಪಡೆದಿತ್ತು.

3. ಕನ್ಯೆ ಕೊಟ್ಟ ಶಾಪವೇನು?

* 'ನಿನ್ನನ್ನು ಕನ್ಯೆಯೊಬ್ಬಳು ಮನಸಾರೆ ಒಪ್ಪಿ ಪ್ರೀತಿಸುವವರೆಗೆ ಮೃಗವಾಗಿಯೇ ಇರು' ಎಂದು ಕನ್ಯೆ ಶಾಪ ಹಾಕಿದ್ದಳು.

4. ಶಾಪ ವಿಮೋಚನೆಯ ಫಲವೇನು?

* ಶಾಪ ವಿಮೋಚನೆಯ ನಂತರ ಮೃಗದ ಆಕಾರವೇ ಬದಲಾಯಿತು.ಅದು ಸುಂದರ ರಾಜಕುಮಾರನಾಗಿ ಬದಲಾಯಿತು.

5. ಮೃಗದ ಬಗೆಗೆ ಸುಂದರಿಯ ಮನ ಕರಗುತ್ತಿತ್ತು ಏಕೆ?

* ಮೃಗದ ಒರಟು ಮಾತು, ತಿಕ್ಕಲು ನಡವಳಿಕೆ ಮನಸ್ಸಿನಲ್ಲೇ ನಗು ತರುತ್ತಿದ್ದವು. ಹಾಗೂ ಆತನ ಕಾಳಜಿಯನ್ನು ನೆನೆದು ಮನ ಕರಗುತ್ತಿತ್ತು.

ಹೆಚ್ಚುವರಿ ಪ್ರಶ್ನೆಗಳು

7. ವರ್ತಕನ ಮೂವರು ಹೆಣ್ಣು ಮಕ್ಕಳ ಸ್ವಭಾವ ಹೇಗಿತ್ತು?

* ವರ್ತಕನ ಮೂವರು ಹೆಣ್ಣು ಮಕ್ಕಳಲ್ಲಿ ಹಿರಿಯರಾದ ಇಬ್ಬರು ಬಿಂಕ, ಬಡಿವಾರದ ಹುಡುಗಿಯರು.

* ಫ್ಯಾಷನ್, ಪಾರ್ಟಿ, ಗೆಳೆಯರೆಂದರೆ ಪಂಚಪ್ರಾಣ.ಆದರೆ ಮೂರನೆಯ ಹುಡುಗಿ ತಂದೆಯಷ್ಟೇ ಮೃದು ಸ್ವಭಾವದವಳಾಗಿದ್ದಳು.

* ಆಕೆಗೆ ತಂದೆಯ ನೆಮ್ಮದಿ ಮುಖ್ಯ. ರೂಪವತಿಯಾಗಿದ್ದ ಆಕೆಯನ್ನು ಎಲ್ಲರೂ ಸುಂದರಿ ಎಂದೇ ಕರೆಯುತ್ತಿದ್ದರು.

8. ವರ್ತಕನು ಬಡವನಾಗಲು ಕಾರಣವೇನು? ಅಥವಾ

ವರ್ತಕನಿಗೆ ಹಣಕಾಸಿನ ತೊಂದರೆ ಉಂಟಾಗಲು ಕಾರಣವೇನು? ಅಥವಾ

ವರ್ತಕನು ಹಳ್ಳಿಗೆ ವಲಸೆ ಹೋಗಲು ಕಾರಣವೇನು?

* ವರ್ತಕನ ವ್ಯಾಪಾರ ಕುಸಿದು ಬಿತ್ತು.ಬರಬೇಕಾಗಿದ್ದ ಹಣ ಬರಲಿಲ್ಲ.

* ಸರಕುಗಳನ್ನು ತರಲು ದೂರದ ದೇಶಕ್ಕೆ ಪ್ರಯಾಣಿಸಿದ್ದ ಹಡಗುಗಳು ಹಿಂದಿರುಗಲಿಲ್ಲ. ಅವನ ಸಾಲಗಳು ಅವನನ್ನು ಬಾಧಿಸತೊಡಗಿದವು.

* ಇದ್ದಬದ್ದ ಸ್ಥಿರಾಸ್ತಿ, ಚರಾಸ್ತಿಯನ್ನೆಲ್ಲ ಮಾರಿ ಸಾಲತೀರಿಸಿದನು.

* ಆದ್ದರಿಂದ ಬಡವನಾದ ಅವನು ತನ್ನ ಹೆಣ್ಣು ಮಕ್ಕಳನ್ನು ಕರೆದುಕೊಂಡು ಹೋಗಿ ಹಳ್ಳಿಯಲ್ಲಿ ನೆಲೆಸಿದನು.

9. ವರ್ತಕನು ಹಡಗನ್ನು ಸ್ವಾಗತಿಸಲು ನಗರಕ್ಕೆ ಹೊರಟಾಗ ಮೂವರು ಹೆಣ್ಣು ಮಕ್ಕಳು ಏನೇನು ತರಲು ಹೇಳಿದರು?

* ವರ್ತಕನು ಹಡಗನ್ನು ಸ್ವಾಗತಿಸಲು ನಗರಕ್ಕೆ ಹೊರಟಾಗ ಅವನ ಇಬ್ಬರು ಹಿರಿಯ ಹೆಣ್ಣು ಮಕ್ಕಳು ಬಟ್ಟೆ, ಒಡವೆ,

* ಮತ್ತು ಅಲಂಕಾರದ ವಸ್ತುಗಳ ಪಟ್ಟಿ ನೀಡಿದರು.

* ಆದರೆ ಸುಂದರಿ ತನಗೊಂದು ಗುಲಾಬಿ ಹೂಗಳ ಗೊಂಚಲು ತರಬೇಕೆಂದು ಕೇಳಿಕೊಂಡಳು.

10. ವರ್ತಕನು ನಿರ್ಜನ ಪ್ರದೇಶದಲ್ಲಿ ನೋಡಿದ ಅರಮನೆಯಲ್ಲಿ ಏನು ಮಾಡಿದನು?

* ವರ್ತಕನು ಅಂಜಿಕೆಯಿಂದ ಅರಮನೆ ಪ್ರವೇಶಿಸಿದನು.

* ಆ ಅರಮನೆಯ ಒಂದು ಕೋಣೆಯಲ್ಲಿ ಭಕ್ಷ್ಯ ಭೋಜ್ಯಗಳನ್ನು ಇಡಲಾಗಿತ್ತು.

* ಹಸಿವೆ ತಾಳಲಾರದೆ ಉಂಡ.ಭೋಜನ ಸವಿದು ಹೊರಬಂದ. ಪುಷ್ಪವನದ ಗುಲಾಬಿಗಳನ್ನು ನೋಡಿದ.

* ತನ್ನ ಮಗಳು ಸುಂದರಿಗಾಗಿ ಒಂದು ಗೊಂಚಲು ಕಿತ್ತುಕೊಂಡ.

11. ವರ್ತಕನು ಅರಮನೆಯಲ್ಲಿ ಊಟಮಾಡಿ, ಹೂಗಳನ್ನು ಕಿತ್ತಿದ್ದರಿಂದ ಮೃಗ ಅವನಿಗೆ ಏನೆಂದು ಎಚ್ಚರಿಕೆ ನೀಡಿತು?

* ವರ್ತಕನು ಅರಮನೆಯಲ್ಲಿ ಊಟಮಾಡಿ, ಹೂಗಳನ್ನು ಕಿತ್ತಿದ್ದರಿಂದ ಮೃಗ ಸಿಟ್ಟಿನಿಂದ ಅಬ್ಬರಿಸಿ,

* "ಕೇಳು!ನಿನ್ನ ಬದಲಾಗಿ ನಿನ್ನ ಮುದ್ದು ಮಗಳನ್ನು ತಂದು ಕೊಟ್ಟರೆ ನಿನ್ನನ್ನು ಕೊಲ್ಲುವುದಿಲ್ಲ.

* ನೀನು ತಪ್ಪಿಸಿಕೊಳ್ಳಲಾರೆ.ಈ ಬುಟ್ಟಿ ತೆಗೆದುಕೋ. ಇದರೊಂದಿಗೆ ಹೋಗು ನಾಳೆ ಸಂಜೆ ಒಳಗೆ ನಿನ್ನ ಮಗಳನ್ನು ಕರೆತರದಿದ್ದರೆ,

* ನಿನ್ನನ್ನು ನಿನ್ನ ಮಗಳನ್ನು ಒಟ್ಟಿಗೇ ಮುಗಿಸುತ್ತೇನೆ!"ಅಂದಿತು.

12. ಮೃಗವು "ನನ್ನ ಹೃದಯ ಒಳ್ಳೆಯದಿರಬಹುದು, ಆದರೂ ನಾನು ಮೃಗ." ಎಂಬ ಮಾತಿಗೆ ಸುಂದರಿಯ ಪ್ರತಿಕ್ರಿಯೆ ಏನು?

* ಮೃಗವು "ನನ್ನ ಹೃದಯ ಒಳ್ಳೆಯದಿರಬಹುದು, ಆದರೂ ನಾನು ಮೃಗ" ಎಂದು ಹೇಳಿದ ಮಾತಿಗೆ,

* ಸುಂದರಿ: "ಮೃಗ ಒಳ್ಳೆಯ ಹೃದಯ ಹೊಂದಿದ್ದರೂ ಮೃಗದ ಆಕಾರ ಹೊಂದಿರುವುದು ಸಹಜ.

* ಆದರೆ ಜಗತ್ತಿನ ಅನೇಕ ಮನುಷ್ಯರು ಸುಂದರ ಆಕಾರ ಪಡೆದು, ಮೃಗದ ಹೃದಯ ಹೊಂದಿರುತ್ತಾರೆ" ಎಂದು ಪ್ರತಿಕ್ರಿಯಿಸಿದಳು.

## 5. ಒಗಟುಗಳು

**1. ಒಗಟಿನ ಉತ್ತರ 'ಅಂಗಿ' ಎಂಬುದನ್ನು ಸಮರ್ಥಿಸುವಿರಿ.**

* ಅಂಗಿಯ ಎರಡು ತೋಳುಗಳ ಭಾಗವೇ ಕೈ.ಅಂಗಿಗೆ ತಲೆಯಿಲ್ಲ.
* ಅಂಗಿಯ ಬೇರೆಬೇರೆ ಭಾಗ ಸೇರಿಸಿ ಹೊಲಿಗೆ ಹಾಕಿರುವುದೇ ನವಗಾಯ,
* ಮೆಲ್ಲನೆ ಬಂದು ಶರೀರಕ್ಕೆ ತೊಡಿಸುವುದರಿಂದ ಅದು ಅಂಗಿಯಾಗಿ ಎಲ್ಲರಿಗೂ ಪರಿಚಯವಾಗಿದೆ.

**2. ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ?**

* ಉಪ್ಪನ್ನು ನೀರಿನಲ್ಲೇ ಇರುವ ಅಂಶವಾಗಿದೆ. ಅದನ್ನು ನೀರಿನಿಂದಲೇ ತಯಾರಿಸಲಾಗುತ್ತದೆ.
* ಆದರೆ ಅದಕ್ಕೆ ನೀರು ತಾಕಿದರೆ ಕರಗಿ ಮಾಯವಾಗುತ್ತದೆ.ಎಂದು ಉಪ್ಪಿನ ವಿಶೇಷತೆ ಈ ಒಗಟಿನಲ್ಲಿ ವ್ಯಕ್ತವಾಗಿದೆ.

**3. ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಒಗಟು ಹೇಗೆ ವಿವರಿಸುತ್ತದೆ?**

* ಕಮಲದ ಹೂವು ಬೆಳೆಯಲು ಕೆಸರು ಬೇಕು. ಆದ್ದರಿಂದ ಅದು ಕೆಸರಿನಲ್ಲೆ ಹುಟ್ಟಿ
* ಕೆಸರಿನಲ್ಲೆ ಬೆಳೆಯುವ ಒಂದು ವಿಧವಾದ ಗಿಡವಾಗಿದೆ. ಎಂದು ವರ್ಣಿಸಿರುವುದು ಸೂಕ್ತವಾಗಿದೆ.

**4. ಹೊಲದಲ್ಲಿ ಹುಟ್ಟಿದ ಉತ್ತರಾಣಿ ಹಾಗೂ ಗರಿಕೆ ಕೊಡುವ ತೊಂದರೆಯನ್ನು ಒಗಟುಗಳು ಹೇಗೆ ವಿವರಿಸುತ್ತವೆ?**

* ಹೊಲದ ಬದುವಿನಲ್ಲಿ ಹುಟ್ಟುವ ಉತ್ತರಾಣಿ ಗಿಡದಲ್ಲಿ ಬೆಳೆಯುವ ಬೀಜಗಳು ಮುಳ್ಳಿನಂತಿರುತ್ತವೆ.

ಆ ಗಿಡವಿರುವ ಬದುವಿನಲ್ಲಿ ನಡೆದುಕೊಂಡು ಹೋಗುವವರ ಸೆರಗನ್ನು ಹಿಡಿದುಕೊಳ್ಳುತ್ತವೆ.

* ರೈತನಿಗೆ ಬಹಳ ತೊಂದರೆ ಕೊಡುವ ಗರಿಕೆಯನ್ನು ಎಷ್ಟೇ ಉತ್ತರೂ ಹೊಲದಲ್ಲಿ ನಾಶಪಡಿಸಲು ಸಾಧ್ಯವಿಲ್ಲ;

ಅದು ಮತ್ತೆ ಚಿಗುರಿಕೊಳ್ಳುತ್ತದೆ.ರೈತನ ಪ್ರಯತ್ನವನ್ನು ಕಂಡು 'ನಿನ್ನದು ವ್ಯರ್ಥ ಪ್ರಯತ್ನ.

ನನ್ನನ್ನು ನಾಶಪಡಿಸಲು ನಿನ್ನಿಂದ ಸಾಧ್ಯವಿಲ್ಲ' ವೆಂಬಂತೆ ನಗುತ್ತದೆ ಎಂದು ಒಗಟಿನಲ್ಲಿ ಸ್ವಾರಸ್ಯಕರವಾಗಿ ಹೇಳಲಾಗಿದೆ.

**5. ಬೀಸುವ ಕಲ್ಲನ್ನು ಕುರಿತ ಒಗಟನ್ನು ವಿವರಿಸಿರಿ.**

* ಬೀಸುವ ಕಲ್ಲಿನ ಮೇಲೆ ಮಧ್ಯಭಾಗದಲ್ಲಿರುವ ಬಾಯಿಗೆ ಧಾನ್ಯವನ್ನು ಹಾಕಲಾಗುತ್ತದೆ.
* ಬೀಸುತ್ತಿದ್ದಂತೆ ಅದು ಕಲ್ಲಿನ ಒಳಗೆ ಹೋಗುತ್ತದೆ.ಅದನ್ನೆ ಒಗಟಿನಲ್ಲಿ 'ಬಾಯಲ್ಲಿ ತಿಂಬೋದು' ಎನ್ನಲಾಗಿದೆ.
* ಹಾಗೆಯೇ ಅದರಲ್ಲಿ ಬೀಸುವಾಗ ಅದರ ಸುತ್ತ ಹಿಟ್ಟು ಚೆಲ್ಲುತ್ತದೆ, ಇದನ್ನೆ ಕುಕ್ಕುವುದು(ಕಕ್ಕುವುದು) ಎಂದು ಹೇಳಲಾಗಿದೆ.

**6. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?**

* ಒಗಟುಗಳಿಂದ ಚಿಂತನೆ ಮಾಡುವ ಮನೋಭಾವ ಹೆಚ್ಚುತ್ತದೆ.
* ಉತ್ತರ ಕಂಡುಕೊಳ್ಳಲು ಮನಸ್ಸು ಆಲೋಚಿಸುತ್ತದೆ.ಆಗ ಆಲೋಚನಾ ಶಕ್ತಿ ಹೆಚ್ಚಾಗುತ್ತದೆ.
* ಮುದುಡಿದ ಮನಸ್ಸನ್ನು ಅರಳಿಸಲು, ಮನೋರಂಜನೆ ನೀಡಲು ಒಗಟುಗಳು ಸಹಾಯಕವಾಗುತ್ತವೆ.
* ಜನಪದರ ಬುದ್ಧಿವಂತಿಕೆಯನ್ನು ತಿಳಿಯುವುದರ ಜೊತೆಗೆ
* ಒಂದು ವಸ್ತುವನ್ನು ಹೇಗೆಲ್ಲ ಬಣ್ಣಿಸಬಹುದೆಂಬ ಚಿಂತನೆ ಮೂಡುತ್ತದೆ.

## ಅಲಂಕಾರಗಳು :

ಅಲಂಕಾರ : ಕಾವ್ಯಕ್ಕೆ ಶೋಭೆ ತರುವ ಧರ್ಮವೇ ಅಲಂಕಾರ.ಮಾತಿನ ಅಥವಾ ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಸಲುವಾಗಿ ಬಳಸುವ ಶಬ್ದ ಹಾಗೂ ಅರ್ಥ ಚಮತ್ಕಾರಗಳನ್ನು 'ಅಲಂಕಾರ' ಎನ್ನುವರು.

ಉಪಮಾಲಂಕಾರ

ಎರಡು ವಸ್ತುಗಳಿಗಿರುವ (ಉಪಮೇಯ ಮತ್ತು ಉಪಮಾನಗಳಿಗಿರುವ) ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದನ್ನು 'ಉಪಮಾಲಂಕಾರ' ಎನ್ನುವರು.

1. 'ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ'

ಅಲಂಕಾರ :–ಉಪಮಾಲಂಕಾರ

ಲಕ್ಷಣ :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

ಉಪಮೇಯ :– ಸತಿಪತಿಗಳೊಂದಾಗದವನ ಭಕ್ತಿ

ಉಪಮಾನ :–ಅಮೃತದೊಳು ಬೆರೆತ ವಿಷ

ಉಪಮಾ ವಾಚಕ :– ಅಂತೆ

ಸಮಾನ ಧರ್ಮ :– ಸ್ಪಷ್ಟವಾಗಿಲ್ಲ

ಸಮನ್ವಯ :–ಇಲ್ಲಿ ಉಪಮೇಯವಾದ ಸತಿಪತಿಗಳೊಂದಾಗದ ಭಕ್ತಿಯನ್ನು ಉಪಮಾನವಾದ ಅಮೃತದೊಳು ಬೆರೆತ ವಿಷಕ್ಕೆ ಹೋಲಿಸಿ ವರ್ಣಿಸಲಾಗಿರುವುದರಿಂದ ಇದು ಉಪಮಾಲಂಕಾರವಾಗಿದೆ

2. ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ

ಅಲಂಕಾರ :–ಉಪಮಾಲಂಕಾರ

ಲಕ್ಷಣ :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

ಉಪಮೇಯ :– ನೀಚರಿಗೆ ಮಾಡುವ ಉಪಕಾರ

ಉಪಮಾನ :–ಹಾವಿಗೆ ಎರೆದ ಹಾಲು

ಉಪಮಾ ವಾಚಕ :– ಅಂತೆ

ಸಮಾನ ಧರ್ಮ :– ಸ್ಪಷ್ಟವಾಗಿಲ್ಲ

ಸಮನ್ವಯ :– ಇಲ್ಲಿ ಉಪಮೇಯವಾದ ನೀಚರಿಗೆ ಮಾಡಿದ ಉಪಕಾರವನ್ನು ಉಪಮಾನವಾದ ಹಾವಿಗೆ ಎರೆದ ಹಾಲಿಗೆ

3. ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.

ಅಲಂಕಾರ :–ಉಪಮಾಲಂಕಾರ

ಲಕ್ಷಣ :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

ಉಪಮೇಯ :– ಭೀಮ ದುರ್ಯೋಧನರು

ಉಪಮಾನ :–ಮದಗಜಗಳು

ಉಪಮಾ ವಾಚಕ :– ಅಂತೆ

ಸಮಾನ ಧರ್ಮ :– ಹೋರಾಡುವುದು

ಸಮನ್ವಯ :–ಇಲ್ಲಿ ಉಪಮೇಯವಾದ ಭೀಮದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಹೋಲಿಸಿ ವರ್ಣಿಸಲಾಗಿದೆ.

4. ಸೀತೆಯ ಮುಖ ಕಮಲದಂತೆ ಅರಳಿತು.

ಅಲಂಕಾರ :–ಉಪಮಾಲಂಕಾರ.

ಲಕ್ಷಣ :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

ಉಪಮೇಯ :– ಸೀತೆಯ ಮುಖ

ಉಪಮಾನ :–ಕಮಲ

ಉಪಮಾ ವಾಚಕ :– ಅಂತೆ

ಸಮಾನ ಧರ್ಮ :– ಅರಳುವುದು

ಸಮನ್ವಯ :–ಇಲ್ಲಿ ಉಪಮೇಯವಾದ ಸೀತೆಯ ಮುಖವನ್ನು, ಉಪಮಾನವಾದ ಕಮಲಕ್ಕೆ ಹೋಲಿಸಿ ವರ್ಣಿಸಲಾಗಿದೆ.

5. "ಒಳಗಿನ ಮಂದಿ ಗುಂಡು ಹೊಡಿಸಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ"

ಅಲಂಕಾರ :– ಉಪಮಾಲಂಕಾರ

ಲಕ್ಷಣ :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

ಉಪಮೇಯ :–ಒಳಗಿನ ಮಂದಿ ಗುಂಡು ಹೊಡೆಯುವುದು

ಉಪಮಾನ :–ಮುಂಗಾರಿನಲ್ಲಿ ಸಿಡಿಲು ಸಿಡಿಯುವುದು

ಉಪಮಾ ವಾಚಕ :–ಹಾಂಗ

ಸಮಾನ ಧರ್ಮ :– ಹೊಡೆಯುವುದು.

ಸಮನ್ವಯ :–ಇಲ್ಲಿ ಉಪಮೇಯವಾದಒಳಗಿನ ಮಂದಿ ಗುಂಡು ಹೊಡೆಯುವುದನ್ನು ಉಪಮಾನವಾದ ಮುಂಗಾರಿನಲ್ಲಿ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

6. "ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ"

ಅಲಂಕಾರ :– ಉಪಮಾಲಂಕಾರ

ಲಕ್ಷಣ :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

ಉಪಮೇಯ :–ಗುಂಡು ಸುರಿಯುವುದು

ಉಪಮಾನ :–ಸಿಡಿಲು ಸಿಡಿಯುವುದು

ಉಪಮಾ ವಾಚಕ :=ಹಾಂಗ

ಸಮಾನ ಧರ್ಮ :–ಸುರಿಯುವುದು

ಸಮನ್ವಯ :– ಇಲ್ಲಿ ಉಪಮೇಯವಾದ ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

- ರೂಪಕಾಲಂಕಾರ

ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಲಂಕಾರ'.

1. ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ

ಅಲಂಕಾರ :– ರೂಪಕಾಲಂಕಾರ

ಲಕ್ಷಣ :–ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದುವರ್ಣಿಸಿದರೆ ಅದೇ 'ರೂಪಕಾಲಂಕಾರ'. ಉಪಮೇಯ :– ಒಡಲಬೇಗೆ

ಉಪಮಾನ :–ಬೆಂಕಿಯುರಿ

ಸಮನ್ವಯ :– ಇಲ್ಲಿ ಉಪಮೇಯವಾದ ಅಯೋಧ್ಯೆಯ ಪ್ರಜೆಗಳ ಒಡಲಬೇಗೆಯನ್ನು ಉಪಮಾನವಾದ ಬೆಂಕಿಯುರಿಗೆ ಅಭೇದವಾಗಿ ಊಹಿಸಿರುವುದರಿಂದ ಇದು ರೂಪಕಾಲಂಕಾರ.

2. ಸೀತೆಯ ಮುಖಕಮಲ ಅರಳಿತು.

ಅಲಂಕಾರ :– ರೂಪಕಾಲಂಕಾರ

ಲಕ್ಷಣ :– ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಲಂಕಾರ'.

ಉಪಮೇಯ :– ಸೀತೆಯ ಮುಖ

ಉಪಮಾನ :–ಕಮಲ

ಸಮನ್ವಯ :– ಇಲ್ಲಿ ಉಪಮೇಯವಾದ ಸೀತೆಯ ಮುಖಕ್ಕೂ ಉಪಮಾನವಾದ ಕಮಲಕ್ಕೂ ಯಾವುದೇ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿರುವುದರಿಂದ ಇದು ರೂಪಕಾಲಂಕಾರ.

3. "ಮಾರಿಗೌತಣವಾಯ್ತು ನಾಳಿನ ಭಾರತವು"

ಅಲಂಕಾರ :– ರೂಪಕಾಲಂಕಾರ

ಲಕ್ಷಣ :– ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಲಂಕಾರ'.

ಉಪಮೇಯ :– ನಾಳಿನ ಭಾರತ ಯುದ್ಧ

ಉಪಮಾನ :– ಮಾರಿಯ ಔತಣ

ಸಮನ್ವಯ :– ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ವರ್ಣಿಸಿರುವುದರಿಂದ ಇದು ರೂಪಕಾಲಂಕಾರ.

| ತದ್ದಿತಾಂತಗಳು : | | |
|---|---|---|
| ತದ್ಧಿತಾಂತನಾಮ | ತದ್ಧಿತಾಂತ ಭಾವನಾಮ | ತದ್ಧಿತಾಂತವ್ಯಯ |
| ಬರಹಗಾರ | ದೊಡ್ಡತನ – ಕುಂಟು–ನಲ್ಮೆ | ರಾಮನಂತೆ–ಹೋಗುವತನಕ |
| ಗುಣವಂತೆ | ಚೆಲುವಿಕೆ–ಕುರುಡು–ಜಾಣ್ಮೆ | ಚಂದ್ರನವೊಲ್–ಶಾಲೆಯತನಕ |
| ಒಕ್ಕಲಿಗ | ಬಿಳುಪು–ತೊದಲು–ಇಂಪು | ಅಲ್ಲಿಯತನಕ–ದೂರದವರೆಗೆ |
| ಹಾವಾಡಿಗಿತ್ತಿ | ಬಡತನ–ಸಿರಿತನ–ಹಿರಿತನ | ಮಕ್ಕಳಂತೆ–ನನಗಾಗಿ |

| ಕೃದಂತಗಳು : | | |
|---|---|---|
| ಕೃದಂತನಾಮ | ಕೃದಂತಭಾವನಾಮ | ಕೃದಂತವ್ಯಯ |
| ಮಾಡಿದ–ಮಾಡುವ–ಮಾಡದ | ಮಾಟ–ನಂಬಿಕೆ–ನಾಚಿಕೆ | ಮಾಡಿ–ಅಳುತ್ತಾ |
| ತಿನ್ನುವ–ಬರೆವ–ತಿಂದ | ತಿನ್ನುವಿಕೆ–ನಡುವಳಿಕೆ–ಬರವಣಿಗೆ | ತಿಂದು–ತಿನ್ನಲಿಕ್ಕೆ |
| ನಡೆಯುವ–ತಿನ್ನದ | ನಡೆತೆ–ಹೊಳಪು, ನೆನಪು | ನಡೆಯುತ್ತಾ |
| ಓಡಿದ–ಹೋಗದ | ಓಟ–ಆಟ–ಊಟ,ನೋಟ | ಓಡುತ–ಮಾಡುತ |

| ವಿಭಕ್ತಿ ಪ್ರತ್ಯಯಗಳು | | | | | |
|---|---|---|---|---|---|
| ವಿಭಕ್ತಿ | ಕಾರಕಾರ್ಥ | ಹೊಸಗನ್ನಡ ಪ್ರತ್ಯಯ | ರೂಪ | ಹಳಗನ್ನಡ ಪ್ರತ್ಯಯ | ರೂಪ |
| ಪ್ರಥಮಾ | ಕರ್ತ್ರರ್ಥ | ಉ | ಸಾವಿತ್ರಿಯು | ಮ್ | ಸಾವಿತ್ರಿಯಮ್ |
| ದ್ವಿತೀಯ | ಕರ್ಮಾರ್ಥ | ಅನ್ನು | ಸಾವಿತ್ರಿಯನ್ನು | ಅಂ | ಸಾವಿತ್ರಿಯಂ |
| ತೃತೀಯ | ಕರಣಾರ್ಥ | ಇಂದ | ಸಾವಿತ್ರಿಯಿಂದ | ಇಂ, ಇಂದಂ, ಇಂದೆ | ಸಾವಿತ್ರಿಯಿಂ |
| ಚತುರ್ಥಿ | ಸಂಪ್ರದಾನ | ಗೆ, ಇಗ, ಕ್ಕೆ | ಸಾವಿತ್ರಿಗೆ | ಗೆ, ಕೆ, ಕ್ಕೆ | ಸಾವಿತ್ರಿಂಗೆ |
| ಪಂಚಮಿ | ಅಪಾದಾನ | ದೆಸೆಯಿಂದ | ಸಾವಿತ್ರಿಯ ದೆಸೆಯಿಂದ | ಅತ್ತಣಿಂ, ಅತಣಿಂದಂ | ಸಾವಿತ್ರಿ ಯತ್ತಣಿಂ |
| ಷಷ್ಠಿ | ಸಂಬಂದ | ಅ | ಸಾವಿತ್ರಿಯ | ಅ | ಸಾವಿತ್ರಿಯ |
| ಸಪ್ತಮಿ | ಅಧಿಕರಣ | ಅಲ್ಲಿ | ಸಾವಿತ್ರಿಯಲ್ಲಿ | ಒಳ್ | ಸಾವಿತ್ರಿಯೊಳ್ |

**ಪದ–ಅರ್ಥ**

ಎಡೆ – ಸ್ಥಳ
ತೇಜ – ಕಾಂತಿ
ಅರ್ತಿ – ಪ್ರೀತಿ
ಬಳಿ – ದಾರಿ
ಅಬ್ಬೆ – ತಾಯಿ
ಬನ್ನ – ಕಷ್ಟ
ಸುರಭಿ – ದುಂಬಿ
ಭೂಮಿಜಾತೆ–ಸೀತೆ
ಪೆರೆ – ಚಂದ್ರ
ಅಸುರ–ರಾಕ್ಷಸ
ಆನನ – ಮುಖ
ಜರ್ಬು – ಭರ್ಜರಿ
ಎಕ್ಕಡ – ಚಪ್ಪಲಿ
ಉಪಾಸನೆ–ಪೂಜೆ
ಬಡವಾ–ಹೆಣ್ಣುಕುದುರೆ
ಅಂಬುಜ – ತಾವರೆ
ಅರ್ಕ – ಸೂರ್ಯ
ಅಸ್ತಿಭಾರ–ಬುನಾದಿ
ಆರ್ತತೆ–ಬಯಕೆ
ಬೀಯಕ್ಕೆ – ಖರ್ಚು
ಅಬ್ಜೋದರ–ವಿಷ್ಣು
ಬೇಹಾರಿ–ವ್ಯಾಪಾರಿ
ಶಿತಿಕಂಠ–ಶಿವ
ಕುರಿ – ಹೊಂಡ
ಪೊಳಲ್–ನಗರ
ತಸ್ಕರ – ಕಳ್ಳ
ಬಸಿರ್ – ಹೊಟ್ಟೆ
ಆದಿತ್ಯ – ಸೂರ್ಯ
ಮೇದಿನಿ – ಭೂಮಿ

**ಪದ–ಅರ್ಥ**

ಬವರ – ಜಗಳ
ಕೃತ್ರಿಮ – ಮೋಸ
ಪನ್ನಗ – ಹಾವು
ಖಿರ್ದಿ–ಕಂದಾಯ ಪುಸ್ತಕ
ಘ್ರಾಣೇಂದ್ರಿಯ–ಮೂಗು
ಪಂಜಾ–ಹುಲಿಯ ಅಂಗಾಲು
ಗಾಂಡೀವಿ–ಅರ್ಜುನ
ಅಳ್ಕಿರು – ಪ್ರೀತಿ
ಪಚ್ಚಿ – ಹಂಚಿ
ಸಂಭೂತ – ಹುಟ್ಟಿದ
ಹುಕುಂ – ಆದೇಶ
ಹತಾರ – ಆಯುಧ
ಕಾರಕೂನ–ಗುಮಾಸ್ತ
ಚರಿಗೆ–ತಂಬಿಗೆ
ಮರ್ಕಟ – ಕೋತಿ
ಅಂದಣ – ಪಲ್ಲಕ್ಕಿ
ಸೊಣಗ – ನಾಯಿ
ಪಥ – ದಾರಿ
ಇನ – ಸೂರ್ಯ
ದೃಗಜಲ–ಕಣ್ಣೀರು
ರಾಜೀವಸಖ–ಸೂರ್ಯ
ನೃಪ – ದೊರೆ
ಮುಳಿ – ಕೋಪ
ಹಯ – ಕುದುರೆ
ವಾಜಿ – ಕುದುರೆ
ಉರ್ವಿ – ಭೂಮಿ
ಗಳ – ಕೊರಳು
ಅಗಡು – ಶೌರ್ಯ.

**ತತ್ಸಮ – ತದ್ಭವ**

ಗ್ರಹ – ಗರ
ದೃಷ್ಟಿ – ದಿಟ್ಟಿ
ತವಸಿ – ತಪಸ್ವಿ
ವಿಜ್ಞಾನ–ಬಿನ್ನಾಣ
ಮುಖಶಾಲೆ–ಮೊಗಸಾಲೆ
ದಾತೃ – ದಾತಾರ
ವಿಜ್ಞಾಪನೆ–ಭಿನ್ನಹ
ಸುಧೆ – ಸೊದೆ
ತಟ – ತಡಿ
ಸಾಮಂತ– ಸಾವಂತ
ವರ್ಷ – ವರುಸ
ಶ್ರೀ – ಸಿರಿ
ರಾಯ – ರಾಜ
ವೀರ – ಬೀರ
ಭಕ್ತ – ಬಕುತ
ದೆಸೆ – ದಿಶಾ
ಚಂದ್ರ – ಚಂದಿರ
ವಂಶ – ಬಂಚ
ಸ್ಥಾನ – ತಾಣ
ಯಶ – ಜಸ
ಪಟ್ಟಣ – ಪತ್ತನ
ಕಾರ್ಯ – ಕಜ್ಜ
ವ್ಯಯ – ಬೀಯ
ಕೋಕಿಲ–ಕೋಗಿಲೆ
ವ್ಯಾಪಾರಿ – ಬೇಹಾರಿ
ಸಂದೇಹ–ಸಂದೆಯ
ಅಮೃತ – ಅಮರ್ದು
ದೀವಿಗೆ – ದೀಪಿಕಾ
ಪುಣ್ಯ – ಪುನ್ನ

**ತತ್ಸಮ – ತದ್ಭವ**

ಕಣಿ – ಗನೆ (ಗಣಿ)
ವೀರ – ಬೀರ
ಹಕ್ಕಿ – ಪಕ್ಷಿ
ಪುಣ್ಯ – ಪುನ್ನ
ಸ್ಥಾನ – ತಾಣ
ಯಜ್ಞ – ಜನ್ನ
ಬ್ರಹ್ಮ – ಬೊಮ್ಮ
ಬಂಜೆ – ವಂಧ್ಯಾ
ವಂಶ – ಬಂಚ
ಪ್ರಸಾದ – ಹಸಾದ
ಅಕ್ಷಯ–ಅಚ್ಚಯ
ಕರ್ತರಿ–ಕತ್ತರಿ
ಕರ್ನಾಟ–ಕನ್ನಡ
ಕೋಕಿಲ–ಕೋಗಿಲೆ
ಖಡ್ಗ–ಕಡುಗ
ಗ್ರಾಮ–ಗಾವ
ದೀಪಾವಳಿ–ದೀವಳಿಗೆ
ಪುಸ್ತಕ–ಹೊತ್ತಿಗೆ,
ದ್ಯೂತ–ಜೂಜು
ಯಜ್ಞ–ಜನ್ನ

# ಛಂದಸ್ಸು

## ಮಾತ್ರಾಗಣ ಛಂದಸ್ಸು: ಕಂದ, ಷಟ್ಪದಿ, ರಗಳೆ, ಮಾತ್ರಾ ತ್ರಿಪದಿ

### ಛಂದಸ್ಸು: ಕಂದಪದ್ಯ

* ಕಂದಪದ್ಯದಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ: 64
* ಕಂದಪದ್ಯದ ಪ್ರತಿ ಗಣದಲ್ಲಿರುವ ಮಾತ್ರೆಗಳ ಸಂಖ್ಯೆ: 4
* ಕಂದಪದ್ಯವು ಹೊಂದಿರುವ ಸಾಲುಗಳು: 4
* ಕಂದಪದ್ಯದ ಗಣ ವಿನ್ಯಾಸ:

| | | |
|---|---|---|
| 4 ı 4 ı 4 ı | = 12 | ಒಟ್ಟು 64 ಮಾತ್ರೆಗಳು |
| 4 ı 4 ı 4 ı 4 ı | = 20 | |
| 4 ı 4 ı 4 ı | = 12 | |
| 4 ı 4 ı 4 ı 4 ı | = 20 | |

**ಪ್ರಮುಖ ಉದಾಹರಣೆಗಳು:**

ನಿಮಗೆ ಪೊಡೆಮಟ್ಟು ಪೋಪೀ।
ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ

| 4 | 4 | 4 | |
|---|---|---|---|
| U U U U | U — U | — — | = 12 ಮಾತ್ರೆಗಳು |
| ನಿ ಮ ಗೆ ಪೊ | ಡೆ ಮ ಟ್ಟು | ಪೋ ಪೀ | |

| 4 | 4 | 4 | 4 | 4 | |
|---|---|---|---|---|---|
| U — U | — — | U U U U | — — | U U — | = 20 ಮಾತ್ರೆಗಳು |
| ಸ ಮ ಕ | ಟ್ಟಿಂ ಬಂ | ದೆ ನ ಹಿ ತ | ರೊಳ್ ಸಂ | ಧಿ ಯ ನೇಂ | |

ಛಂದಸ್ಸು : ಕಂದಪದ್ಯ

ಅತಿಕುಟಿಲಮನಂ ಧನಲು
ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ

| 4 | 4 | 4 |
|---|---|---|
| U U U U | U U — | U U — |
| ಅ ತಿ ಕು ಟಿ | ಲ ಮ ನಂ | ಧ ನ ಲು |

| 4 | 4 | 4 | 4 | 4 |
|---|---|---|---|---|
| U U — | — — | U — U | U U — | U U — |
| ಬ್ಧ ತೆ ಯಿಂ | ದಂ ದು | ಷ್ಟ ಬು ದ್ಧಿ | ನು ಡಿ ದಂ | ಪು ಸಿ ಯಂ |

ಛಂದಸ್ಸು : ಕಂದಪದ್ಯ

ನೆಲಕಿಜೆ ವೆನೆಂದು ಬಗೆದಿರೆ
ಚಲಕಿಜೆ ವೆಂ ಪಾಂ ಡುಸುತರೊ ಳೀನೆಲ ನಿದು ಪಾ

| 4 | 4 | 4 |
|---|---|---|
| U U U U | U — U | U U U U |
| ನೆ ಲ ಕಿ ಜೆ | ವೆ ನೆಂ ದು | ಬ ಗೆ ದಿ ರೆ |

| 4 | 4 | 4 | 4 | 4 |
|---|---|---|---|---|
| U U U U | — — | U U U U | — U U | U U — |
| ಚ ಲ ಕಿ ಜೆ | ವೆಂ ಪಾಂ | ಡು ಸು ತ ರೊ | ಳೀ ನೆ ಲ | ನಿ ದು ಪಾ |

ಛಂದಸ್ಸು : ಕಂದಪದ್ಯ

# ಷಟ್ಪದಿ

* ಷಟ್ಪದಿಯಲ್ಲಿರುವ ಸಾಲುಗಳ ಸಂಖ್ಯೆ: 6

* ಷಟ್ಪದಿಯ ವಿಧಗಳು : 6 (ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ)

## ಭಾಮಿನಿ ಷಟ್ಪದಿ

* ಭಾಮಿನಿ ಷಟ್ಪದಿಯ ಗಣ ವಿನ್ಯಾಸ

| | | |
|---|---|---|
| 3 । 4 । 3 । 4 । | = 14 | ಒಟ್ಟು = 102 ಮಾತ್ರೆಗಳು |
| 3 । 4 । 3 । 4 । | = 14 | |
| 3 । 4 । 3 । 4 । 3 । 4 । ಗುರು | = 21 + 2 = 23 | |
| 3 । 4 । 3 । 4 । | = 14 | |
| 3 । 4 । 3 । 4 । | = 14 | |
| 3 । 4 । 3 । 4 । 3 । 4 । ಗುರು | = 21 + 2 = 23 | |

**ಉದಾಹರಣೆ:**

ಏನು ಹೇಳ್ವೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ ॥

| 3 | 4 | 3 | 4 |
|---|---|---|---|
| — ∪ | — — | — ∪ | — — |
| ಏ ನು | ಹೇ ಳ್ವೈ | ಕ ರ್ಣ | ಚಿ ತ್ತ |

| 3 | 4 | 3 | 4 |
|---|---|---|---|
| — ∪ | — ∪ ∪ | ∪ ∪ ∪ | — — |
| ಗ್ಲಾ ನಿ | ಯಾ ವು ದು | ಮ ನ ಕೆ | ಕುಂ ತೀ |

| 3 | 4 | 3 | 4 | 3 | 4 | ಗುರು |
|---|---|---|---|---|---|---|
| — ∪ | ∪ ∪ ∪ ∪ | — ∪ | — ∪ ∪ | — ∪ | — ∪ ∪ | — |
| ಸೂ ನು | ಗ ಳ ಬೆ ಸೆ | ಕೈ ಸಿ | ಕೊಂ ಬು ದು | ಸೇ ರ | ದೇ ನಿ ನ | ಗೆ |

ಛಂದಸ್ಸು : ಭಾಮಿನಿ ಷಟ್ಪದಿ

ಕೊರಳ ಸೆರೆ ಹಿ ಗ್ಗಿದವು ದೃಗುಜಲ
ಉರವ ಣೆಸಿ ಕಡು ನೊಂದ ನಕಟಾ
ಕುರುಪ ತಿಗೆ ಕೇ ಡಾದು ದೆಂದನು ತನ್ನ ಮನದೊಳ ಗೆ

| 3 | 4 | 3 | 4 |
|---|---|---|---|
| ∪ ∪ ∪ | ∪ ∪ — | ∪ ∪ ∪ | ∪ ∪ ∪ ∪ |
| ಕೊ ರ ಳ | ಸೆ ರೆ ಹಿ | ಗ್ಗಿ ದ ವು | ದೃ ಗು ಜ ಲ |

| 3 | 4 | 3 | 4 |
|---|---|---|---|
| ∪ ∪ ∪ | ∪ ∪ ∪ ∪ | — ∪ | ∪ ∪ — |
| ಉ ರ ವ | ಣೆ ಸಿ ಕ ಡು | ನೊಂ ದ | ನ ಕ ಟಾ |

| 3 | 4 | 3 | 4 | 3 | 4 | ಗುರು |
|---|---|---|---|---|---|---|
| ∪ ∪ ∪ | ∪ ∪ — | — ∪ | — ∪ ∪ | — ∪ | ∪ ∪ ∪ ∪ | — |
| ಕು ರು ಪ | ತಿ ಗೆ ಕೇ | ಡಾ ದು | ದೆಂ ದ ನು | ತ ನ್ನ | ಮ ನ ದೊ ಳ | ಗೆ |

ಛಂದಸ್ಸು : ಭಾಮಿನಿ ಷಟ್ಪದಿ

## ವಾರ್ಧಕ ಷಟ್ಪದಿ

* ವಾರ್ಧಕ ಷಟ್ಪದಿಯ ಗಣ ವಿನ್ಯಾಸ

| | | |
|---|---|---|
| 5 । 5 । 5 । 5 । | = 20 | ಒಟ್ಟು = 144 ಮಾತ್ರೆಗಳು |
| 5 । 5 । 5 । 5 । | = 20 | |
| 5 । 5 । 5 । 5 । 5 । 5 । ಗುರು | = 32 | |
| 5 । 5 । 5 । 5 । | = 20 | |
| 5 । 5 । 5 । 5 । | = 20 | |
| 5 । 5 । 5 । 5 । 5 । 5 । ಗುರು | = 32 | |

## ಉದಾಹರಣೆ:

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥

| 5 | 5 | 5 | 5 |
|---|---|---|---|
| — ∪ — | — — ∪ | ∪ ∪ ∪ ∪ ∪ | — ∪ — |
| ಉ ರ್ವಿ ಯೊಳ್ | ಕೌ ಸ ಲ್ಯೆ | ಪ ಡೆ ದ ಕು ವ | ರಂ ರಾ ಮ |

| 5 | 5 | 5 | 5 |
|---|---|---|---|
| — ∪ — | — ∪ — | ∪ ∪ — ∪ | ∪ ∪ ∪ ∪ ∪ |
| ನೊ ರ್ವ ನೇ | ವೀ ರ ನಾ | ತ ನ ಯ ಜ್ಞ | ತು ರ ಗ ಮಿ ದು |

| 5 | 5 | 5 | 5 | 5 | 5 | 2 |
|---|---|---|---|---|---|---|
| — ∪ ∪ ∪ | — ∪ — | — ∪ — | ∪ ∪ ∪ — | — ∪ — | ∪ ∪ ∪ — | — |
| ನಿ ರ್ವ ಹಿ ಸ | ಲಾ ರ್ಪ ರಾ | ರಾ ದೊ ಡಂ | ತ ಡೆ ಯ ಲೆಂ | ದಿ ರ್ದ ಲೇ | ಖ ನ ವ ನೋ | ದಿ |

ಛಂದಸ್ಸು : ವಾರ್ಧಕ ಷಟ್ಪದಿ

ಬಲ್ಗಯ್ಯ ನೃಪರಂಜಿ ತಡೆಯದೆ ರ ಘೂದ್ವಹನ ।
ಸೊಲ್ಗೇಳಿ ನಮಿಸಲಿಳೆ ಯೊಳ್ ಚರಿಸು ತದ್ವರದ ।
ನಲ್ಗುದುರೆ ಬಂದು ವಾ ಲ್ಮೀಕಿಯ ನಿ ಜಾಶ್ರಮದ ವಿನಿಯೋಗ ದುಪವನದೊ ಳು ॥

| 5 | 5 | 5 | 5 |
|---|---|---|---|
| — — ∪ | ∪ ∪ — ∪ | ∪ ∪ ∪ ∪ ∪ | — ∪ ∪ ∪ |
| ಬ ಲ್ಗ ಯ್ಯ | ನೃ ಪ ರಂ ಜಿ | ತ ಡೆ ಯ ದೆ ರ | ಘೂ ದ್ವ ಹ ನ |

| 5 | 5 | 5 | 5 |
|---|---|---|---|
| — — ∪ | ∪ ∪ ∪ ∪ ∪ | — ∪ ∪ ∪ | — ∪ ∪ ∪ |
| ಸೊ ಲ್ಗೇ ಳಿ | ನ ಮಿ ಸ ಲಿ ಳೆ | ಯೊಳ್ ಚ ರಿ ಸು | ತ ದ್ವ ರ ದ |

| 5 | 5 | 5 | 5 | 5 | 5 | 2 |
|---|---|---|---|---|---|---|
| — ∪ ∪ ∪ | — ∪ — | — ∪ ∪ ∪ | — ∪ ∪ ∪ | ∪ ∪ — ∪ | ∪ ∪ ∪ ∪ ∪ | — |
| ನ ಲ್ಗು ದು ರೆ | ಬಂ ದು ವಾ | ಲ್ಮೀ ಕಿ ಯ ನಿ | ಜಾ ಶ್ರ ಮ ದ | ವಿ ನಿ ಯೋ ಗ | ದು ಪ ವ ನ ದೊ | ಳು |

ಛಂದಸ್ಸು : ವಾರ್ಧಕ ಷಟ್ಪದಿ

# ವೃತ್ತಪದ್ಯಗಳ ಲಕ್ಷಣ

**ಗುರುವೊಂದಾದಿಯೊಳುತ್ಪಲಂ ಗುರು ಮೊದಲ್ ಮೂರಾಗೆ ಶಾರ್ದೂಲಮಾ**
**ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘು ದ್ವಂದ್ವಂ ಗುರು ದ್ವಂದ್ವಮಾ**
**ಗಿರೆ ಮತ್ತೇಭ ಲಘು ದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ**
**ಹರಿಣಾಕ್ಷೀ, ಲಘುನಾಲ್ಕು ಚಂಪಕಮಿವಾರುಂ ಖ್ಯಾತ ಕರ್ನಾಟಕಂ**

## ಅಕ್ಷರಗಣ ಛಂದಸ್ಸು: ಖ್ಯಾತಕರ್ಣಾಟಕ ವೃತ್ತಗಳು

* ಅಕ್ಷರಗಣದ ವಿಧಗಳು: **8** (ಮನ ಭಯ ಜರ ಸತ)
* ಅಕ್ಷರಗಣದ ಪ್ರತಿ ಗಣದಲ್ಲಿರುವ ಅಕ್ಷರಗಳ ಸಂಖ್ಯೆ: **3**
* ಖ್ಯಾತಕರ್ಣಾಟಕ ವೃತ್ತಗಳ ಸಂಖ್ಯೆ: **6**
* ವೃತ್ತದ ಪ್ರತಿ ಚರಣದಲ್ಲಿರುವ ಸಾಲುಗಳ ಸಂಖ್ಯೆ: **4**
* ಖ್ಯಾತಕರ್ಣಾಟಕ ವೃತ್ತಗಳ ಛಂದಸ್ಸು : **ಅಕ್ಷರಗಣ ಛಂದಸ್ಸು**
* ಖ್ಯಾತಕರ್ಣಾಟಕ ವೃತ್ತಗಳ ವಿಧಗಳು:

1) **ಚಂಪಕಮಾಲಾವೃತ್ತ** – **21 ಅಕ್ಷರಗಳು, ನ ಜ ಭ ಜ ಜ ಜ ರ**
2) **ಉತ್ಪಲಮಾಲಾವೃತ್ತ** – **20 ಅಕ್ಷರಗಳು, ಭ ರ ನ ಭ ಭ ರ ಕೊನೆಯಲ್ಲಿ ಲಘು, ಗುರು**
3) **ಮತ್ತೇಭವಿಕ್ರೀಡಿತವೃತ್ತ** – **20 ಅಕ್ಷರಗಳು, ಸ ಭ ರ ನ ಮ ಯ ಕೊನೆಯಲ್ಲಿ ಲಘು, ಗುರು**
4) **ಶಾರ್ದೂಲವಿಕ್ರೀಡಿತವೃತ್ತ** – **20 ಅಕ್ಷರಗಳು,**
5) **ಸ್ರಗ್ಧರಾವೃತ್ತ** – **21 ಅಕ್ಷರಗಳು**
6) **ಮಹಾಸ್ರಗ್ಧರಾವೃತ್ತ** – **22 ಅಕ್ಷರಗಳು**

**ಪ್ರಮುಖ ಉದಾಹರಣೆಗಳು:**

**ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ∪ ∪ ∪ | ∪ — ∪ | — ∪ ∪ | ∪ — ∪ | ∪ — ∪ | ∪ — ∪ | — ∪ — |
| ಒ ಡ ವೆ | ಯ ನ ರ್ಥಿ | ಗಿ ತ್ತೆ ನ | ವ ನೀ ತ | ಳ ಮಂ ಗು | ರು ಗಿ ತ್ತೆ | ನೀ ಗ ಳೊಂ |

**ಛಂದಸ್ಸು : ಚಂಪಕಮಾಲಾ ವೃತ್ತ**

**ಅಜೆಯಿ ರೆ ನೀಮು ಮಾಮುಮೊ ಡನೋದಿ ದೆವೆಂಬು ದನಣ್ಣ ನಿನ್ನ ನಾ**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ∪ ∪ ∪ | ∪ — ∪ | — ∪ ∪ | ∪ — ∪ | ∪ — ∪ | ∪ — ∪ | — ∪ — |
| ಅ ಜೆ ಯಿ | ರೆ ನೀ ಮು | ಮಾ ಮು ಮೊ | ಡ ನೋ ದಿ | ದೆ ವೆಂ ಬು | ದ ನ ಣ್ಣ | ನಿ ನ್ನ ನಾ |

**ಛಂದಸ್ಸು : ಚಂಪಕಮಾಲಾ ವೃತ್ತ**

**ನುಡಿ ತ ಡವಪ್ಪು ದೊಂದು ಮೊ ಗದೊಳ್‌ಮ ಜುಕಂದೊ ರೆಕೊಳ್ವ ದೊಂದು ನಾ**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ∪ ∪ ∪ | ∪ — ∪ | — ∪ ∪ | ∪ — ∪ | ∪ — ∪ | ∪ — ∪ | — ∪ — |
| ನು ಡಿ ತ | ಡ ವ ಪ್ಪು | ದೊಂ ದು ಮೊ | ಗ ದೊಳ್ ಮ | ಜು ಕಂ ದೊ | ರೆ ಕೊ ಳ್ವ | ದೊಂ ದು ನಾ |

**ಛಂದಸ್ಸು : ಚಂಪಕಮಾಲಾ ವೃತ್ತ**

**ಖಳನೊ ಳವಿಂಗೆ ಕುಪ್ಪೆ ವ ರಮೆಂಬ ವೊಲಾಂಬ ರಮುಂಟೆ ನಿನ್ನದೊಂ**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ∪ ∪ ∪ | ∪ — ∪ | — ∪ ∪ | ∪ — ∪ | ∪ — ∪ | ∪ — ∪ | — ∪ — |
| ಖ ಳ ನೊ | ಳ ವಿಂ ಗೆ | ಕು ಪ್ಪೆ ವ | ರ ಮೆಂ ಬ | ವೊ ಲಾಂ ಬ | ರ ಮುಂ ಟೆ | ನಿ ನ್ನ ದೊಂ |

**ಛಂದಸ್ಸು : ಚಂಪಕಮಾಲಾ ವೃತ್ತ**

**ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ**

| ಭ | ರ | ನ | ಭ | ಭ | ರ | ಲ ಗು |
|---|---|---|---|---|---|---|
| — ∪ ∪ | — ∪ — | ∪ ∪ ∪ | — ∪ ∪ | — ∪ ∪ | — ∪ — | ∪ — |
| ಮೇ ದಿ ನಿ | ಯಂ ಕ್ರ ಮ | ಕ್ರ ಮ ದೆ | ಪ ರ್ವಿ ದು | ದಾ ತ್ತ ನ | ಭೋ ವಿ ಭಾ | ಗ ಮಾ |

**ಛಂದಸ್ಸು : ಉತ್ಪಲಮಾಲಾ ವೃತ್ತ**

# ಪ್ರಬಂಧ ಬರಹಗಳು

## 1. ಮೇಕ್ ಇನ್ ಇಂಡಿಯಾ

**ಪೀಠಿಕೆ :**

'ಮೇಕ್ ಇನ್ ಇಂಡಿಯಾ' ಇದು ಭಾರತದ ಪ್ರಧಾನಿ ನರೇಂದ್ರಮೋದಿಯವರ ಮಹಾತ್ವಾಕಾಂಕ್ಷಿ ಅಭಿಯಾನಗಳಲ್ಲಿ ಒಂದು. ಈ ಅಭಿಯಾನದ ಮೂಲಕ ಜಾಗತಿಕ ಮತ್ತು ಸ್ಥಳೀಯ ಉದ್ಯಮಿಗಳ ಬೃಹತ್ ಸಮಾವೇಶದ ಜೊತೆಗೆ ದೇಶದ ಉತ್ಪದನಾ ಕ್ಷೇತ್ರದಲ್ಲಿ ಗಣನೀಯ ಪ್ರಮಾಣದ ಉದ್ಯೋಗ ಸೃಷ್ಟಿಸುವುದಾಗಿದೆ. ಸ್ಥಿರತೆ ಮತ್ತು ಧೈರ್ಯದ ಪ್ರತೀಕವಾದ ಸಿಂಹ ಮೇಕ್ ಇನ್ ಇಂಡಿಯಾದ ಲಾಂಛನವಾಗಿದೆ.

**ವಿಷಯ ನಿರೂಪಣೆ :**

'ಮೇಕ್ ಇನ್ ಇಂಡಿಯಾ' ಅಭಿಯಾನವು ಮೂಲತ: ದೇಶಿಯ ಮತ್ತು ಸಾಗರೋತ್ತರ ಹೂಡಿಕೆದಾರರರ ಭರವಸೆದಾಯಕವಾಗಿದೆ. ಅದಲ್ಲದೇ ಭಾರತವನ್ನು ಒಂದು ಮುಖ್ಯ ಉತ್ಪಾದನಾ ಕೇಂದ್ರವಾಗಿಮಾಡುವ ಮತ್ತು 125 ಕೋಟಿ ಜನಸಂಖ್ಯೆಯಿಂದ ಪ್ರಭಲವಾದ ಭಾರತದಲ್ಲಿ ಉದ್ಯೋಗವಕಾಶಗಳು ಕಲ್ಪಿಸುವ ಯೋಜನೆಯಾಗಿದೆ. ಕ್ರಿ.ಶ 2022 ರ ಹೊತ್ತಿಗೆ ಉತ್ಪಾದನಾ ವಲಯದಲ್ಲಿ ದೇಶಿಯ ಮೌಲ್ಯದ ಜೊತೆಗೆ ಉತ್ಪಾದನಾ ತಾಂತ್ರಿಕ ಆಳದ ಹೆಚ್ಚಳ ಹಾಗೂ ಜಾಗತಿಕ ಮಟ್ಟದಲ್ಲಿ ಭಾರತೀಯ ಉತ್ಪಾದನಾ ವಲಯದ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು. ಈ ಯೋಜನೆಯ ವಿಶೇಷ ಕಾರ್ಯವಾಗಿದೆ

ಭಾರತವು " ಅನುಕೂಲಕರವಾದ ಜನಸಂಖ್ಯಾ ಲಾಭಾಂಶ" ಹೊಂದುವ ಧನಾತ್ಮಕ ಅಂಶಗಳನ್ನು ಹೊಂದಿದೆ. ಇದು ಗುಣಮಟ್ಟದ ಉದ್ಯೋಗಿಗಳ ನಿರಂತರ ಲಭ್ಯತೆ ಮತ್ತು ಉದ್ಯೋಗ ಭತ್ಯೆ, ವೆಚ್ಚ ಇವುಗಳು ಇತರ ದೇಶಗಳಿಗೆ ಹೋಲಿಕೆ ಮಾಡಿದರೆ ಕಡಿಮೆ ಇದೆ. ಜವಾಬ್ದಾರಿಯುತವಾಗಿ ವಿಶ್ವಾಸರ್ಹತೆಯಿಂದ ಮತ್ತು ವೃತ್ತಿಪರತೆಯಿಂದ ಕಾರ್ಯಾಚರಣೆ ನಡೆಸುವ ವ್ಯಾಪಾರ ಕೇಂದ್ರಗಳಿವೆ. ಅಲ್ಲದೇ ದೇಶವು ಕಾನೂನಿನ ಮತ್ತು ದೇಶಿಯ ಮಾರುಕಟ್ಟೆಯ ಪ್ರಭಲ ಗ್ರಾಹಕೀಕರಣ ಸಾಮರ್ಥ್ಯವನ್ನು ನಡೆಸುವ ಒಂದು ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯನ್ನು ಹೊಂದಿದೆ. ಈ ಎಲ್ಲ ಅಂಶಗಳು ಮೇಕ್ ಇನ್ ಇಂಡಿಯಾದ ಯಶಸ್ಸಿಗೆ ಸಹಾಯಕವಾಗಿವೆ.

**ಉಪಸಂಹಾರ :**

ಮಂಗಳಯಾನ ಯಶಸ್ಸಿನ ಬಳಿಕ ಭಾರತದ ಪ್ರತಿಬೆಯ ಬಗ್ಗೆ ಯಾರೊಬ್ಬರೂ ಮಾತನಾಡುವಂತಿಲ್ಲ. ಆದರೆ ನಾವೆಲ್ಲ ಶ್ರದ್ಧೆಯಿಂದ ಈ ಯೋಜನೆಗೆ ಪ್ರೋತ್ಸಾಹ ನೀಡಬೇಕಿದೆ. ಬನ್ನಿ ನಾವೆಲ್ಲರೂ ಸೇರಿ ಮೇಕ್ ಇನ್ ಇಂಡಿಯಾವನ್ನು ಯಶಸ್ವಿಗೊಳಿಸೋಣ, ಯುವಕರಿಗೆ ಉದ್ಯೋಗವಕಾಶ ಸೃಷ್ಟಿಸೋಣ, ಭರತದ ಬಡತನ ನೀಗಿಸೋಣ.

## 2. ಸ್ವಚ್ಛ ಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ

**ಪೀಠಿಕೆ :**

'ಸದೃಢವಾದ ಶರೀರದಲ್ಲಿ ಸದೃಢವಾದ ಮನಸ್ಸು ಇರುತ್ತದೆ.' ಎಂಬ ನಾಣ್ಣುಡಿಯಂತೆ ನಮ್ಮ ಆರೋಗ್ಯದ ದೃಷ್ಟಿಯಿಂದ ನಾವು ವಾಸಿಸುವ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ನಮ್ಮ ಆದ್ಯಕರ್ತವ್ಯವಾಗಿದೆ. ಈ ದಿಸೆಯಲ್ಲಿ ಪ್ರತಿಯೊಬ್ಬರೂ ಸ್ವಯಂ ಪ್ರೇರಿತರಾಗಿ ಸ್ವಚ್ಛತೆಯ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು.ಇದು ನಮ್ಮ ಮನೆ ಪರಿಸರದಿಂದಲೇ, ನಮ್ಮಿಂದಲೇ ಅಂದರೆ ವಿದ್ಯಾರ್ಥಿಗಳಿಂದಲೇ ಪ್ರಾರಂಭವಾದಾಗ 'ಸ್ವಚ್ಛಭಾರತ ಅಭಿಯಾನ'ಕ್ಕೆ ಸಂಪೂರ್ಣವಾಗಿ ಯಶಸ್ಸು ದೊರೆಯುತ್ತದೆ.

**ವಿಷಯ ನಿರೂಪಣೆ :**

'ಆರೋಗ್ಯವೇ ಭಾಗ್ಯ' ಎಂಬ ನಾಣ್ಣುಡಿ ನಮ್ಮಲ್ಲಿದೆ ಉತ್ತಮ ಆರೋಗ್ಯಕ್ಕೆ ಉತ್ತಮ ಹಾಗೂ ಸ್ವಚ್ಛವಾದ ಪರಿಸರ ಅಗತ್ಯ.

ಇದಕ್ಕಾಗಿಯೇ ನಮ್ಮ ಇಂದಿನ ಪ್ರಧಾನ ಮಂತ್ರಿಗಳು ಗಾಂಧೀಜಿಯವರ ಜನ್ಮದಿನವಾದ 2.10.2014ರಂದು ಸ್ವಚ್ಛ ಭಾರತ ಅಭಿಯಾನವನ್ನು ಪ್ರಾರಂಭಿಸಿದರು.ಗಾಂಧೀಜಿಯವರು ಹುಟ್ಟಿ 150 ವರ್ಷಪೂರ್ಣಗೊಳ್ಳುವ 2.10.2019ಕ್ಕೆ ಈ ಯೋಜನೆಯ ಗುರಿಯನ್ನು ಇಟ್ಟುಕೊಳ್ಳಲಾಗಿದೆ.ಈ ಅವಧಿಯಲ್ಲಿ ಸಂಪೂರ್ಣವಾಗಿ ಸ್ವಚ್ಛಭಾರತ ನಿರ್ಮಾಣವಾಗಬೇಕು ಈ ದಿಸೆಯಲ್ಲಿ ವಿದ್ಯಾರ್ಥಿಗಳ ಪತ್ರ ಅತ್ಯಂತ ಮಹತ್ವದ್ದು.

ಶಾಲೆಯಲ್ಲಿ ಮಕ್ಕಳಿಂದ ಸ್ವಚ್ಚತೆ ಮತ್ತು ನೈರ್ಮಲ್ಯದ ಮೇಲೆ , ವಿಶೇಷವಾಗಿ ಗಾಂಧೀಜಿಯವರ ಬೋಧನೆಗಳಿಗೆ ಸಂಬಂಧಿಸಿದಂತೆ ಚರ್ಚೆಗಳನ್ನು ಏರ್ಪಡಿಸಬೇಕು. ಶಾಲಾಕೊಠಡಿ, ಪ್ರಯೋಗಾಲಯಗಳು, ಗ್ರಂಥಾಲಯಗಳನ್ನು ವಿದ್ಯಾರ್ಥಿಗಳು ಸ್ವತ: ತಾವೇ ಸ್ವಚ್ಚಗೊಳಿಸುವುದನ್ನು ರೂಢಿಮಾಡಿಕೊಳ್ಳಬೇಕು. ಶಾಲೆಯಲ್ಲಿರುವ ಕುಡಿಯುವ ನೀರಿನ ಪ್ರದೇಶ, ಶೌಚಾಲಯ, ಅಡುಗೆಮನೆಯನ್ನು ವಿದ್ಯಾರ್ಥಿಗಳು ಪ್ರತಿ ವಾರಕ್ಕೆ ಒಂದು ತರಗತಿಯಂತೆ ಸ್ವಚ್ಛಮಾಡಬೇಕು. ಶಾಲಾ ಆಟದ ಮೈದಾನಗಳು, ಶಾಲ ಉದ್ಯಾನವನಗಳು ಹಾಗೂ ಶಾಲಾ ತರಗತಿಗಳಲ್ಲಿ ಸ್ವಚ್ಛತಾ ನಿರ್ವಹಣೆಯನ್ನು ಮಾಡಬೇಕು. ವಿದ್ಯಾರ್ಥಿಗಳು ತಮ್ಮ ಗ್ರಾಮಗಳಲ್ಲಿ ಜಾಥಾಹೋಗುವ ಮೂಲಕ ಜನರಲ್ಲಿ ಸ್ವಚ್ಛಭಾರತದ ಉದ್ದೇಶವನ್ನು ಜನರಲ್ಲಿ ಮೂಡಿಸಬೇಕು. ವಿದ್ಯಾರ್ಥಿಗಳು ಶಿಕ್ಷಕರ ಸಹಾಯದಿಂದ ಶಾಲೆಗಳಲ್ಲಿ ನೈರ್ಮಲ್ಯ ಮತ್ತು ಆರೋಗ್ಯದ ಮೇಲೆ ಪ್ರಭಾವ ಬೀರುವ ಪ್ರಬಂಧ, ಚರ್ಚೆ, ಭಾಷಣ, ಚಿತ್ರಕಲೆ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಎಲ್ಲ ವಿದ್ಯಾರ್ಥಿಗಳಲಿ ಸ್ವಚ್ಛಭಾರತ ಅಭಿಯಾನದ ಕಲ್ಪನೆ ಮೂಡಿಸುವುದು. ವಿದ್ಯಾರ್ಥಿಗಳು ಸ್ವಚ್ಛತೆಯ ಮೇಲ್ವಿಚಾರಣೆಯ ಜೊತೆಗೆ ಸ್ವಚ್ಛತೆಯ ಅರಿವನ್ನು ಮೂಡಿಸುವ ಚಿತ್ರ ಪ್ರದರ್ಶನಗಳು, ವರ್ಣಚಿತ್ರಗಳು ಮತ್ತು ಸಂದೇಶಗಳನ್ನು ಸಾರುವ ಭಿತ್ತಿಪತ್ರಗಳನ್ನು ಅಂಟಿಸುವುದು. ವಿದ್ಯಾರ್ಥಿಗಳು ಶಾಲೆಯಲ್ಲಿನ ವಿದ್ಯಾರ್ಥಿ ಸಂಸತ್ತಿನ ಮೂಲಕ ಸಂಘಟನೆಗೊಂಡು ಶಿಕ್ಷಕರು, ಪೋಷಕರು ಹಾಗೂ ಸಮುದಾಯದ ಪಾಲ್ಗೊಳ್ಳುವಿಕೆಯ ಜೊತೆಗೆ ಸ್ವಚ್ಛತೆಯ ಅರಿವನ್ನು ಮೂಡಿಸುವುದು.

**ಉಪಸಂಹಾರ :**

ಸ್ವಚ್ಛ ಭಾರತ ನಿರ್ಮಾಣದ ಕನಸನ್ನು ನನಸು ಮಾಡೋಣ ಈ ಯೋಜನೆಯನ್ನು ಸಾಕಾರಗೊಳಿಸುವಲ್ಲಿ ಪ್ರತಿವಾರ ಕೇವಲ ಎರಡು ಗಂಟೆಗಳ ಅವಧಿಯನ್ನು ಮೀಸಲಿಡೋಣ ಈ ಮೂಲಕ ಪ್ರಧಾನ ಮಂತ್ರಿಗಳ ಕನಸನ್ನು ನನಸಾಗಿಸುವುದರ ಮೂಲಕ , ಸ್ವಚ್ಛಭಾರತ ಅಭಿಯಾನವನ್ನು ಯಶಸ್ವಿಗೊಳಿಸೋಣ.

## 3. ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ

**ಪೀಠಿಕೆ :**

ಪ್ರಕೃತಿಗೂ ಮಾನವನಿಗೂ ಗಾಢ ಸಂಬಂಧವಿದೆ. ಅವನು ಪ್ರಕೃತಿಯಲ್ಲೇ ಹುಟ್ಟಿ, ಪ್ರಕೃತಿಯಲ್ಲೇ ಬದುಕಿ ಬಾಳುತ್ತಾನೆ. ತನಗೆ ಬೇಕಾದ ಎಲ್ಲವನ್ನೂ ಪ್ರಕೃತಿಯಿಂದಲೇ ಪಡೆಯುತ್ತಾನೆ. ಆದ್ದರಿಂದಲೇ ಪ್ರಕೃತಿಯನ್ನು 'ಪ್ರಕೃತಿ ಮಾತೆ', ಎಂದು ಕರೆಯುತ್ತಾರೆ. ಆದರೆ ಮಹಾಸ್ವಾರ್ಥಿಯಾದ ಮನುಷ್ಯನಿಂದ ಇಂದು ಗ್ರಾಮ–ನಗರ ಸೇರಿದಂತೆ ಸಂಪೂರ್ಣ ಪರಿಸರ ಮಲಿನವಗಿ, ಮನುಷ್ಯನ ನಾಶ ಸನ್ನಿಹಿತವಗಿದೆ. ಆದ್ದರಿಂದ ಪರಿಸರ ಸಂರಕ್ಷಣೆಯನ್ನು ಮಾಡುವಲ್ಲಿ ಭವಿತವ್ಯದ ನಾರಿಕರಾದ ವಿದ್ಯಾರ್ಥಿಗಳ ಪಾತ್ರ ಅತ್ಯಂತ ಮಹತ್ವದ್ದು ಎಂದು ಹೇಳಬಹುದು.

ಆನಂದ್ ಗುರು ಅಂಗೊಂಡಹಳ್ಳಿ

ವಿಷಯ ನಿರೂಪಣೆ :

ವಿದ್ಯಾರ್ಥಿಗಳು ತಮ್ಮ ಶಾಲೆ, ಮನೆ ಸೇರಿದಂತೆ ಸುತ್ತಲಿನ ಪರಿಸರವು ಮಲಿನವಾಗದಂತೆ ಸ್ವಚ್ಛವಾಗಿಟ್ಟುಕೊಳ್ಳಬೇಕು. ವಿದ್ಯಾರ್ಥಿಗಳು ಶಿಕ್ಷಕರು, ಪೋಷಕರು ಮತ್ತು ಸಮುದಾಯದ ಸಹಾಯ ಪಡೆದು ವಿದ್ಯಾರ್ಥಿ ಸಂಘಗಳ ಮೂಲಕ ಜಾಥಾ ಹೋಗಿ ಜನರಲ್ಲಿ ಪರಿಸರ ಸಂರಕ್ಷಣೆಯ ಅರಿವನ್ನು ಮೂಡಿಸಬೇಕು. ತಮ್ಮ ಶಾಲಾ

ಆವರಣದಲ್ಲಿ ಮಾಲಿನ್ಯ ಉಂಟುಮಾಡುವ ಪ್ಲಾಸ್ಟಿಕ್, ಮಲೀನ ನೀರು ಇತ್ಯಾದಿಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕು. ವಿದ್ಯಾರ್ಥಿಗಳು ಸ್ವತ: ತಾವೇ ಶಾಲೆಗಳಲ್ಲಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಪ್ರಬಂಧ, ಭಾಷಣ, ಚಿತ್ರಕಲಾ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಪರಿಸರ ಸಂರಕ್ಷಣೆಯ ಅರಿವು ಮೂಡಿಸಬೇಕು. ವಿದ್ಯಾರ್ಥಿಗಳು ಪರಿಸರ ದಿನಾಚರಣೆಯಂದು ತಮ್ಮ ಮನೆ ಗ್ರಾಮ, ಮತ್ತು ಶಾಲೆಗಳಲ್ಲಿ ಗಿಡಗಳನ್ನು ನೆಟ್ಟು ಪೋಷಿಸಬೇಕು. ವಿದ್ಯಾರ್ಥಿಗಳು ತಮ್ಮ ಊರಿನ ರೈತರಿಗೆ ಬೆಳೆಗಳಿಗೆ ರಾಸಾಯನಿಕ ಗೊಬ್ಬರದ ಬದಲಾಗಿ ಸಾವಯವ ಗೊಬ್ಬರ ಬಳಸುವಂತೆ ತಿಳಿ ಹೇಳಬೇಕು. ವಿದ್ಯಾರ್ಥಿಗಳು ತಮ್ಮ ಗುಂಪಿನ ಮೂಲಕ ಮಾರುಕಟ್ಟೆ ಪ್ರದೇಶಗಳಿಗೆ ಹೋಗಿ ಅಲ್ಲಿನ ವ್ಯಾಪಾರಿಗಳಿಗೆ ಆಹಾರ ಬೆಳೆಗಳು, ಹಣ್ಣು-ತರಕಾರಿಗಳಿಗೆ ರಾಸಾಯನಿಕಗಳನ್ನು ಸಿಂಪಡಿಸದಂತೆ ತಿಳಿಹೇಳಬೇಕು. ವಿದ್ಯಾರ್ಥಿಗಳು ತಮ್ಮ ಹತ್ತಿರದ ಪ್ರದೇಶಗಳಲ್ಲಿರುವ ನದಿ,ನಾಲೆ, ಕೆರೆ, ಬಾವಿಗಳ ಹತ್ತಿರ ನೈರ್ಮಲ್ಯ ಕಾಪಾಡುವ ಸಂದೇಶವನ್ನೊಳಗೊಂಡ ಭಿತ್ತಿಪತ್ರವನ್ನು ಅಂಟಿಸುವ ಮೂಲಕ ಆ ಪ್ರದೇಶಗಳಲ್ಲಿನ ಮಾಲಿನ್ಯವನ್ನು ನಿಯಂತ್ರಿಸುವಂತೆ ಜನರಲ್ಲಿ ಅರಿವನ್ನು ಮೂಡಿಸಬೇಕು. ಅಲ್ಲದೇ ಬೀದಿನಾಟಕಗಳ ಮೂಲಕವು ಸಹ ವಿದ್ಯಾರ್ಥಿಗಳು ಜನರಲ್ಲಿ ಪರಿಸರ ಸಂರಕ್ಷಣೆಯ ಜಾಗೃತಿಯನ್ನು ಮೂಡಿಸಬಹುದು.

ಉಪಸಂಹಾರ :

ಪರಿಸರವೇ ಸೃಷ್ಟಿಯ ಪ್ರತಿಯೊಂದು ಜೀವಿಯ ಆಗರ. ಆದ್ದರಿಂದ ಪರಿಸರವನ್ನು ನಾವು ಉಳಿಸಿ ಬೆಳೆಸಿಕೊಂಡು ಹೋಗಬೇಕಾದರೆ, ನಾಶವಾಗುತ್ತಿರುವ ಪರಿಸರವನ್ನು ಸಂರಕ್ಷಿಸುವ ಅರಿವನ್ನು ವಿದ್ಯಾರ್ಥಿಗಳಷ್ಟೇ ಅಲ್ಲದೆ ಪ್ರತಿಯೊಬ್ಬ ನಾಗರಿಕನೂ ಮಾಡಬೇಕಾದುದೂ ಆದ್ಯ ಕರ್ತವ್ಯವಾಗಿದೆ.

"ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ"

## 4. ಮೂಢನಂಬಿಕೆಗಳು

ಪೀಠಿಕೆ :

ಮಾನವ ಸಂಘ ಜೀವಿ , ಅವನು ಸಮಾಜದಲ್ಲಿ ವಾಸಿಸುವಾಗ ಕೆಲವು ನಂಬಿಕೆಗಳನ್ನು ಇಟ್ಟುಕೊಂಡಿರುತ್ತಾನೆ. ಅದೇ ರೀತಿ ಕೆಲವು ಮೂಢನಂಬಿಕೆಗಳನ್ನು ಅನುಸರಿಸುತ್ತಾನೆ. ಮೂಢನಂಬಿಕೆಗಳನ್ನು ಎಲ್ಲಾ ದೇಶದ ಎಲ್ಲಾ ಜನಾಂಗದವರಲ್ಲಿ ಕೂಡ ಕಾಣಬಹುದು. ಮೂಢನಂಬಿಕೆಗಳಿಂದ ನಮ್ಮ ಸಮಾಜಕ್ಕೆ ಯಾವುದೇ ಪ್ರಯೋಜನವಿಲ್ಲ.ಹಾನಿಕಾರವೇ ಹೆಚ್ಚು.

ವಿಷಯ ನಿರೂಪಣೆ :

ವೈಜ್ಞಾನಿಕವಲ್ಲದ ಕೇವಲ ನಂಬಿಕೆ ಮಾತ್ರದಿಂದಲೇ ಅನುಸರಿಸುವ ಅಸಂಪ್ರದಾಯಕ ಆಚರಣೆಗಳನ್ನು ಮೂಢನಂಬಿಕೆಗಳೆಂದು ಕರೆಯಲಾಗಿದೆ. ಅಂದರೆ ಯಾವ ನಂಬಿಕೆಗಳಲ್ಲಿ ಮೌಢ್ಯತೆ ತುಂಬಿರುತ್ತದೆಯೋ ಅವೇ ಮೂಢನಂಬಿಕೆಗಳು ಎನಿಸಿಕೊಳ್ಳುತ್ತವೆ, ಗ್ರಹಣನಂಬುವುದು, ವಿಧವೆತನ, ದೃಷ್ಟಿತೆಗೆಯುವುದು, ನಿವಾಳಿಯೆತ್ತುವುದು, ಬಲಿದಾನ, ಹರಕೆ, ದೇವದಾಸಿ ಪದ್ಧತಿ, ಭೂತಬಿಡಿಸುವುದು, ಭೂತರಾಧನೆ, ಬೆಕ್ಕು ಅಡ್ಡಹೋದರೆ ಕೆಟ್ಟದ್ದು ಎಂದು ನಂಬುವುದು, ಮಾಟಮಂತ್ರಗಳು, ವಶೀಕರಣ ಮುಂತಾದ ಅವೈಜ್ಞಾನಿಕ ನಂಬಿಕೆಗಳು ಹರಡಿಕೊಂಡಿವೆ. ಕೆಲವೊಂದು ಅತ್ಯಂತ ಅಮಾನವೀಯವಾದ ಪದ್ಧತಿಗಳು ಕೂಡ ಇವೆ. ಅನಕ್ಷರಸ್ಥರು ಇಂತಹ ಮೂಢನಂಬಿಕೆಗಳನ್ನು ನಂಬುವುದು ಹೆಚ್ಚು. ಎಚ್. ನರಸಿಂಹಯ್ಯನವರು ಹೇಳುವಂತೆ "ಮೂಢನಂಬಿಕೆಗಳನ್ನು ನಂಬುವ ಅವಿದ್ಯಾವಂತನಿಗಿಂತ ಮೂಢನಂಬಿಕೆಗಳನ್ನು ಪ್ರತಿಪಾದಿಸುವ ವಿದ್ಯಾವಂತನು ಸಮಾಜಕ್ಕೆ ಬಹಳ ಅಪಾಯಕಾರಿ. ಶಿಕ್ಷಣವೆತ್ತರು ಮೂಢನಂಬಿಕೆಗಳ ಬಗ್ಗೆ ತಳೆಯುವ ನಿಷ್ಕ್ರಿಯತೆ ತುಂಬಾ ಹಾನಿಯುಂಟುಮಾಡುತ್ತದೆ. ಭಯ, ಅಜ್ಞಾನಗಳಿಂದ ತುಂಬಿರುವ ಮೂಢನಂಬಿಕೆಗಳು ಆತ್ಮವಿಶ್ವಾಸವನ್ನು ,ಸ್ವತಂತ್ರ ಆಲೋಚನೆಗಳನ್ನು

ಮೊಟಕುಗೊಳಿಸುತ್ತವೆ. ಇವುಗಳು ದೇಶಗ ಪ್ರಗತಿಗೆ ವಿರೋಧವಾಗಿದ್ದು ಸಮಾಜಕ್ಕೆ ಅಘಾತವನ್ನುಂಟು ಮಾಡುತ್ತವೆ." ಆದ್ದರಿಂದ ಪ್ರತಿಯೊಬ್ಬರು ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಂಡು ಮೂಢನಂಬಿಕೆಗಳ ಹಾನಿಯ ಬಗ್ಗೆ ತಿಳಿಯಬೇಕು ಮತ್ತು ತಿಳಿಸಬೇಕು.

ಉಪಸಂಹಾರ :

ವಿಜ್ಞಾನ ಮತ್ತು ಅದರ ಸಂಶೋಧನೆಯಿಂದ ಮೂಢನಂಬಿಕೆಗಳ ಬಗ್ಗೆ ಸಮಾಜಕ್ಕೆ ಸಾಕಷ್ಟು ಅರಿವು ಮೂಡಿಸುವುದರ ಮೂಲಕ, ವಿವಿಧ ಸಭೆ , ಸಮ್ಮೇಳನಗಳಲ್ಲಿ ಪ್ರಚಾರಗೊಳಿಸುವ ಮೂಲಕ ಮತ್ತು ಚರ್ಚಿಸುವುದರ ಮೂಲಕ ತಡೆಗಟ್ಟಬಹುದಾಗಿದೆ. ಸಮಾಜದಲ್ಲಿ ಬೇರೂರಿವ ಪ್ರತಿಯೊಂದು ಮೂಢನಂಬಿಕೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಅದರಿಂದ ಆಗುವ ಅನಾಹುತ, ನಷ್ಟವನ್ನು ತಪ್ಪಿಸಿಕೊಳ್ಳುವ ಮನೋಭಾವವನ್ನು ಎಲ್ಲರೂ ಬೆಳೆಸಿಕೊಳ್ಳಬೆಂಬುದೆ ನಮ್ಮ ಆಶಯವಾಗಬೇಕು.

## 5. ಅಕ್ಷರ ದಾಸೋಹ ಮತ್ತು ಕ್ಷೀರಭಾಗ್ಯ ಯೋಜನೆಗಳು

ಪೀಠಿಕೆ :

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸರ್ವರಿಗೂ ಶಿಕ್ಷಣ ನೀಡುವ ಉದ್ದೇಶದಿಂದ ಹಾಗೂ ಆರ್ಥಿಕವಾಗಿ ತೊಂದರೆಯಲ್ಲಿರುವ ವರ್ಗದ ಮಕ್ಕಳಿಗೆ ಸಹಾಯ ಮಾಡುವ ಉದ್ದೇಶದಿಂದ ಅನುಷ್ಠಾನಗೊಳಿಸಲಾಗಿರುವ ಜನಪ್ರಿಯ ಯೋಜನೆಗಳೇ ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯ ಯೋಜನೆಗಳು.

ವಿಷಯ ನಿರೂಪಣೆ :

ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಒಂದರಿಂದ ಹತ್ತನೆಯ ತರಗತಿಯವರೆಗೆ ಓದುತ್ತಿರುವ ವಿದ್ಯಾರ್ಥಿಗಳಿಗೆ ಈ ಯೋಜನೆಯ ಸೌಲಭ್ಯ ನೀಡಲಾಗಿದೆ. ಅಕ್ಷರ ದಾಸೋಹ ಯೋಜನೆಯ ಅಡಿಯಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ನೀಡಲಾಗುತ್ತಿದೆ. ಇದಕ್ಕಾಗಿ ಪ್ರತಿ ಶಾಲೆಯಲ್ಲೂ ಪ್ರತ್ಯೇಕ ಅಡುಗೆ ಮನೆ ನಿರ್ಮಾಣ ಮಾಡಿ ಅಡುಗೆ ಸಿಬ್ಬಂದಿಯನ್ನು ನೇಮಿಸಲಾಗಿದೆ. ದವಸ ಧಾನ್ಯಗಳನ್ನು ಸರ್ಕಾರವೇ ಸರಬರಾಜು ಮಾಡಿ ಉಳಿದ ಖರ್ಚಿಗೆ ಹಣವನ್ನು ಬಿಡುಗಡೆಗೊಳಿಸುತ್ತಿದೆ.ಎಲ್ಲ ಶಾಲೆಗಳಲ್ಲೂ ವ್ಯವಸ್ಥಿತವಾಗಿ ಈ ಯೋಜನೆಯು ನಡೆದುಕೊಂಡು ಬರುತ್ತಿದೆ. ಹೀಗೆಯೇ ಈ ಮಕ್ಕಳಿಗೆ ಕ್ಷೀರಭಾಗ್ಯ ಯೋಜನೆಯಡಿಯಲ್ಲಿ ವಾರಕ್ಕೆ ಮೂರು ದಿನಗಳು ಪೌಷ್ಠಿಕವಾದ ಹಾಲನ್ನು ನೀಡಲಾಗುತ್ತಿದೆ.ಈ ಯೋಜನೆಯನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ವಾರದ ಐದೂ ದಿನಗಳಿಗೂ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.ಈ ಎರಡೂ ಯೋಜನೆಗಳಿಂದ ಗ್ರಾಮೀಣ ವಿದ್ಯಾರ್ಥಿಗಳಿಗೆ ಹೆಚ್ಚು ಉಪಯುಕ್ತವಾಗಿದೆ ಅಲ್ಲದೆ ಶಾಲೆಯ ದಾಖಲಾತಿ ಮತ್ತು ಹಾಜರಾತಿಯೂ ಉತ್ತಮಗೊಳ್ಳುತ್ತಿದೆ.

ಉಪಸಂಹಾರ : ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮಕ್ಕಳಿಗೆ ಬಹಳ

ಉಪಯುಕ್ತವಾಗಿದ್ದು ವರದಾನವಾಗಿದೆ. ಈ ಯೋಜನೆಗಳು ಯಶಸ್ವಿಯಾಗಿದ್ದು ಉದ್ದೇಶ ಸಾಧನೆಯಲ್ಲಿ ಫಲಕಾರಿಯಾಗಿದೆ.

### 6. ರಾಷ್ಟ್ರೀಯ ಭಾವೈಕ್ಯತೆ

ಪೀಠಿಕೆ:

ಭಾರತವು ಅನೇಕ ಜನಾಂಗಗಳು, ಪಂಗಡಗಳು ಇರುವಂತಹ ಒಂದು ವಿಶಾಲ ರಾಷ್ಟ್ರ. ಇಲ್ಲಿ "ವಿವಿಧ ಭಾಷೆ, ಸಂಸ್ಕೃತಿ,ಧರ್ಮ , ಜಾತಿಗಳ ಜನರು ತಮ್ಮ ವಿವಿಧತೆಯನ್ನು ಮರೆತು ನಾವೆಲ್ಲರೂ ಭಾರತೀಯರು ಎಂಬ ರಾಷ್ಟ್ರೀಯ ಮನೋಭಾವನೆಯನ್ನು ಹೋದಿರುವುದೇ 'ರಾಷ್ಟ್ರೀಯ ಭಾವೈಕ್ಯತೆ". ಭಾರತವು ಪ್ರಜಾಪ್ರಭುತ್ವ ತಳಹದಿಯ ಮೇಲೆ ರೂಪಿತವಾಗಿರುವ ಒಂದು ಜಾತ್ಯತೀತ ರಾಷ್ಟ್ರವಾಗಿದ್ದು ಪ್ರತಿಯೊಂದು ಧರ್ಮೀಯರು ತಮ್ಮ ಸಂಪ್ರದಾಯ,ಪದ್ಧತಿಗಳನ್ನು ಅಚರಿಸಲು ಅವಕಾಶವಿದೆ.

ವಿಷಯ ನಿರೂಪಣೆ:

ಭಾರತವು ವಿವಿಧ ಧರ್ಮ, ಭಾಷೆ, ಬುಡಕಟ್ಟು, ಜನಾಂಗಗಳನ್ನು ಹೊದಿಂದ್ದು,ದೇಶದ ಯಾವುದೇ ಮೂಲೆಗೆ ಹೋದರು ಅಲ್ಲಿ ವೈವಿದ್ಯತೆಯನ್ನು ಕಾಣುತ್ತೇವೆ. ಏಕೆಂದರೆ ಭಾರತೀಯ ನಾಗರಿಕತೆಯು ಯಾವಾಗಲೂ ಧಾರ್ಮಿಕ ಹಾಗೂ ನೈತಿಕ ತಳಹದಿಯ ಮೇಲೆ ಚಲಿಸುತ್ತಿದೆ. ದೇಶದ ಎಲ್ಲ ಭಾಗಗಳಲ್ಲಿಯೂ,ಸಾಂಸ್ಕೃತಿಕ ಮತ್ತು ಜೀವನ ಮಾರ್ಗದ ಒಗ್ಗಟ್ಟು ಹಾಗೂ ದೃಷ್ಟಿಕೋನವು ಧರ್ಮ,ನಂಬಿಕೆ ಮತ್ತು ಆಚರಣೆಗಳಲ್ಲಿ ವಿಶಾಲ ವೈವಿಧ್ಯತೆಯನ್ನು ಹೊಂದಿದೆ.ಆದರೂ ನಮ್ಮಲ್ಲಿ ನಾವು ಭಾರತೀಯರು ಎಂಬ ಬಲವಾದ ಬೇರಿದೆ.

ನಮ್ಮ ದೇಶದ ರಾಷ್ಟ್ರಗೀತೆ, ರಾಷ್ಟ್ರಗೀತೆ, ರಾಷ್ಟ್ರಭಾಷೆ, ರಾಷ್ಟ್ರಮುದ್ರೆ ಇವು ನಮ್ಮ ಏಕತೆಯ ಸಂಕೇತಗಳಾಗಿವೆ. ಅಲ್ಲದೇ 'ವಂದೇಮಾತರಂ, ಸಾರೇ ಜಹಾಸೇ ಅಚ್ಛಾ, ಜನಗಣಮನ ಅಧಿನಾಯಕ' ದಂತಹ ದೇಶ ಭಕ್ತಿಗೀತೆಗಳು ನಮ್ಮಲ್ಲಿ ದೇಶಪ್ರೇಮ, ದೇಶಾಭಿಮಾನವನ್ನು ಹುಟ್ಟಿಸುತ್ತವೆ. ಇಡೀ ದೇಶವೇ ವೈವಿಧ್ಯಮಯವದ ಸಂಸ್ಕೃತಿಕ ಆಚರಣೆಯಲ್ಲಿರುವಾಗ ನಾವು ಒಂದೇ ಮನೆಯವರಂತೆ ಕೂಡಿ ಬಾಳುತ್ತಿರುವುದು ಇಡೀ ಜಗತ್ತಿಗೆ ಮಾದರಿಯಾಗಿದೆ ಎಂದು ಹೇಳಬಹುದು.

ಉಪಸಂಹಾರ :

ಇತ್ತೀಚೆಗೆ ಭಾರತೀಯ ಸಂಸ್ಕೃತಿಯು ಪ್ರಗತಿ ಹಾಗೂ ಬದಲವಣೆಯ ಹಂತದಲ್ಲಿದೆ . ವಿಜ್ಞಾನ ತಂತ್ರಜ್ಞಾನದ ಅಭಿವೃದ್ಧಿಯ ಗಾಳಿಯು ಇಡೀ ವಿಶ್ವವನ್ನೇ ನಡುಗಿಸುತ್ತಿದೆ. ಆದರೆ ಭಾರತೀಯರಾದ ನಾವು ಮಾತ್ರ ನಮ್ಮ ನೆರೆಹೊರೆಯ ರಾಷ್ಟ್ರಗಳೊಂದಿಗೆ ಪ್ರೀತಿ ಹಾಗೂ ಸೌಹಾರ್ದತೆಯಿಂದ ನಡೆದುಕೊಳ್ಳುತ್ತಾ, ನಮ್ಮ ದೇಶದ ಏಕತೆಯನ್ನು ಎತ್ತಿ ಹಿಡಿದಿದ್ದೇವೆ.

### 7.ಕ್ರೀಡೆಗಳು

ಪೀಠಿಕೆ :

ಮನುಷ್ಯನ ಪೂರ್ಣ ವ್ಯಕ್ತಿತ್ವವನ್ನು ರೂಪಿಸಿ ಬೆಳೆಸುವುದೇ ಶಿಕ್ಷಣದ ಗುರಿ.ಮಾನಸಿಕ ಬೆಳವಣಿಗೆ, ಜ್ಞಾನದ ಬೆಳವಣಿಗೆಯ ಜೊತೆಜೊತೆಗೆ ಶಾರೀರಿಕ ಬೆಳವಣಿಗೆಯೂ ಆವಶ್ಯಕ. ದೇಹದಾರ್ಢ್ಯವನ್ನು ಪಡೆಯಲು ಕ್ರೀಡಾ ಚಟುವಟಿಕೆಗಳು,ಆಟ ಪಾಠಗಳು ಅತಿಮುಖ್ಯ.ಆರೋಗ್ಯವಂತನಾದ ವ್ಯಕ್ತಿಯು ನಿಜಕ್ಕೂ ನಿಶ್ಚಲವಾದ ಮನಸ್ಸನ್ನು ಹೊಂದಿ ನೆಮ್ಮದಿಯಿಂದಿರುತ್ತಾನೆ. ಆದ್ದರಿಂದಲೇ "ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸು ಇರುತ್ತದೆ" ಎಂದು ಹೇಳಿರುವುದು.

ವಿಷಯ ನಿರೂಪಣೆ:–

ಪ್ರತಿದಿನ ಗೊತ್ತಾದ ಸಮಯದಲ್ಲಿ ಯಾರು ಕ್ರೀಡಾ ಚಟುವಟಿಕೆಗಳಲ್ಲಿ,ವ್ಯಾಯಾಮಗಳಲ್ಲಿ ನಿರತರಾಗಿರುತ್ತಾರೋ ಅಂತಹವರು ಉತ್ತಮ ಆರೋಗ್ಯವನ್ನು ಹೊಂದಿರುತ್ತಾರೆ.ಪ್ರತಿಯೊಬ್ಬರೂ ತಮ್ಮ ಬಿಡುವಿನ ವೇಳೆಯಲ್ಲಿ ಯಾವುದಾದರು ಒಂದು ಆಟವನ್ನು ಆಡುವ ಹವ್ಯಾಸ ಬೆಳೆಸಿಕೊಳ್ಳುವುದು ಬಹಳ ಒಳ್ಳೆಯದು. ಆಟಗಳು ಮನಸ್ಸಿಗೆ ಆಹ್ಲಾದವನ್ನು ಉಂಟುಮಾಡುತ್ತವೆ. ಜ್ಞಾನವು ಮನಸ್ಸಿಗೆ ಆಹಾರವಾದರೆ, ಆಟಗಳು ಅಥವಾ ಕ್ರೀಡೆಗಳು ಶರೀರಕ್ಕೆ ಆಹಾರ. ಆಟಗಳಲ್ಲಿ ಭಾಗವಹಿಸಿದಾಗ ನೀತಿ ನಿಯಮಗಳನ್ನು ಪಾಲಿಸಬೇಕು. ಆಟಗಳನ್ನು ಆಡುವುದರಿಂದ ಒಬ್ಬರಿಗೊಬ್ಬರು ಹೇಗೆ ಸ್ನೇಹದಿಂದ ವರ್ತಿಸಬೇಕು, ಸಹಾಯ ಮಾಡಬೇಕು ಎಂಬುದು ಅರಿವಾಗುತ್ತದೆ. ನಾಯಕತ್ವದಲ್ಲಿ ಅಡ್ಡಿ ಆತಂಕಗಳು ಬಂದಾಗ ಮನೋಸ್ಥೈರ್ಯ ನಮ್ಮದಾಗುತ್ತದೆ. ಸೋತಾಗ ಅಂಜದೆ, ಮತ್ತೆ ಮತ್ತೆ ಪ್ರಯತ್ನಿಸಿ ಗೆಲ್ಲುವ ಮನೋಭಾವ ಬೆಳೆಯುತ್ತದೆ. ಕ್ರೀಡೆಯಲ್ಲಿ ಸೋಲು ಗೆಲುವನ್ನು ಸಮಸ್ಥಿತಿಯಲ್ಲಿ ತೆಗೆದುಕೊಳ್ಳುವ ಮನೋಭಾವ ಬೆಳೆಯುತ್ತದೆ. ಕ್ರೀಡಾ ಮನೋಭಾವನೆಯು ಬೆಳೆದು

ಜೀವನದುದ್ದಕ್ಕೂ ಎಲ್ಲ ಕ್ಷೇತ್ರದಲ್ಲೂ ನೀತಿಯುತವಾಗಿ ನಿಯಮಗಳನ್ನು ಉಲ್ಲಂಘಿಸದೆ ಬಾಳುವುದನ್ನು ಕಲಿಸುತ್ತದೆ. ಕ್ರೀಡೆಗಳಲ್ಲಿ ಎರಡು ವಿಧಗಳಿವೆ. ಒಂದು ಹೊರಾಂಗಣ ಕ್ರೀಡೆಯಾದರೆ, ಇನ್ನೊಂದು ಒಳಾಂಗಣ ಕ್ರೀಡೆ ಹೊರಾಂಗಣ ಕ್ರೀಡೆ ಎಂದರೆ ಮೈದಾನದಲ್ಲಿ ಆಡುವುದು. ಉದಾ:– ಕ್ರಿಕೆಟ್, ಫುಟ್ಬಾಲ್, ಹಾಕಿ ಇತ್ಯಾದಿ, ಒಳಾಂಗಣ ಕ್ರೀಡೆ ಎಂದರೆ ಕಟ್ಟಡದ ಒಳಗೆ ಆಡುವ ಆಟಗಳು. ಉದಾ :– ಟೇಬಲ್ ಟೆನಿಸ್, ಚೆಸ್,ಕೇರಂ ಇತ್ಯಾದಿ. ಎಲ್ಲಾ ತರಹದ ಕ್ರೀಡೆಗಳು ನಮ್ಮಲ್ಲಿ ಉತ್ಸಾಹವನ್ನು ತುಂಬುತ್ತವೆ.

ಉಪಸಂಹಾರ : ಕ್ರೀಡೆಗಳ ಮೂಲ ಉದ್ದೇಶ ಜನರ ಶಾರೀರಿಕ ಮತ್ತು ಮಾನಸಿಕಬೆಳವಣಿಗೆಯನ್ನು ಹೆಚ್ಚಿಸುವುದು. ಕ್ರೀಡಾಸ್ಫೂರ್ತಿಯನ್ನು ಹೊಂದಿದ ಮನುಷ್ಯ ತುಂಬಾ ಉತ್ತಮವಾಗಿ ಜೀವನ ಸಾಗಿಸಬಲ್ಲ. ಪ್ರತಿಯೊಬ್ಬರೂ ಯಾವುದಾದರೊಂದು ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು ಎಂಬುದು ನನ್ನ ಅಭಿಪ್ರಾಯವಾಗಿದೆ.

### 8. ಸಾವಯವ ಕೃಷಿ

ಪೀಠಿಕೆ:

ಸಾವಯವ ಎಂದರೆ ಕೊಳೆಯಬಹುದಾದ ವಸ್ತುಗಳು .ಅಂದರೆ ನಾವು ಯಾವುದಾದರೊಂದು ವಸ್ತುವನ್ನು ಭೂಮಿಗೆ ಎಸೆದಾಗ ಅದು ಕೆಲವು ದಿನದಲ್ಲಿ ಮಣ್ಣಿನೊಂದಿಗೆ ಬೆರೆತು ಗೊಬ್ಬರವಗುತ್ತದೆ. ಉದಾಹರಣೆಗೆ ಸಸ್ಯಗಳ ಅವಶೇಷಗಳು , ಪ್ರಾಣಿಗಳು ಅವಶೇಷಗಳು, ಬಟ್ಟೆ, ಕಾಗದ,ಕಬ್ಬಿಣ ಮೊದಲಾದವು, ಇವು ಭೂಮಿಯಲ್ಲಿ ಕೊಳೆತಾಗ ಮಣ್ಣಿನ ಭಾಗವೇ ಅಗುತ್ತದೆ. ಆ ಮಣ್ಣಿಗೆ ಹೆಚ್ಚಿ ಫಲವತ್ತತೆ ತಂದುಕೊಡುತ್ತದೆ.

ವಿಷಯ ನಿರೂಪಣೆ:

ಆಧುನಿಕ ಬೇಸಾಯ ಪದ್ಧತಿಯಲ್ಲಿ ಸಾವಯವ ಕೃಷಿಗೆ ಇತ್ತೀಚೆಗೆ ಹೆಚ್ಚಿನ ಆಧ್ಯತೆ ದೊರೆಯುತ್ತಿದೆ. ಪ್ರಾಣಿಗಳ ಮಲಮೂತ್ರ,ತರಕಾರಿ ಸಸ್ಯಗಳ ತ್ಯಾಜ್ಯ ಮೊದಲದ ವಸ್ತುಗಳನ್ನು ಅದಕ್ಕಾಗಿಯೇ ಸಿದ್ಧಪಡಿಸಿದ ತೊಟ್ಟಿಗಳಲ್ಲಿ ವೈಜ್ಞಾನಿಕವಾಗಿ ಸಂಗ್ರಹಿಸಿ ಯಾವುದೇ ಬಗೆಯ ರಾಸಾಯನಿಕ ಪದಾರ್ಥಗಳನ್ನು ಸೇರಿಸದೇ ನೈಸರ್ಗಿಕವಾಗಿ ಕೊಳೆತ ಗೊಬ್ಬರ ತಯಾರಿಸುವುದು. ಆಮೇಲೆ ಅದನ್ನು ಶುದ್ಧಿಗೊಳಿಸಿ ಬೆಳೆಗಳಿಗೆ ನೇರವಾಗಿ ನೀಡುವುದು.ಇಂತಹ ಗೊಬ್ಬರವನ್ನು ವ್ಯವಸಾಯದಲ್ಲಿ ಬಳಕೆ ಮಾಡುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ.



ಆನಂದ್ ಗುರು ಅಂಗೊಂಡಹಳ್ಳಿ

ನೀರನ್ನು ಹೆಚ್ಚುಕಾಲ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ. ಅಲ್ಲದೇ ಸಾಮನ್ಯ ಕೀಟಬಾಧೆಗಳಿಗೆ ಬೆಳೆ ಬೇಗ ಹಾನಿಯಾಗುವುದಿಲ್ಲ. ಕೀಟ ಬಾಧೆಗಳಿಗೆ ಸಾವಯವ ಪದ್ಧತಿಯಲ್ಲಿ ಬೇವಿನ ಹಿಂಡಿ,ಹೊಂಗೆ ಹಿಂಡಿ ಮೊದಲಾದ ಔಷದೋಪಚಾರಗಳಿವೆ. ಇವು ರೋಗಗಳನ್ನು ನಿವಾರಿಸುವುದಲ್ಲದೇ ,ಅಲ್ಲಿ ಉತ್ಪನ್ನವಾದ ತರಕಾರಿ,ಹಣ್ಣು ಬೆಳೆಗಳನ್ನು ಸೇವಿಸುವುದರಿಂದ ಮನುಷ್ಯನ ಆರೋಗ್ಯದ ಮೇಲೆ ಯಾವುದೇ ರೀತಿಯ ಅಡ್ಡ ಪರಿಣಾಮಗಳಾಗುವುದಿಲ್ಲ.

ಉಪಸಂಹಾರ : ಒಟ್ಟಿನಲ್ಲಿ ಸಾವಯವ ಕೃಷಿ ಪದ್ಧತಿಯು ಇಂದಿನ ಆಧುನಿಕ ಯುಗದಲ್ಲಿ ಹೆಚ್ಚು ಉಪಯೋಗಕಾರಿಯಾದುದು. ಇದರಿಂದ ಬೆಳೆಗಳಿಗೆ ಆಧುನಿಕ ರಾಸಾಯನಿಕ ಔಷಧಗಳ ಬಳಕೆಯನ್ನು ಕಡಿಮೆ ಮಾಡಿ,ಅದರಿಂದುಂಟಾಗುವ ದುಷ್ಪರಿಣಾಮಗಳನ್ನು ತಡೆಯಬಹುದು.ಹಾಗಾಗಿ ಇಂದಿನ ದಿನಗಳಲ್ಲಿ ಸಾವಯವ ಕೃಷಿ ಪದ್ಧತಿ ರೈತಮಿತ್ರ ಪದ್ಧತಿ ಮತ್ತು ಪರಿಸರ ಸ್ನೇಹಿ ಕೃಷಿ ಪದ್ದತಿ ಎನ್ನಿಸಿದೆ.

### 9. ಮಂಗಳನ ಅಂಗಳದಲ್ಲಿ ಮಾನವ

ಪೀಠಿಕೆ: ಇಂದು ನಾವು ವೈಜ್ಞಾನಿಕ ಯುಗದಲ್ಲಿ ಪಾದಾರ್ಪಣೆ ಮಾಡುತ್ತಿದೇವೆ.ಸೌರ್ಯವ್ಯೂಹದ ಗ್ರಹಗಳ ಚಲನೆ,ವೇಗ,ಅವುಗಳ ಗಾತ್ರ, ಬಣ್ಣ, ಸೂರ್ಯನಿಂದ ಇರುವ ದೂರ,ಗ್ರಹಣ,ಗ್ರಹಗಳ ಚಲನೆ ಮುಂತಾದವುಗಳನ್ನು ಈಗಾಗಲೇ ಅರಿತಿದ್ದ ಮಾನವನು; ಈಗ ಮಂಗಳ ಗ್ರಹದ ಮೇಲೂ ತನ್ನ ಗಮನವನ್ನು ಕೇಂದ್ರೀಕರಿಸಿದ್ದಾನೆ.ಅದಕ್ಕೆ ಸಂಬಂಧಿಸಿದ ಚಿಕ್ಕ ಮಾಹಿತಿ ಇದಾಗಿದೆ.
ವಿಷಯ ನಿರೂಪಣೆ: ಖಗೋಳಶಾಸ್ತ್ರಜ್ಞರು ಮಂಗಳ ಗ್ರಹದ ಬಗ್ಗೆ ಅಧ್ಯನ ಮಾಡಿ ಈ ರೀತಿ ಮಾಹಿತಿ ನೀಡಿದ್ದಾರೆ. ಭೂಗ್ರಹಕ್ಕೂ ಮೊದಲು ಮಂಗಳ ಗ್ರಹದಲ್ಲಿ ಜನವಸವಾಗಿದ್ದರು. ಜನಸಂಖ್ಯೆಯ ಒತ್ತಡ,ಪ್ರಕೃತಿ ವಿಕೋಪದಿಂದಾಗಿ ಮಂಗಳ ಗ್ರಹ ಇಂದು ಶೂನ್ಯವಾಗಿದೆ.ಮಂಗಳಗ್ರಹದ ಮಣ್ಣು ಕೆಂಪು ಬಣ್ಣವಾಗಿರುವುದರಿಂದ ಇಂದು ನಮಗೆ ಮಂಗಳ ಗ್ರಹ ಕೆಂಪಾಗಿ ಕಾಣಿಸುತ್ತದೆ. ಅಲ್ಲದೆ ಅಲ್ಲಲ್ಲಿ ಬಿದ್ದಿರುವ ಗುಳಿಗಳು ಹಿಂದೆ ಅಲ್ಲಿ ಸಾಕಷ್ಟು ನೀರು ಹಾಗೂ ವನಸ್ಪತಿ ಇದ್ದಿರಬಹುದೆಂದು ಸೂಚಿಸುತ್ತವೆ ಎಂದು ಅಭಿಪ್ರಾಯಪಟ್ಟಿದ್ದಾರೆ.
ಮಂಗಳ ಗ್ರಹ ವಾಸಕ್ಕೆ ಯೋಗ್ಯವೇ, ಇಲ್ಲವೇ ಎಂಬುದನ್ನು ಅರಿಯಲು ಇತ್ತೀಚಿಗೆ ಅಮೆರಿಕದ ನಾಸಾ ಸೇರಿದಂತೆ ಹಲವಾರು ರಾಷ್ಟ್ರಗಳು ಸಾಕಷ್ಟು ಉಪಗ್ರಹಗಳನ್ನು ಮಂಗಳ ಗ್ರಹಕ್ಕೆ ಕಳುಹಿಸಿ ಬಹಳಷ್ಟು ಮಹಿತಿಗಳನ್ನು ಪಡೆದಿವೆ, ಇತ್ತೀಚಿಗೆ ಭಾರತವು ಸಹ 'ಮಾಮ್' ಎಂಬ ಉಪಗ್ರಹವನ್ನು ಮಂಗಳ ಗ್ರಹಕ್ಕೆ ಕಳುಹಿಸುವ ಮೂಲಕ ಮಂಗಳ ಗ್ರಹದ ಅನ್ವೇಷಣೆ ಮಾಡುತ್ತಿದೆ. ಇದರ ಮುಖ್ಯ ಉದ್ದೇಶ–" ಮಂಗಳ ಗ್ರಹದಲ್ಲಿ ಜೀವಿಗಳು ವಾಸಿಸುತ್ತಿರುವುದಕ್ಕೆ ಕುರುಹಾಗಿ ಮಿಥೇನ್ ಅನಿಲದ ಇರುವಿಕೆಯನ್ನು ಪತ್ತೆ ಹಚ್ಚುವುದು ಮತ್ತು ಅಲ್ಲಿನ ವಾತಾವರಣವನ್ನು ಅಧ್ಯಯನ ಮಾಡುವುದಾಗಿದೆ.
ಉಪಸಂಹಾರ :
ನಾವು ನಮ್ಮಲ್ಲಿರುವ ವಿಜ್ಞಾನ ಮತ್ತು ತಂತ್ರಜ್ಞಾನಗಳ ಸಹಾಯದಿಂದ ಇನ್ನು ಹೆಚ್ಚಿನ ಉಪಗ್ರಹಗಳನ್ನು ಮಂಗಳ ಗ್ರಹದೆಡೆಗೆ ಕಳುಹಿಸುವ ಮೂಲಕ ಅದರ ಕುರಿತು ಹೆಚ್ಚಿನ ಮಾಹಿತಿಯನ್ನು ಕಲೆಹಾಕಿದಾಗ, ಅಲ್ಲಿ ಮನುಷ್ಯ ಬದುಕಲು ಬೇಕಾದ ವಾತಾವರಣ ಇರುವುದಾದರೆ ಮುಂದೊಂದು ದಿನ ಮಂಗಳನ ಅಂಗಳದಲ್ಲಿ ಕಾಲಿಡುವ ಸಮಯ ದೂರವಿಲ್ಲ ಎಂದೆನ್ನಬಹುದು.

### 10.ಯೋಗ ಶಿಕ್ಷಣದ ಮಹತ್ವ

ಪೀಠಿಕೆ:
ಪ್ರಾಚೀನ ಭಾರತವು ಕಲಿಕೆಗೆ ಪ್ರಖ್ಯಾತವಾದ ದೇಶವಾಗಿತ್ತು. ಅದಕ್ಕೆ ವೇದಗಳು'ಉಪನಿಷತ್ತುಗಳು, ಸಂಸ್ಕೃತ ಸಾಹಿತ್ಯವೇ ಸಾಕ್ಷಿ. ಜ್ಞಾನವಷ್ಟೇ ಅಲ್ಲದೇ ಯೋಗ ಶಿಕ್ಷಣಕ್ಕೂ ಪ್ರಾಚೀನರು ಆದ್ಯತೆ ನೀಡಿದ್ದರು. ಹೀಗಾಗಿ ದೇಹ ಮತ್ತು ಮನಸ್ಸಿನ ಆರೋಗ್ಯ ಸದೃಢವಾಗಲು ಸಹಾಯಕವಾಯಿತು. ಇಂದಿನ ಅನೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಇನ್ನು ನಾಗರೀಕತೆಯ ಹೊಸ್ತಿಲು ಮೆಟ್ಟುವ ಮೊದಲೇ ಭಾರತವು ವಿಜ್ಞಾನ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿತ್ತು.
ವಿಷಯ ನಿರೂಪಣೆ:
ಯೋಗ ಶಿಕ್ಷಣವು ದೈಹಿಕ–ಮಾನಸಿಕ ವಿಕಾಸಕ್ಕೆ ಸಾಧನ. ಮಾನವನ ದೇಹದ ಪ್ರತಿಯೊಂದು ಅವಯವದ ಸಕ್ರಿಯ ಚಟುವಟಿಕೆಗೆ ಯೋಗ ಶಿಕ್ಷಣವು ಆಧ್ಯತೆ ನೀಡುವುದಲ್ಲದೇ ,ವೃದ್ಯಾಪ್ಯದಲ್ಲಿ ಸಂಭವಿಸಬಹುದಾದ ಅನೇಕ ದೈಹಿಕ–ಮಾನಸಿಕ ಕಾಯಿಲೆಗಳಿಗೆ ಸವಾಲಾಗಿ ನಿಲ್ಲುವ ಸಾಮರ್ಥ್ಯವನ್ನು ವೃದ್ಧಿಸುತ್ತದೆ.ಅಷ್ಟೇ ಅಲ್ಲದೇ ಚಿಕ್ಕ ವಯಸ್ಸಿನಲ್ಲಿಯೇ ಯೋಗ ಪಾಠವನ್ನು ಮಕ್ಕಳಿಗೆ ಕಲಿಸುವುದರಿಮದ ಅವರಲ್ಲಿ ಮೆದುಳು ,ಕಣ್ಣು ಮೊದಲಾದ ಸೂಕ್ಷ್ಮ ಅಂಗಗಳು ಚುರುಕುಗೊಳ್ಳಲು ಸಹಾಯ ಮಡುತ್ತದೆ.

ಇಂದು ಭಾರತ ದೇಶದ ಅನೇಕ ಶಾಲೆಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಯೋಗ ಶಿಕ್ಷಣವನ್ನು ಕಡ್ಡಾಯಗೊಳಿಸಿದೆ. ಯೋಗದ ನಿರಂತರ ಅಭ್ಯಾಸದಿಂದ ಮನೋನಿಯಂತ್ರಣ, ಇಂದ್ರೀಯನಿಗ್ರಹ,ಅಧಿಕ ಕಾರ್ಯೋತ್ಸಾಹ ಮೊದಲಾದ ಸಾಮರ್ತ್ಯಗಳನ್ನು ಬೆಳೆಸಿಕೊಳ್ಳಬಹುದು.ಯೋಗಭ್ಯಾಸವನ್ನು ಪ್ರತಿಯೊಬ್ಬರು ಅಭ್ಯಾಸ ಮಾಡಿ ಆಚರಣೆಯಲ್ಲಿರಿಸಿಕೊಂಡರೆ ಇಡೀ ದೇಶ ಎದುರಿಸುತ್ತಿರುವ ಅನೇಕ ನೈತಿಕ ಸವಾಲುಗಳನ್ನು ಎದುರಿಸಲು ಸಾಧ್ಯ.
ಉಪಸಂಹಾರ :
ಯೋಗ ಶಿಕ್ಷಣವು ಸಾಂಪ್ರದಾಯಿಕ ಶಿಕ್ಷಣವೆಂಬ ಕಾರಣದಿಂದ ಅನೇಕರು ಇದನ್ನು ಹೀಗಳೆಯುವುದು ಉಂಟು. ಆದರೆ ಯೋಗ ಶಿಕ್ಷಣದ ಮಹತ್ವವನ್ನು ಅರಿತ ಅನೇಕ ಅಭಿವೃದ್ಧಿ ಹೊಂದಿದ ದೇಶಗಳು ಯೋಗ ಶಿಕ್ಷಣವನ್ನು ತಮ್ಮ ನೆಲದಲ್ಲಿ ಅಳವಡಿಸಿವೆ. ಆದ್ದರಿಂದ ಯೋಗ ಶಿಕ್ಷಣವನ್ನು ಅಳವಡಿಸುವುದರಿಂದ ಶಿಸ್ತಿನ ಜೀವನ ನಡೆಸಲು ಸಾಧ್ಯವಾಗುತ್ತದೆ.

### 11.ರಾಷ್ಟ್ರೀಯ ಹಬ್ಬಗಳು

ಪೀಠಿಕೆ : ಒಂದು ದೇಶದ ಐಕ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಹಬ್ಬಗಳು ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಭಾರತದಂತಹ ವೈವಿಧ್ಯತೆಯುಳ್ಳ ರಾಷ್ಟ್ರಗಳಲ್ಲಿ ಏಕತೆಯನ್ನು ತರುವುದು ಇಂತಹ ರಾಷ್ಟ್ರೀಯ ಹಬ್ಬಗಳ ಮೂಲಕ ಸಾಧ್ಯವಿದೆ. "ಇಡಿ ರಾಷ್ಟ್ರದ ಜನರೆಲ್ಲರೂ ಯಾವುದೇ ಭೇಧಭಾವವಿಲ್ಲದೆ, ಜಾತಿ, ಧರ್ಮ, ಪ್ರಾದೇಶಿಕ ಭಿನ್ನತೆಯನ್ನು ತೊರೆದು ಒಟ್ಟಾಗಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು ಎಂದು ಕರೆಯಬಹುದು." ನಮ್ಮದೇಶದಲ್ಲಿ ಮೂರು ರಾಷ್ಟ್ರೀಯ ಹಬ್ಬಗಳೆಂದು ಘೋಷಿಸಲಾಗಿದೆ. ಅವುಗಳೆಂದರೆ

1) ಸ್ವಾತಂತ್ರ್ಯ ದಿನಾಚರಣೆ
2) ಗಣರಾಜ್ಯೋತ್ಸವ
3) ಗಾಂಧಿ ಜಯಂತಿ.

ವಿಷಯ ನಿರೂಪಣೆ :

1) ಸ್ವಾತಂತ್ರ್ಯ ದಿನಾಚರಣೆ: ಭಾರತ ಸುಮಾರು ಎರಡು ನೂರು ವರ್ಷಗಳ ಕಾಲ ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿತ್ತು.ವ್ಯಾಪಾರದ ಉದ್ದೇಶದಿಂದ ಬಂದ ಬ್ರಿಟೀಷರು ಭಾರತೀಯ ಅರಸರುಗಳು ದೌರ್ಬಲ್ಯಗಳನ್ನು ಉಪಯೋಗಿಸಿಕೊಂಡು ಭಾರತ ದೇಶದ ಆಡಳಿತ ಚುಕ್ಕಾಣಿ ಹಿಡಿದಿದ್ದರು.ಭಾರತಿಯರಿಗೆ ಸ್ವಾತಂತ್ರ ಎನ್ನವುದೇ ಇರಲಿಲ್ಲ.ಹಾಗಾಗಿ ಭಾರತೀಯರೆಲ್ಲರೂ ಒಟ್ಟಾಗಿ ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ರಣಕಹಳೆಯನ್ನು ಊದಿ ಕೊನೆಗೆ 1947 ನೇ ಆಗಸ್ಟ್ 15 ರಂದು ಸ್ವಾತಂತ್ರವನ್ನು ಪಡೆದರು.ಆ ದಿನವನ್ನು ಪ್ರತಿವರ್ಷ ಭಾರತೀಯರೆಲ್ಲರೂ ಒಟ್ಟಾಗಿ ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಿ ರಾಷ್ಟ್ರೀಯ ಐಕ್ಯತೆಯನ್ನು ಮೆರೆಯುತ್ತಾರೆ.ಅಂದು ಶಾಲಾ–ಕಾಲೇಜು–ಕಛೇರಿಗಳಲ್ಲಿ ರಾಷ್ಟ್ರೀಯ ಧ್ವಜವನ್ನು ಹಾರಿಸಿ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

2) ಗಣರಾಜ್ಯೋತ್ಸವ : ಭಾರತದೇಶವು ಸ್ವಾತಂತ್ರ್ಯವನ್ನು ಪಡೆದ ನಂತರ ಆಡಳಿತದ ರೂಪುರೇಷಗಳನ್ನು ಸಿದ್ಧಪಡಿಸಲಾಗುತ್ತದೆ. ಆ ರೂಪುರೇಷಗಳನ್ನು ಒಳಗೊಂಡಿರುವುದೇ ನಮ್ಮ ಸಂವಿಧಾನ. ಎಲ್ಲ ರಾಜ್ಯಗಳನ್ನು ಗಣಗಳನ್ನಾಗಿ ಮಾಡಿ (ಒಟ್ಟುಗೂಡಿಸಿ) ಉತ್ತಮವಾದ ಆಡಳಿತ ನಡೆಸಲು ಕಾನೂನುರೂಪ ಪಡೆದ ಸಂವಿಧಾನವನ್ನು ಜನೇವರಿ 26,1950 ರಲ್ಲಿ ಜಾರಿಗೆ ತರಲಾಯಿತು. ಆ ದಿನವೇ ಗಣರಾಜ್ಯ ದಿನ. ಇದನ್ನು ಕೂಡ ನಮ್ಮ ದೇಶದ ಪ್ರಜೆಗಳೆಲ್ಲರೂ ಒಟ್ಟಾಗಿ ಸೇರಿ ಆಚರಿಸುತ್ತಾರೆ.ಈ ದಿನದಲ್ಲಿ ರಾಷ್ಟ್ರಧ್ವಜವನ್ನು ಆರಿಸಿ ಸಂವಿಧಾನದ ನಿರ್ಮಾತೃಗಳು ಹಾಗೂ ತತ್ವಗಳನ್ನು ಸ್ಮರಿಸಿಕೊಳ್ಳತ್ತಾರೆ. ಪ್ರತಿಯೊಬ್ಬರು ಸಂವಿಧಾನ ಪಾಲಿಸುವ ಮನೋಧರ್ಮವನ್ನು ಬೆಳೆಸಿಕೊಳ್ಳುವ ಆಶಯನ್ನು ಪಡೆಯುತ್ತಾರೆ. ಹಾಗೆಯೇ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

3) ಗಾಂಧಿ ಜಯಂತಿ : ಯಾವುದೇ ಒಂದು ದೇಶದ ಜನರೆಲ್ಲರೂ ಒಟ್ಟಾಗಿ ಸೇರಲು ನಾಯಕತ್ವ ಬೇಕು. "ನಾಯಕರಿಲ್ಲದ ನಾವೆ ದಡಸೇರಲಾರದು" ಅಂತೆಯೇ ನಮ್ಮ ದೇಶದ ಸ್ವಾತಂತ್ರ್ಯ ಪಡೆಯಲು ಬಹುಮುಖ್ಯ ನಾಯಕತ್ವವಹಿಕೊಂಡವರು ನಮ್ಮ ದೇಶದ ರಾಷ್ಟ್ರಪಿತ ಎನಿಸಿಕೊಂಡ ಮಹಾತ್ಮ ಗಾಂಧೀಜಿಯವರು. ಅವರ ಹುಟ್ಟಿದ ದಿನವೇ ಅಕ್ಟೋಬರ್ 2. ಆ ದಿನವನ್ನು ಗಾಂಧಿಜಯಂತಿಯೆಂದು ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಲಾಗುತ್ತದೆ.ಏಕೆಂದರೆ ಗಾಂಧೀಜಿವರು ಸ್ವಾತಂತ್ರ್ಯ ಚಳುವಳಿಯ ಮುಂದಾಳತ್ವವನ್ನು ವಹಿಸಿಕೊಂಡು ಸ್ವಾತಂತ್ರ್ಯವನ್ನು ತಂದುಕೊಡುವಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡರು. ಆದ್ದರಿಂದ ಅವರ ಆದರ್ಶಗಳನ್ನು ನೆನೆಯುತ್ತ,ಅವರನ್ನು ಸ್ಮರಿಸುತ್ತಾ ಸ್ವಾತಂತ್ರ್ಯದ ಮಹತ್ವದಬಗ್ಗೆ ಕೊಂಡಾಡುವ ದಿನವಾಗಿದೆ.

ಉಪಸಂಹಾರ : ಭಾರತದಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದರಿಂದ ಪ್ರತಿಯೊಬ್ಬ ನಾಗರಿಕರಲ್ಲಿ ಏಕತೆ. ದೇಶಭಕ್ತಿ, ಸಂವಿಧಾನದ ಮಹತ್ವ, ನಾಯಕತ್ವದ ಮಹತ್ವ ಮುಂತಾದ ವಿಚಾರಗಳನ್ನು ತಿಳಿಯಲು ಮತ್ತು ನಾವು ಅದೇ ರೀತಿ ನೆಡೆದುಕೊಳ್ಳಲು ನೆರವಾಗುತ್ತದೆ ಎಂಬ ಆಶಯವನ್ನು ಇಟ್ಟುಕೊಳ್ಳೋಣ.

# ಗಾದೆ ಮಾತುಗಳು

**1. ಹೆತ್ತ ತಾಯಿ, ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು :–**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ಜೀವನದಲ್ಲಿ ನಮಗೆ ಹಲವಾರು ಸೌಲಭ್ಯಗಳು ದೊರೆತು ನಾವು ಅತ್ಯುನ್ನತ ದರ್ಜೆಗೆ ಏರಲು ಸಾಧ್ಯವಾಗಬಹುದು. ಅದರಿಂದ ನಮಗೆ ಹಲವಾರು ವಿಧದ ಸುಖ ಹುಡುಕಿಕೊಂಡು ಬರಬಹುದು. ಆದರೆ ಹೆತ್ತ ತಾಯಿ ಮಡಿಲಲ್ಲಿ ದೊರಕುವ ಸುಖಕ್ಕೆ ಸಮನಾದ ಸುಖ ಯಾವುದರಿಂದಲೂ ಸಿಗುವುದಿಲ್ಲ. ಅದೇರೀತಿ ನಾವು ಜನ್ಮ ಪಡೆದ ನಾಡು ನಮಗೆ ಇಂದ್ರನ ನಂದನವಕ್ಕಿಂತಲೂ ಮಿಗಿಲಾದುದು. ಅದಕ್ಕೆ ಕಾರಣ ನಮ್ಮ ಮನಸ್ಸಿನಲ್ಲಿ ಹುದುಗಿರುವ ಮಾತೃಭೂಮಿ ಕುರಿತಾದ ಗೌರವದ ಭಾವನೆಗಳು. ಸಂಸ್ಕೃತದ "ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎನ್ನುವ ಉಕ್ತಿಯು ಇದೇ ಅರ್ಥವನ್ನು ನೀಡುತ್ತದೆ.

**2.ಶಕ್ತಿಗಿಂತ ಯುಕ್ತಿ ಮೇಲು.**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ಸಂಸ್ಕೃತದ ಉಕ್ತಿಯೊಂದು 'ನಾಶಕ್ಯಂ ಬುದ್ಧಿವಂತ: ಪರುಷಸ್ಯ' ಎಂದು ಹೇಳುತ್ತದೆ ಅಂದರೆ ಬುದ್ಧಿವಂತ ಪುರುಷನಿಗೆ ಅಸಾಧ್ಯವದುದು ಯಾವುದು ಇಲ್ಲ. ಬುದ್ಧಿ ಮತ್ತು ಬಲಗಳ ನಡುವೆ ಸಂಘರ್ಷ ಏರ್ಪಟ್ಟಾಗ ಬುದ್ಧಿಗೆ ಗೆಲುವು ನಿಶ್ಚಿತ. ಆನೆ ಎಷ್ಟೇ ಬಲಿಷ್ಟವಾದರೂ ಬುದ್ಧಿವಂತ ಗುಬ್ಬಚ್ಚಿಗಳು ಇರುವೆಯ ಸಹಾಯ ಪಡೆದು ಆನೆಯನ್ನು ಕೊಂದ ಕಥೆ ಪಂಚತಂತ್ರದಲ್ಲಿದೆ. ಆನೆ ಎಷ್ಟೇ ಬಲಿಷ್ಟವಗಿದ್ದರೂ ಬುದ್ಧಿಶಕ್ತಿಯಿಲ್ಲದ್ದರಿಂದ ನಾಶ ಹೊಂದಬೇಕಾಯಿತು. ಆದ್ದರಿಂದಲೇ ಶಕ್ತಿಗಿಂಗಿಂತ ಯುಕ್ತಿ ಮೇಲು ಎಂಬುದನ್ನು ಈ ಗಾದೆ ಮಾತು ಸೂಚಿಸುತ್ತದೆ.

**3.ಊಟಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ಜೀವಿಸಲು ಊಟ ಅವಶ್ಯಕ. ಆದರೆ ಊಟವೇ ಜೀವವಾಗಬಾರದು. ಎಂಬಂತೆ ಊಟದ ಕ್ರಮವು ಉತ್ತಮ ಆರೋಗ್ಯಕ್ಕೆ ಕಾರಣ. ಸತ್ವಯುತ ಪದಾರ್ಥಗಳನ್ನು ಸೇವಿಸುವುದು, ಸರಿಯಾದ ಸಮಯಕ್ಕೆ ಸರಿಯಾದ ಭೋಜನ, ನಮಗೆ ಬರಬಹುದಾದ ಹಲವಾರು ರೋಗಗಳನ್ನು ದೂರ ಮಾಡುತ್ತದೆ. ಹಾಗೆಯೇ ಮಿತಿ ಅರಿತ ಅರ್ಥಪೂರ್ಣ ಮಾತು ನಡೆಯಬಹುದಾದ ಅನೇಕ ಜಗಳಗಳನ್ನು ತಡೆಯುತ್ತದೆ. ಆದ್ದರಿಂದಲೇ ಬಸವಣ್ಣನವರು "ನುಡಿದರೆ ಮುತ್ತಿನ ಹಾರದಂತಿರಬೇಕು,ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು" ಎಂಬ ತಮ್ಮ ವಚನದ ಮೂಲಕ ಮಾತಿನ ಮಹತ್ವವನ್ನು ಲೋಕಕ್ಕೆ ಸಾರಿದ್ದಾರೆ. ಅದಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಯು ಮಧುರವಾಗಿ ಮಾತನಾಡಬೇಕು, ಆ ಮೂಲಕ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂಬುದನ್ನು ಈ ಗಾದೆಯು ಸೂಚಿಸುತ್ತದೆ.

### 4.ದೇಶ ಸುತ್ತು ; ಕೋಶ ಓದು

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ಮನುಷ್ಯನಿಗೆ ಲೋಕಜ್ಞಾನ ಬಹಳ ಮುಖ್ಯ. ಅಂದರೆ ಒಂದು ದೇಶ ಸುತ್ತುವುದರಿಂದ ಪ್ರದೇಶದ ಜನರ ಆಚಾರ, ವಿಚಾರ, ಪದ್ಧತಿ, ರೀತಿ, ನೀತಿಗಳಳ ಅರಿವಾಗುತ್ತದೆ. ನಮಗೆ ತಿಳಿಯದೇ ಇರುವ ಎಷ್ಟೋ ವಿಷಯಗಳು ತಿಳಿಯುತ್ತವೆ. ಲೋಕಸುತ್ತುವುದೇ ಒಂದು ಬಗೆಯ ಜ್ಞಾನಾರ್ಜನೆ ಎನಿಸಿದೆ. ಅದರಂತೆ ಕೋಶ ಓದುವುದು ಎಂದರೆ ಬೇರೆಬೇರೆ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಅಧ್ಯಯನ ಮಾಡುವುದು , ಇಡೀ ಪ್ರಪಂಚದ ಜ್ಞಾನ ಪುಸ್ತಕಗಳಲ್ಲಿ ಅಡಗಿದೆ. ಹೀಗೆ ಅಡಕವಾಗಿರುವ ವಿಷಯಗಳನ್ನು ಓದಿ ಅದನ್ನು ಜೀವನದಲ್ಲಿ ಅನ್ವಯ ಮಾಡಿಕೊಂಡರೆ ನಮ್ಮ ಬದುಕು ಹಸನಾಗುತ್ತದೆ. ಇವೆರಡರ ಉದ್ದೇಶವು ಅಂತಿಮವಾಗಿ ಅನುಭವಗಳಿಸುವುದಾಗಿದೆ.

### 5. ಕೈಕೆಸರಾದರೆ ಬಾಯಿ ಮೊಸರು/ದುಡಿಮೆಯೇ ದುಡ್ಡಿನ ತಾಯಿ

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ಕೈಕೆಸರಾದರೆ ಬಾಯಿ ಮೊಸರು ಅಂದರೆ ಕಷ್ಟಪಟ್ಟು ದುಡಿದರೆ ಸುಖವುಂಟು ಎಂದರ್ಥ. ಸೋಮಾರಿಯಾಗಿ ಸುಮ್ಮನೆ ಕುಳಿತುಕೊಳ್ಳಬಾರದು. ಯಾವುದಾದರೊಂದು ಕೆಲಸ ಮಾಡುವುದರಿಂದ ನಮ್ಮ ಹೊಟ್ಟೆ ತುಂಬುತ್ತದೆ. ನಮ್ಮ ಬಾಯಿ ಮೊಸರಿನ ರುಚಿ ನೋಡುವಂತಾಗುತ್ತದೆ. "ಛೀ! ಕೈ ಕೆಸರಾಗುವುದಲ್ಲಾ .ಈ ಕೆಲಸ ಮಾಡುವುದಾದರೂ ಹೇಗೆ?" ಎಂದು ಯೋಚಿಸುತ್ತಾ ಕುಳಿತರೆ ಯಾವ ಕೆಲಸವನ್ನೂ ಮಾಡಲು

ಸಾಧ್ಯವಿಲ್ಲ. ಕೆಲಸ ಮಾಡದಿದ್ದರೆ ಹಣ ಸಂಪಾದನೆಯಾಗುವುದಿಲ್ಲ. ಸಂಪಾದನೆಯಾಗದಿದ್ದರೆ ಹೊಟ್ಟೆ ತುಂಬುವುದಿಲ್ಲ . ಜೀವನ ಸುಖವಾಗಿ ಸಾಗಬೇಕಾದರೆ ಕೈ ಕೆಸರಾಗಲೇ ಬೇಕು; ಕೈ ತುಂಬಾ ಸಂಪಾದನೆಯಾಗಲೇಬೇಕು. ಆಗ ನಮಗೆ ಒಳ್ಳೆಯ ಊಟ , ಆಹಾರ ಸಿಗುವಂತಾಗುತ್ತದೆ. ಅದಕ್ಕೇ ಹಿರಿಯರು ಹೇಳಿದ್ದು –'ಕೈ ಕೆಸರಾದರೆ ಬಾಯಿ ಮೊಸರು'.

### 6. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು.

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಈ ಮಾತನ್ನು ಸಾರ್ಥಕಗೊಳಿಸಿದ ಮಹಾವ್ಯಕ್ತಿಗಳು ಹಲವರು. ಶಿವಜಿಯದು ಎತ್ತರದ ನಿಲುವಲ್ಲ . ಆದರೆ ಅಯಸ್ಕಾಂತದಂತೆ ತನ್ನ ಜನರನ್ನೆಲ್ಲ ಬರಸೆಳೆದು , ಒಗ್ಗೂಡಿಸಿ ಮಹಾ ಸಾಮ್ರಾಜ್ಯ ಸ್ಥಾಪಿಸಿದ ಕೀರ್ತಿ ಶಿವಾಜಿಯದು. ನೆಪೋಲಿಯನ್ ಕುಳ್ಳ. ಅದರೆ ಜಗವನ್ನೇ ನಡುಗಿಸಿದ. ಶಾಸ್ತ್ರೀಜಿ ಇವರಿಗಿಂತ ಎತ್ತರದಲ್ಲಿ ಹೆಚ್ಚಲ್ಲ; ಸಾಹಸದಲ್ಲಿ ಕಡಿಮೆಯಲ್ಲ. ದೃಢತೆ ಸಾಹಸ ,ಸಹನೆ ಚಾತುರ್ಯ ಮುಂತಾದವು ಒಂದು ದಿನದಲ್ಲಿ ಅಥವಾ ಒಂದು ವರ್ಷದಲ್ಲಿ ಸಂಪಾದಿಸಿದ ಗುಣಗಳಲ್ಲ. ಅವರ ಬಾಳು ಬೆಳೆದ ಬಂದ ಬಗೆಯನ್ನು ಕಂಡಾಗ ಅವರ ವ್ಯಕ್ತಿತ್ವದ ನಿಜವಾದ ದರ್ಶನವಾಗುತ್ತದೆ. ಇವರೆಲ್ಲರ ವ್ಯಕ್ತಿತ್ವವನ್ನು ನೋಡಿದಾಗ ಮೂರ್ತಿ ಚಿಕ್ಕದೆ ಇರಬಹುದು ಆದರೆ ಸಾಧನೆ ಅಪ್ರತಿಮವಾದುದು. ಆದ್ದರಿಂದ ಅಳತೆಗಿಂತ ವ್ಯಕ್ತಿತ್ವ ಮುಖ್ಯ ಎಂಬುದನ್ನು ಈ ಗಾದೆ ಮಾತು ಸಾಂಕೇತಿಕವಾಗಿ ಸೂಚಿಸುತ್ತದೆ.

### 7. ಕಟ್ಟುವುದು ಕಠಿಣ ಕೆಡವುವುದು ಸುಲಭ

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ಯಾವುದೇ ವಸ್ತುವನ್ನು ಸೃಷ್ಟಿಸುವುದು ಬಹಳ ಕಷ್ಟದ ಕೆಲಸ .ಆದರೆ ಅದನ್ನು ಹಾಳು ಮಾಡುವಲ್ಲಿ ಯಾವುದೇ ಶ್ರಮವಿಲ್ಲ. ಹಾಗಾಗಿ ಒಂದು ವಸ್ತುವಿನ ಸೃಷ್ಟಿಯ ಹಿಮದಿನ ಪ್ರಾಮುಖ್ಯತೆಯನ್ನು ಅದನ್ನು ಕೆಡಹುವ ಮುನ್ನ ತಿಳಿದುಕೊಳ್ಳುವುದು ಅತ್ಯವಶ್ಯ. 'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ' ಎಂಬ ಗಾದೆಯು ಮೇಲಿನ ಗಾದೆಗೆ ಉದಾಹರಣೆಯಾಗಿದೆ. ಕಷ್ಟಪಟ್ಟು ನಿರ್ಮಿಸಿದ ಯಾವುದೇ ವಸ್ತುವೂ ಜೋಪಾನಕ್ಕೆ ಅರ್ಹವಾದುದು ಎಂಬುದನ್ನು ಈ ಗಾದೆ ಸೂಚಿಸುತ್ತದೆ.

### 8. ಮಾತೇ ಮುತ್ತು ಮಾತೇ ಮೃತ್ಯು

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ನಮ್ಮ ಹಿರಿಯರ ಅನುಭವದ ಮಾತುಗಳು ಸತ್ಯಸಂಗತಿಗಳಾಗಿವೆ. ಮೇಲಿನ ಗಾದೆಯು ಪರರೊಡನೆ ಸಂತೋಷವಾಗಿರಲು ಅವರೊಡನೆ ನಾವು ಮಾತನಾಡುವ ರೀತಿಬಹಳ ಮುಖ್ಯವಾಗುತ್ತದೆ ಎಂಬುದನ್ನು ತಿಳಿಸುತ್ತದೆ.'ಮಾತು ಆಡಿದರೆ ಹೋಯಿತು,ಮುತ್ತು ಒಡೆದರೆ ಹೋಯಿತು' ಎಂಬುದರಲ್ಲಿ ಮಾತಿನ ಮಹತ್ವ ಎದ್ದು ಕಾಣುತ್ತದೆ. ಹಿಡಿತವಿರುವ ಮಾತಿಗೆ

ಮುತ್ತಿನಷ್ಟು ಬೆಲೆ ಇರುತ್ತದೆ. ಆದರೆ ಹಿಡಿತ ತಪ್ಪಿದ ಮಾತು ಮೃತ್ಯುವಾಗಿ ಪರಿಣಮಿಸುತ್ತದೆ. ಆದ್ದರಿಂದ ಮಾತಾಡುವ ಮೊದಲು ಯೋಚಿಸಬೇಕು ಎಂಬುದನ್ನು ಈ ಗಾದೆಯು ಸೂಚಿಸುತ್ತದೆ.

### 9.ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ಹೆಜ್ಜೇನು ಬಹು ರುಚಿಯಾದುದು.ಆದರೆ ಆ ಜೇನುತುಪ್ಪ ತಯಾರಿಸಲು ದುಂಬಿಗಳು ವಹಿಸುವ ಶ್ರಮ ಕಲ್ಪನಾತೀತ .ಹಾಗೆಯೇ ಅದನ್ನು ಮನುಷ್ಯ ಸಂಪಾದಿಸುವುದು ಇನ್ನೂ ದುಸ್ತರ. ಆ ಕೆಲಸದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ಸಾವು ಖಚಿತ. ಅದೇರೀತಿ ಸಜ್ಜನರು; ಜ್ಞಾನಿಗಳು ಸದಾಚಾರ ಸಂಪನ್ನರಾಗಿರುತ್ತಾರೆ.

ಅಂಥವರ ಸಹವಾಸ ಮಾಡುವುದರಿಂದ ನಾವು ಸಹ ಜ್ಞಾನಿಗಳಾಗುತ್ತೇವೆ. ಆದರೆ ಸಜ್ಜನ ಸಂಗದಲ್ಲಿರುವೆನೆಂಬ ಅಹಂಕಾರದಿಂದ ತಾನೇ ಶ್ರೇಷ್ಠನೆಂದು ಭಾವಿಸಿದರೆ ಅಲ್ಲಿಯೂ ಅಪಾಯ ಕಟ್ಟಿಟ್ಟ ಬುತ್ತಿ ಎಂಬುದನ್ನು ಈ ಗಾದೆ ಸೂಚಿಸುತ್ತದೆ.

**10.ಉಪ್ಪಿಗಿಂತ ರುಚಿಯಿಲ್ಲ,ತಾಯಿಗಿಂತ ಬಂಧುವಿಲ್ಲ.**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ನಮಗೆ ಅನೇಕ ಬಂಧುಗಳಿರಬಹುದು. ಅವರಾರೂ ತಾಯಿಯಂತೆ ನಮಗೆ ಅತ್ಯಂತ ಅತ್ಮೀಯರಾಗುವುದಿಲ್ಲ.ತಾಯಿ ನಿಜಕ್ಕೂ ಬಂಧುಗಳಿಗೆ ಮೀರಿದವಳು. ಅವಳು ದೇವರಿಗೆ ಸಮಾನಳಾದವಳು. ಹೀಗಾಗಿ ತಾಯಿಯನ್ನು ಬಿಟ್ಟರೆ ಮಕ್ಕಳಿಗೆ ಬೇರೆ ಬಂಧು ಬಳಗ ಇಲ್ಲವೆಂದು ಹೇಳಬಹುದು. ನಮ್ಮ ಬಾಲ್ಯದಿಂದ ನಮಗೆ ಹತ್ತಿರವಾಗಿ ನಮ್ಮ ನೋವು ನಲಿವುಗಳಿಗೆ ಸ್ಪಂದಿಸುತ್ತ ನಮಗಾಗಿ ತನ್ನ ಜೀವನದಲ್ಲಿ ಅನೇಕ ತ್ಯಾಗಗಳನ್ನು ಮಾಡುವ ತಾಯಿಯಂತ ಬಂಧು ಬೇರೊಬ್ಬರಿಲ್ಲ.

ಅದೇರೀತಿ ಎಲ್ಲಾ ರುಚಿಗಳಲ್ಲಿ ಉಪ್ಪಿನ ರುಚಿ ಶ್ರೇಷ್ಠವಾದುದು. ಷಡ್ರಸಗಳಲ್ಲಿ ಉಪ್ಪಿನ ಸ್ಥಾನ ಮೊದಲಿನದು. ಉಳಿದ ರುಚಿಗಳು ಬೇರೆಬೇರೆ ಸಂದರೌದಲ್ಲಿ ರುಚಿಕರವೆನಿದರು ಕೊನೆಗೆ ಉಪ್ಪಿನ ಸಹಯೋಗವಿಲ್ಲದೆ ಊಟ ಸಪ್ಪೆ ಎನಿಸುತ್ತದೆ.ಆದ್ದರಿಂದ ಉಪ್ಪು ರುಚಿಗಳಲ್ಲೇ ಉತ್ತಮವಾದುದ ಎಂದು ಈ ಗಾದೆ ಮಾತು ಸೂಚಿಸುತ್ತದೆ.

**11. ಅತಿ ಆಸೆ ಗತಿ ಕೆಡಿಸಿತು/ಹಾಸಿಗೆ ಇದ್ದಷ್ಟು ಕಾಲು ಚಾಚು**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ಮನುಷ್ಯನಿಗೆ ಆಸೆ ಇರಬೇಕು. ಆಸೆ ಮನುಷ್ಯನ ಸಹಜ ಪ್ರವೃತ್ತಿ. ಆಸೆ ಇಲ್ಲದವ ಬದುಕಲಾರ. ಅಸೆಯೇ ಉತ್ಸಾಹದ ಜನನಿ. ಅದು ಜೀವನದ ಸಂಚಾಲಕಶಕ್ತಿ. ಆಸೆಯ ಆಸರೆ ಇಲ್ಲದಿದ್ದರೆ ಮನುಷ್ಯ ಕಾಡುಪ್ರಾಣಿಯಂತೆ ಜೀವಿಸುತ್ತಿದ್ದ. ಆದರೆ ಆಸೆಯು ಹಿತಮಿತವಾಗಿರಬೇಕು. ಅತಿಯಾದ ಆಸೆ ದುಃಖಕ್ಕೆ ಮೂಲ ಎಂದು ಬುದ್ಧ ಹೇಳಿದ್ದಾನೆ. ಅತಿಯಾದರೆ ಅಮೃತವೂ ಕೂಡ ವಿಷವಾಗುತ್ತದೆ. ಅತಿಯಾಸೆಯಿಂದ ಮನುಷ್ಯ ನೆಮ್ಮದಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಪ್ರತಿದಿನ ಚಿನ್ನದ ಮೊಟ್ಟೆ ಇಡುತ್ತಿದ್ದ ಕೋಳಿಯನ್ನು ಪಡೆದ ರೈತನೊಬ್ಬನು ಒಂದೇ ಬಾರಿಗೆ ಶ್ರೀಮಂತನಾಗಬೇಕೆಂಬ ಅತಿ ಆಸೆಯಿಂದ ಕೋಳಿಯ ಹೊಟ್ಟೆಯನ್ನು ಸೀಳಿ ಒಂದೂ ಸಿಗದೆ ನಿರಾಶೆಯಾದನು. ಮುಟ್ಟಿದೆಲ್ಲಾ ಚಿನ್ನವಾಗಬೇಕೆಂದು ವರವನ್ನು ಪಡೆದ ಮೈದಾಸ ತನ್ನ ಮಗಳನ್ನು ಚಿನ್ನದ ಗೊಂಬೆಯನ್ನಾಗಿಸಿ ದುಃಖಪಡುತ್ತಾನೆ ಆಸೆಯೆಂಬುದು ಬಹಳ ಕೆಟ್ಟದ್ದು. ಮನುಷ್ಯನು ಮುಪ್ಪನಪ್ಪಿದರೂ ಆಸೆಯು ಬಿಡದು. ಹೀಗೆ ಅತಿ ಆಸೆ ಯಾರಿಗೂ ಎಂದಿಗೂ ಒಳ್ಳೆಯದಲ್ಲ. ಆದ್ದರಿಂದ ಅತಿ ಆಸೆ ಪಡಬಾರದು ಇಲ್ಲವಾದರೆ ಅತಿಆಸೆ ಗತಿಕೆಡಿಸುತ್ತದೆ.

**12. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ?**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ಯಾವುದೇ ಪ್ರಾಣಿ ಅಥವಾ ಸಸ್ಯವನ್ನು ಅದು ಚಿಕ್ಕದಿರುವಾಗಲೇ ಬೇಕಾದಂತೆ ಬೇಕಾದ ಹಾಗೆ ಅದನ್ನು ರೂಪಿಸಬಹುದು. ಗಿಡ ಚಿಕ್ಕದಿರುವಾಗ ಎಳೆಯ ಬಳ್ಳಿ ಹೇಗೆಂದರೆ ಹಾಗೇ ಬಾಗುತ್ತದೆ. ಆದರೆ ಬಲಿತ ಮೇಲೆ ಬಾಗಿಸಿದರೆ ಮುರಿಯುತ್ತದೆ. ಹಾಗೆಯೇ ಪ್ರಾಣಿ ಅಥವಾ ಮನುಷ್ಯರು ಚಿಕ್ಕದಿರುವಾಗಲೇ ನಡೆಯೆಯನ್ನು ತಿದ್ದಬಹುದು. ನಮಗೆ ಬೇಕಾದಂತೆ ರೂಪಿಸಕೊಳ್ಳಬಹುದು. ಹಾಗಾಗಿಯೇ ಮಗುವಿನ ಬಾಲ್ಯದಲ್ಲಿಯೇ ವಿದ್ಯೆಯನ್ನು ಕಲಿಸಬೇಕೆಂದು ಸರ್ವಜ್ಞನು ಹೇಳಿದ್ದಾನೆ. ಆದ್ದರಿಂದ ಚಿಕ್ಕದಿರುವಾಗಲೇ ಮಾನವ ತನ್ನಲ್ಲಿ ಸಜ್ಜನ ನಡತೆಯನ್ನು ಬೆಳೆಸಿಕೊಳ್ಳಬೇಕೆಂದು ಈ ಗಾದೆ ಸೂಚಿಸುತ್ತದೆ.

**13.ಬೆಳೆಯುವ ಸಿರಿ ಮೊಳಕೆಯಲ್ಲಿ.**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ಬೆಳೆಯುವ ಸಸಿಯನ್ನು ನೋಡಿದಾಗಲೇ ಅದು ಮುಂದೆ ಎಂತಹ ಬೆಳೆಯನ್ನು ಕೊಡುತ್ತದೆ ಎಂಬುದು ತಿಳಿಯುತ್ತದೆ. ಹಾಗೆಯೇ ಬಾಲ್ಯದಲ್ಲಿ ಮಕ್ಕಳ ನಡೆನುಡಿಗಳನ್ನು ಗಮನಿಸಿದರೆ ಮುಂದೆ ಅವರು ಏನಾಗುತ್ತಾರೆ ಎಂಬುದನ್ನು ಅರಿಯಬಹುದು. ಕ್ರಿಕೆಟ್ ಆಟಗಾರ ಸಚಿನ್ ಜೀವನವೇ ಇದಕ್ಕೊಂದು ಉತ್ತಮ ಉದಾಹರಣೆ.ಮೊಳಕೆ ಚೆನ್ನಾಗಿದ್ದರೆ ಬೆಳೆ ಚೆನ್ನಾಗಿರುತ್ತದೆ. ಅದೇ ರೀತಿ ಮಕ್ಕಳು ಬಾಲ್ಯದಲ್ಲಿ ಉತ್ತಮ ಗುಣಗಳನ್ನು ಬೆಳೆಸಿಕೊಂಡರೆ ಮುಂದೆ ಅವರು ಉತ್ತಮ ವ್ಯಕ್ತಿಗಳಾಗುತ್ತಾರೆ ಎಂಬುದೇ ಈ ಗಾದೆಯ ಅರ್ಥವಾಗಿದೆ. "ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?, ಮೂರು ವರ್ಷದ ಬುದ್ಧಿ ನೂರು ವರ್ಷದ ತನಕ" ಈ ಗಾದೆಗಳು ಸಹ ಇದೇ ಅರ್ಥವನ್ನು ಸೂಚಿಸುತ್ತವೆ.

# ವೈಯಕ್ತಿಕ ಪತ್ರ ಬರವಣಿಗೆ

ನಿಮ್ಮ ಶಾಲೆಯಲ್ಲಿ ನಡೆದ 'ಶಾಲಾ ವಾರ್ಷಿಕೋತ್ಸವ'ವನ್ನು ಕುರಿತು ನಿಮ್ಮ ತಂದೆ/ತಾಯಿ/ಸಹೋದರ/ಸಹೋದರಿ/ಗೆಳೆಯ/ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.

ಕ್ಷೇಮ ಶ್ರೀ 10 ನೇ ಜನವರಿ 2018

ತೀರ್ಥರೂಪ ತಂದೆಯವರಿಗೆ ನಿಮ್ಮ ಮಗನಾದ ವೇದಾಂತ್ ಮಾಡುವ ಶಿರಸಾಷ್ಟಾಂಗ ದೀರ್ಘದಂಡ ನಮಸ್ಕಾರಗಳು.

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಮನೆಯಲ್ಲಿ ಎಲ್ಲರೂ ಆರೋಗ್ಯ ಎಂದು ಭಾವಿಸಿರುತ್ತೇನೆ. ನಮ್ಮ ಶಾಲೆಯಲ್ಲಿ ದಿನಾಂಕ 10ನೇ ಜನವರಿ 2017 ರಂದು 'ಶಾಲಾ ವಾರ್ಷಿಕೋತ್ಸವ'ವನ್ನು ಹಮ್ಮಿಕೊಂಡಿದ್ದೆವು. ನಮ್ಮ ಮುಖ್ಯೋಪಾಧ್ಯಾಯರ ಮುಂದಾಳತ್ವದಲ್ಲಿ ಎಲ್ಲಾ ಶಿಕ್ಷಕರು, ವಿದ್ಯಾರ್ಥಿಗಳು 'ಶಾಲಾ ವಾರ್ಷಿಕೋತ್ಸವ' ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ವಾರ್ಷಿಕೋತ್ಸವದ ಅಂಗವಾಗಿ ವಾರ್ಷಿಕ ಕ್ರೀಡಾಕೂಟ, ರಸಪ್ರಶ್ನೆ, ಪ್ರಬಂಧ, ಭಾಷಣ, ಸ್ಪರ್ಧೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ಕೆಲವು ಸ್ಪರ್ಧೆಗಳಲ್ಲಿ ನಾನು ಸಹ ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದೇನೆ ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ಹಾಗೆಯೇ ನನ್ನ ವಿದ್ಯಾಭ್ಯಾಸದ ಕಡೆಗೂ ಗಮನ ನೀಡುತ್ತಿದ್ದೇನೆ.

ಈ ಎಲ್ಲ ವಿಷಯವನ್ನು ಮಾತೃಶ್ರೀಯವರಿಗೂ ಹೇಳಿ, ನನ್ನ ನಮಸ್ಕಾರಗಳನ್ನು ತಿಳಿಸಿ.

ನಮಸ್ಕಾರಗಳೊಂದಿಗೆ,
ಇತಿ ತಮ್ಮ ಪ್ರೀತಿಯ ಮಗ

ಹೊರ ವಿಳಾಸ :

ರವರಿಗೆ,
ಕನ್ನಡ ಮಿತ್ರ ಕೆಂಪರಾಜ್
ಅಕ್ಷರ ನಿಲಯ : ಮನೆ ನಂ : 3530
ಗುಣಿತಾಕ್ಷರ ಬೀದಿ, ಕನ್ನಡ ನಗರ, ಕೋಲಾರ

ನಿಮ್ಮ ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಕುರಿತು ಬೇರೆ ಊರಿನಲ್ಲಿರುವ ನಿಮ್ಮ ತಂದೆ/ತಾಯಿ/ ಸಹೋದರ/ಸಹೋದರಿ/ಗೆಳೆಯ/ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.

ಕ್ಷೇಮ ಶ್ರೀ 10 ನೇ ಜನವರಿ 2018

ತೀರ್ಥರೂಪರವರಿಗೆ,
ನಿಮ್ಮ ಮಗಳಾದ ಪ್ರಕೃತಿ ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು.

ನಾನು ಆರೋಗ್ಯದಿಂದ ಇದ್ದೇನೆ. ನೀವೂ ಆರೋಗ್ಯದಿಂದ ಇದ್ದೀರಿ ಎಂದು ಭಾವಿಸುತ್ತೇನೆ. ನಾನು ತಿಳಿಸುವುದೇನೆಂದರೆ ಮಾರ್ಚ್ 2018 ರಲ್ಲಿ ಜರುಗುವ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಾಕಷ್ಟು ಅಭ್ಯಾಸ ಮಾಡಿ ಪರೀಕ್ಷಾ ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಶಾಲೆಯಲ್ಲಿ ಶಿಕ್ಷಕರು ನೂತನ ಪರೀಕ್ಷಾ ಪದ್ಧತಿ ಕುರಿತು ಮಾಹಿತಿಯನ್ನು ಒದಗಿಸುತ್ತಿದ್ದಾರೆ. ಈ ಪರೀಕ್ಷೆಯಲ್ಲಿ ಶೇ.99 ಅಂಕಗಳನ್ನು ಗಳಿಸಲು ಸಾಕಷ್ಟು ಶ್ರಮದ ಜೊತೆಗೆ ನಿಶ್ಚಿತ ಗುರಿಯನ್ನು ಇಟ್ಟುಕೊಂಡಿದ್ದೇನೆ. ಈಗಾಗಲೇ ರೂಪಣಾತ್ಮಕ ಪರೀಕ್ಷೆ ಮುಗಿದಿದ್ದು, ಅದರಲ್ಲಿ ಉತ್ತಮ ಅಂಕಗಳನ್ನು ಗಳಿಸಿದ್ದೇನೆ, ನಿಮ್ಮೆಲ್ಲರ ಆಶೀರ್ವಾದ ಮತ್ತು ಗುರುಗಳ ಆಶೀರ್ವಾದ ನನ್ನ ಮೇಲೆ ಇರಲಿ. ಹಾಗೆಯೇ ಮಾತೃಶ್ರೀಯವರಿಗೆ ಅನಂತ ನಮಸ್ಕಾರಗಳನ್ನು ತಿಳಿಸಿ. ಈ ಪತ್ರ ಮುಟ್ಟಿದ ಕೂಡಲೇ ತಮ್ಮ ಕ್ಷೇಮ ಸಮಾಚಾರ ಕುರಿತು ಪತ್ರವನ್ನು ಬರೆಯಿರಿ.

ನಮಸ್ಕಾರಗಳೊಂದಿಗೆ, ಇತಿ ತಮ್ಮ ಪ್ರೀತಿಯ ಮಗಳು

ಹೊರ ವಿಳಾಸ :

ರವರಿಗೆ,
ಸಿಫಾಯಿ ರಾಮಣ್ಣ
ನಿಸರ್ಗ ನಿಲಯ : ಮನೆ ನಂ : 3530
ಅಲಂಕಾರ ಬೀದಿ, ಕುವೆಂಪು ನಗರ, ಕೋಲಾರ

ಆನಂದ್ ಗುರು ಅಂಗೊಂಡಹಳ್ಳಿ

# ವ್ಯವಹಾರಿಕ ಪತ್ರ ಬರವಣಿಗೆ

**ವರ್ಗಾವಣೆ ಪತ್ರ / ಅಂಕಪಟ್ಟಿ ನೀಡಲು ಕೋರಿ ಶಾಲಾ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರ ಬರೆಯಿರಿ.**

ರವರಿಂದ,
ಸಮೀಕ್ಷಾ ರಾಣಿ. ದಿನಾಂಕ : 10 –01–2018
10 ನೇ ತರಗತಿ
ಸರಕಾರಿ ಪ್ರೌಢಶಾಲೆ ಅಂಗೊಂಡಹಳ್ಳಿ
ತಾ : ಮುಳಬಾಗಿಲು
ಜಿ : ಕೋಲಾರ

ರವರಿಗೆ,
ಮುಖ್ಯೋಪಾಧ್ಯಾಯರು
ಸರಕಾರಿ ಪ್ರೌಢಶಾಲೆ ಅಂಗೊಂಡಹಳ್ಳಿ
ತಾ : ಮುಳಬಾಗಿಲು
ಜಿ : ಕೋಲಾರ

ಮಾನ್ಯರೇ,
ವಿಷಯ : ವರ್ಗಾವಣೆ ಪ್ರಮಾಣ ಪತ್ರ ನೀಡುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ–ನಾನು ತಮ್ಮ ಶಾಲೆಯಲ್ಲಿ 2016–17 ನೇ ಶೈಕ್ಷಣಿಕ ವರ್ಷದಲ್ಲಿ ಅಭ್ಯಾಸ ಮಾಡಿ 10 ನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿದ್ದೇನೆ. ನನ್ನ ಮುಂದಿನ ವ್ಯಾಸಂಗಕ್ಕಾಗಿ ವರ್ಗಾವಣೆ ಪ್ರಮಾಣ ಪತ್ರ ಅವಶ್ಯಕತೆಯಿದ್ದು, ಅದನ್ನು ಪೂರೈಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ, ಇತಿ ತಮ್ಮ ವಿಧೇಯ ವಿದ್ಯಾರ್ಥಿ

ಹೊರ ವಿಳಾಸ :

ರವರಿಗೆ,
ಮುಖ್ಯೋಪಾಧ್ಯಾಯರು
ಸರಕಾರಿ ಪ್ರೌಢಶಾಲೆ ಅಂಗೊಂಡಹಳ್ಳಿ
ತಾ : ಮುಳಬಾಗಿಲು
ಜಿ : ಕೋಲಾರ

ಆನಂದ್ ಗುರು ಅಂಗೊಂಡಹಳ್ಳಿ

**ನಿಮ್ಮ ಊರಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಪಡಿಸುವಂತೆ ಕೋರಿ ಸಂಬಂಧಿಸಿದ ಅಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.**

ರವರಿಂದ : ದಿನಾಂಕ : 10.1.2018
ಸ್ಫೂರ್ತಿ ದೇವಾಡಿಗ
ತಂದೆ : ಹಾಲೇಶ್ ದೇವಾಡಿಗ
ಮನೆ ನಂ : 5643, ನವಮಿ ರಸ್ತೆ
ಗ್ರಾಮ : ದೇವರಹಳ್ಳಿ
ತಾ : ಮುಳಬಾಗಿಲು
ಜಿ : ಕೋಲಾರ

ರವರಿಗೆ :
ಅಧ್ಯಕ್ಷರು/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ಪಿ ಡಿ ಒ)
ಗ್ರಾಮ ಪಂಚಾಯಿತಿ ಕಾರ್ಯಾಲಯ
ಅಗೊಂಡಹಳ್ಳಿ
ತಾ : ಮುಳಬಾಗಿಲು
ಜಿ : ಕೋಲಾರ

ಮಾನ್ಯರೇ,

ವಿಷಯ : ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಪಡಿಸುವಂತೆ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನಾನು ತಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯ ದೇವರಹಳ್ಳಿ ಗ್ರಾಮದ ನಿವಾಸಿಯಾಗಿದ್ದು, ಇಲ್ಲಿ ಬಹುದಿನಗಳಿಂದ ಕುಡಿಯುವ ನೀರಿನ ಪೂರೈಕೆ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಇದರಿಂದ ಇಲ್ಲಿನ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಕಾರಣ ಈ ವ್ಯವಸ್ಥೆಯನ್ನು ಸರಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಬೇಕೆಂದು ತಮ್ಮಲ್ಲಿ ನಮ್ಮ ಊರಿನ ನಾಗರಿಕರ ಪರವಾಗಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ, ಇತಿ ತಮ್ಮ ವಿಶ್ವಾಸಿ

ಹೊರ ವಿಳಾಸ :

ರವರಿಗೆ :
ಅಧ್ಯಕ್ಷರು/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ಪಿ ಡಿ ಒ)
ಗ್ರಾಮ ಪಂಚಾಯಿತಿ ಕಾರ್ಯಾಲಯ
ಅಗೊಂಡಹಳ್ಳಿ
ತಾ : ಮುಳಬಾಗಿಲು
ಜಿ : ಕೋಲಾರ

ಆನಂದ ಗುರು ಅಂಗೊಂಡಹಳ್ಳಿ

ಕೆಳಗಿನ ಪ್ರತಿಯೊಂದು ಹೇಳಿಕೆಗೂ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.

1. ಕನ್ನಡ ವರ್ಣಮಾಲೆಯಲ್ಲಿ ಪ್ರತಿ ವರ್ಗದ ಎರಡು ಮತ್ತು ನಾಲ್ಕನೆಯ ಅಕ್ಷರಗಳನ್ನು ಹೀಗೆಂದು ಕರೆಯುತ್ತೇವೆ.
(ಎ) ಅಲ್ಪಪ್ರಾಣಾಕ್ಷರಗಳು (ಬಿ) ಮಹಾಪ್ರಾಣಾಕ್ಷರಗಳು
(ಸಿ) ಅನುನಾಸಿಕಾಕ್ಷರಗಳು (ಡಿ) ವ್ಯಂಜನಗಳು

2. 'ಪೂಜಾರಿ' ಪದವು ಈ ನಾಮಪದಕ್ಕೆ ಉದಾಹರಣೆ.
(ಎ) ಅಂಕಿತನಾಮ (ಬಿ) ರೂಢನಾಮ
(ಸಿ) ಅನ್ವರ್ಥನಾಮ (ಡಿ) ಭಾವನಾಮ

3. 'ಹೂವಾಡಿಗ' ಈ ಪದದಲ್ಲಿರುವ ತದ್ಧಿತ ಪ್ರತ್ಯಯ.
(ಎ) ಇಗ (ಬಿ) ವಾಡಿಗ
(ಸಿ) ಡಿಗ (ಡಿ) ಆಡಿಗ

4. ಹಳಗನ್ನಡದ ಪಂಚಮೀ ವಿಭಕ್ತಿ ಪ್ರತ್ಯಯ.
(ಎ) ಅತ್ತಣಿಂ (ಬಿ) ಮ್ (ಸಿ) ಅಂ (ಡಿ) ಒಳ್

5. 'ವಾಗ್ದೇವಿ' ಪದವು ಈ ಸಂಧಿಗೆ ಉದಾಹರಣೆ.
(ಎ) ವೃದ್ಧಿ (ಬಿ) ಯಣ್
(ಸಿ) ಲೋಪ (ಡಿ) ಆಗಮ

6. ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ.
(ಎ) ಉದ್ಧರಣ (ಬಿ) ವಿವರಣಾತ್ಮಕ
(ಸಿ) ಆವರಣ (ಡಿ) ಭಾವಸೂಚಕ

7. 'ನಂಬಿದರ್ಗೆ' ಈ ಪದದ ಹೊಸಗನ್ನಡ ರೂಪ.
(ಎ) ನಂಬಿದಾಗ (ಬಿ) ನಂಬಿದವರಿಗೆ
(ಸಿ) ನಂಬದವರಿಗೆ (ಡಿ) ನಂಬುವವರಿಗೆ

8. ಒಂದು ಕ್ರಿಯಾಪದದೊಡನೆ ಸ್ವತಂತ್ರ ಖಚಿತ ಅರ್ಥಕೊಡುವಂತಿದ್ದರೆ, ಆ ವಾಕ್ಯವು
(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ
(ಸಿ) ಅಲಂಕಾರಿಕ ವಾಕ್ಯ (ಡಿ) ಮಿಶ್ರ ವಾಕ್ಯ

9. 'ಬ್ಯಾಸರಾ' ಪದದ ಗ್ರಾಂಥಿಕ ರೂಪ.
(ಎ) ಬೇಸಾರ (ಬಿ) ಬೇಜಾರು
(ಸಿ) ಬೇಸರ (ಡಿ) ಬೇಸ್ಯಾರ

10. ಗುರು – ಲಘು ಕೊನೆಯಲ್ಲಿ ಬರಲು ಅದು
(ಎ) ಸ–ತ ಗಣ (ಬಿ) ಮ–ನ ಗಣ
(ಸಿ) ಜ–ರ ಗಣ (ಡಿ) ಭ–ಯ ಗಣ

11. 'ಹಾಡು' ಪದದ ವಿಧ್ಯರ್ಥಕ ರೂಪ.
(ಎ) ಹಾಡಲಿ (ಬಿ) ಹಾಡಿಯಾನು
(ಸಿ) ಹಾಡನು (ಡಿ) ಹಾಡಿದನು

12. 'ದೃಷ್ಟಿ'ಪದದ ತದ್ಭವ ರೂಪ.
(ಎ) ದಟ್ಟಿ (ಬಿ) ದಿಟ್ಟಿ
(ಸಿ) ದೃಷ್ಟಿ (ಡಿ) ದುರುಪಟಿ

1 13. 'ಪವನನಂದನ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
(ಎ) ಕರ್ಮಧಾರೆಯ (ಬಿ) ದ್ವಂದ್ವ
(ಸಿ) ಬಹುವ್ರೀಹಿ (ಡಿ) ದ್ವಿಗು

14. 'ಸೊಣಗ' ಈ ಪದದ ಅರ್ಥ.
(ಎ) ನಾಯಿ (ಬಿ) ಬೆಕ್ಕು
(ಸಿ) ಹಸು (ಡಿ) ಕೋಣ

15. 'ಹೊಸಗಾಲ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ.
(ಎ) ಲೋಪ ಸಂಧಿ (ಬಿ) ಆದೇಶ ಸಂಧಿ
(ಸಿ) ಆಗಮ ಸಂಧಿ (ಡಿ) ಗುಣ ಸಂಧಿ

16. 'ಬರೆ' ಈ ಪದದ ವಿಧ್ಯರ್ಥಕ ರೂಪ:
(ಎ) ಬರೆದಾನು (ಬಿ) ಬರೆಯನು
(ಸಿ) ಬರೆಯಿರಿ (ಡಿ) ಬರೆಯಲಿ

17. ಹಳಗನ್ನಡ ಪಂಚಮಿ ವಿಭಕ್ತಿ ಪ್ರತ್ಯಯ:
(ಎ) ಅತ್ತಣಿಂ (ಬಿ) ಇಂದಂ
(ಸಿ) ಅಂ (ಡಿ) ಒಳ್

18. ಅನ್ವರ್ಥಕ ನಾಮಪದ ಉದಾಹರಣೆ:
(ಎ) ಪಟ್ಟಣ (ಬಿ) ವಿಜ್ಞಾನಿ
(ಸಿ) ಪರ್ವತ (ಡಿ) ಹುಡುಗ

19. ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆ:
(ಎ) ನೀನು (ಬಿ) ನೀವು
(ಸಿ) ತಾನು (ಡಿ) ನಾವು

20. ಎರಡು ಮಾತ್ರಾಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳಿಗೆ ಹೀಗೆನ್ನುವರು:
(ಎ) ದೀರ್ಘಸ್ವರ (ಬಿ) ಹ್ರಸ್ವಸ್ವರ
(ಸಿ) ಪ್ಲುತಸ್ವರ (ಡಿ) ಸಪ್ತಸ್ವರ

21. ಕ್ರಿಯಾಪದಗಳ ಮೂಲ ರೂಪ:
(ಎ) ಧಾತು (ಬಿ) ಸಾಧಿತ ಧಾತು
(ಸಿ) ವಿಧ್ಯರ್ಥಕ (ಡಿ) ನಿರೇಧ

22. 'ಸಾಕ್ಷಿಮಾಡಿ' ಪದವು ಈ ಸಮಾಸಕ್ಕೆ ಉದಾಹರಣೆ:
(ಎ) ಕರ್ಮಧಾರೆಯ (ಬಿ) ತತ್ಪುರುಷ
(ಸಿ) ದ್ವಿಗು (ಡಿ) ಕ್ರಿಯಾ

23. 'ಇನತನೂಜ' ಪದದ ಅರ್ಥ:
(ಎ) ಕರ್ಣ (ಬಿ) ಕೃಷ್ಣ
ಸಿ) ಅರ್ಜುನ (ಡಿ) ದುರ್ಯೋಧನ

24. 'ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನವಾಗಿದ್ದರೆ,' ಅದು:
(ಎ) ಸಂಯೋಜಿತ ವಾಕ್ಯ (ಬಿ) ಮಿಶ್ರ ವಾಕ್ಯ
(ಸಿ) ಸಾಮಾನ್ಯ ವಾಕ್ಯ (ಡಿ) ವಾಕ್ಯ ಪ್ರಭೇಧ

25.ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ:
(ಎ) ಉದ್ಧರಣ ಚಿಹ್ನೆ (ಬಿ) ಭಾವಸೂಚಕ ಚಿಹ್ನೆ
(ಸಿ) ಪ್ರಶ್ನಾರ್ಥಕ ಚಿಹ್ನೆ (ಡಿ) ಅರ್ಧವಿರಾಮ ಚಿಹ್ನೆ

26. ಈ ಪದವು ಅನುಕರಣಾವ್ಯಯಕ್ಕೆ ಉದಾಹರಣೆ:
(ಎ) ಬೇಗ ಬೇಗ (ಬಿ) ಓಡು ಓಡು
(ಸಿ) ಗಿಡ ಗಂಟೆ (ಡಿ) ಧಗ ಧಗ

ಆನಂದ ಗುರು ಅಂಗೊಂಡಹಳ್ಳಿ

27. 'ಸಕ್ಕಾರಿ' ಪದದ ಗ್ರಾಂಥಿಕ ರೂಪ
(ಎ) ಸಕ್ಕರೆ (ಬಿ) ಶರ್ಕರಾ
(ಸಿ) ಸರ್ಕಾರಿ (ಡಿ) ಸಾಪ್ಕಾರ

28. 'ದೀವಿಗೆ' ಪದದ ತದ್ಭವ ರೂಪ
(ಎ) ದೀವಳಿಗೆ (ಬಿ) ದೀಪಿಕಾ
(ಸಿ) ದೀಪ (ಡಿ) ದೀವಟಿಗೆ

29. 'ಮಹಾತ್ಮ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ:
(ಎ) ಗುಣಸಂಧಿ (ಬಿ) ಲೋಪಸಂಧಿ
(ಸಿ) ಸವರ್ಣದೀರ್ಘಸಂಧಿ (ಡಿ) ಅನುನಾಸಿಕ

30. 'ಧೃತಿಗೆಟ್ಟು' ಇದು ಈ ಸಂಧಿಗೆ ಉದಾಹರಣೆ:
(ಎ) ಜಶ್ತ್ವ (ಬಿ) ಆದೇಶ
(ಸಿ) ಗುಣ (ಡಿ) ಆಗಮ

31. ಕನ್ನಡ ವರ್ಣಮಾಲೆಯಲ್ಲಿರುವ ಯೋಗವಾಹ ಅಕ್ಷರಗಳ ಸಂಖ್ಯೆ:
(ಎ) ಹದಿಮೂರು (ಬಿ) ಆರು
(ಸಿ) ಎರಡು (ಡಿ) ಒಂಬತ್ತು

32. ಹಳಗನ್ನಡದ ದ್ವಿತೀಯ ವಿಭಕ್ತಿ ಪ್ರತ್ಯಯ:
(ಎ) ಮ್ (ಬಿ) ಅ
(ಸಿ) ಇಂದಂ (ಡಿ) ಅಮ್

33. 'ಖ್ಯಾತ ಕರ್ಣಾಟಕಗಳೆಂದು' ಪ್ರಸಿದ್ಧಿ ಹೊಂದಿದ ವೃತ್ತಗಳ ಸಂಖ್ಯೆ:
(ಎ) ನಾಲ್ಕು (ಬಿ) ಆರು
(ಸಿ) ಎಂಟು (ಡಿ) ಮೂರು

34. 'ಅಂಕಿತನಾಮ' ಪದಕ್ಕೆ ಉದಾಹರಣೆ:
(ಎ) ಶಾಲೆ (ಬಿ) ರಾಮನಾಥ
(ಸಿ) ಶಿಕ್ಷಕ ಡಿ) ತಾವು

35. 'ಪಗೆ' ಪದದ ಹೊಸಗನ್ನಡ ರೂಪ:
(ಎ) ಹಾಗೆ (ಬಿ) ಬಗೆ
(ಸಿ) ಹಗೆ (ಡಿ) ಪಾಂಗು

36. 'ಮ್ಯಾಗೆ' ಪದದ ಗ್ರಾಂಥಿಕ ರೂಪ:
(ಎ) ಮಾಯೆಗೆ (ಬಿ) ಮೇಲೆ
(ಸಿ) ಮ್ಯಾಲೆ (ಡಿ) ಮಾಲೆ

37. 'ಜಗಜ್ಯೋತಿ' ಪದದಲ್ಲಿ ಏರ್ಪಟ್ಟಿರುವ ಸಂಧಿ:
(ಎ) ಯಣ್ (ಬಿ) ಅನುನಾಸಿಕ
(ಸಿ) ಶ್ಚುತ್ವ (ಡಿ) ವೃದ್ಧಿ

38. 'ಮೂಗಾವುದ' ಪದವು ಈ ಸಮಾಸಕ್ಕೆ ಉದಾಹರಣೆ:
(ಎ) ಬಹುವ್ರೀಹಿ (ಬಿ) ದ್ವಂದ್ವ
(ಸಿ) ದ್ವಿಗು (ಡಿ) ಅಂಶಿ

39. 'ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತ್ತು.– ಈ ವಾಕ್ಯವು :
(ಎ) ವಿಶೇಷ ವಾಕ್ಯ (ಬಿ) ಸಾಮಾನ್ಯ ವಾಕ್ಯ
(ಸಿ) ಸಂಯೋಜಿತ ವಾಕ್ಯ (ಡಿ) ಮಿಶ್ರ ವಾಕ್ಯ

40. 'ಮೃಡ' ಪದದ ಅರ್ಥ ಇದು :
(ಎ) ಶಿವ (ಬಿ) ವಿಷ್ಣು
(ಸಿ) ಬ್ರಹ್ಮ (ಡಿ) ದೇವೇಂದ್ರ

41. 'ಅವನು ಓದುವುದರಲ್ಲಿ ತುಂಬಾ ಜಾಣ' –ಈ ವಾಕ್ಯದಲ್ಲಿರುವ ಸರ್ವನಾಮ ಪದ:
(ಎ) ಅವನು (ಬಿ) ಓದು
(ಸಿ) ತುಂಬಾ (ಡಿ) ಜಾಣ

42. ತದ್ಧಿತಾಂತ ಭಾವನಾಕ್ಕೆ ಉದಾಹರಣೆ:
(ಎ) ಜಾಣತನ (ಬಿ) ರಾಮನವೊಲ್
(ಸಿ) ಮಾಲೆಗಾರ (ಡಿ) ಗುಣವಂತೆ

43. ಬರವಣಿಗೆಯಲ್ಲಿ ಪಾರಿಭಾಷಿಕ/ ಪ್ರಧಾನ / ವಿಶೇರ ಪದಗಳನ್ನು ಬಳಸಿದಾಗ ಉಪಯೋಗಿಸುವ ಲೇಖನಚಿಹ್ನೆ:
(ಎ) ಉದ್ಧರಣ (ಬಿ) ವಾಕ್ಯವೇಷ್ಟನ
(ಸಿ) ಆವರಣ (ಡಿ) ವಿವರಣ

44. ಆದೇಶ ಸಂಧಿಗೆ ಉದಾಹರಣೆ:
(ಎ) ಕೈವಿಡಿದು (ಬಿ) ಕೈಯನ್ನು
(ಸಿ) ಕಾದಾಟದಾಟ (ಡಿ) ವಾಗ್ದೇವಿ

45. 'ನೋಡು' ಧಾತುವಿನ ಸಂಭಾವನಾರ್ಥಕ ರೂಪವಿದು:
(ಎ) ನೋಡಲಿ (ಬಿ) ನೋಡಿಯಾನು
(ಸಿ) ನೋಡನು (ಡಿ) ನೋಡುವನು

46 'ತಾವು' ಎಂಬುದು ಸರ್ವನಾಮದ ಈ ವಿಭಾಗಕ್ಕೆ ಸೇರಿದೆ;
(ಎ) ಪ್ರಶ್ನಾರ್ಥಕ (ಬಿ) ನಿರ್ದೇಶನಾತ್ಮಕ
(ಸಿ) ಪುರುರಾರ್ಥಕ (ಡಿ) ಆತ್ಮಾರ್ಥಕ

47. ' ಇವುಗಸಲ್ಲಿ ಸಂಭಾವನಾರ್ಥಕ ರೂಪಕ್ಕೆ ಉದಾಹರಣೆಯಾದ ಪದವಿದು;
(ಎ) ಮಾಡಲಿ (ಬಿ) ಮಾಡನು
(ಸಿ) ಮಾಡಿಯಾನು (ಡಿ) ಮಾಡಿದನು

48. ಫ, ಝ, ಢ, ಧ, ಭ ಅಕ್ಷರಗಳನ್ನು ಹೀಗೆಂದು ಕರೆಯುತ್ತೇವೆ;
(ಎ) ದೀರ್ಘಸ್ವರಾಕ್ಷರಗಳು (ಬಿ) ಅಲ್ಪಪ್ರಾಣಾಕ್ಷರಗಳು
(ಸಿ) ಮಹಾಪ್ರಾಣಾಕ್ಷರಗಳು (ಡಿ) ಅನುನಾಸಿಕಾಕ್ಷರಗಳು

49. 'ವಿದ್ವಾಂಸ' ಪದವು ಈ ನಾಮಪದಕ್ಕೆ ಸೇರಿದೆ;
(ಎ) ರೂಢನಾಮ (ಬಿ) ಅನ್ವರ್ಥಕನಾಮ
(ಸಿ) ಅಂಕಿತನಾಮ (ಡಿ) ಭಾವನಾಮ

50. 'ಕಟ್ಟಲ್ಕೆ' ಪದದ ಹೊಸಗನ್ನಡ ರೂಪ;
(ಎ) ಕಟ್ಟಲು (ಬಿ) ಕಟ್ಟಿದಾಗ
(ಸಿ) ಕಟ್ಟಿದನು (ಡಿ) ಕಟ್ಟುವುದಕ್ಕೆ

51. 'ಕೃದಂತ ಭಾವನಾಮ'ಕ್ಕೆ ಉದಾಹರಣೆ ಇದು;
(ಎ) ಮಾಡಲಿಕ್ಕೆ (ಬಿ) ಮಾಟ
(ಸಿ) ಮಾಡಲು (ಡಿ) ಮಾಡಿದ

52. 'ವಾಜಿ' ಈ ಪದದ ಅರ್ಥ;
(ಎ) ಕುದುರೆ (ಬಿ) ಆನೆ
(ಸಿ) ಸಿಂಹ (ಡಿ) ಚಿಂಪಾಂಜಿ

53 ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು; ಆದ್ದರಿಂದ ವೀರೇಶ್ವರ ಪಾಠಕ್ ಅವರು ಮಲೇರಿಯಾದಿಂದ ಬಳಲಬೇಕಾಯಿತು.– ವಾಕ್ಯವು.
(ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರವಾಕ್ಯ
(ಸಿ) ಸಂಯೋಜಿತ ವಾಕ್ಯ (ಡಿ) ವಿಶೇಷ ವಾಕ್ಯ

54. ಹೆಚ್ಚಿನ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ;
(ಎ) ಆವರಣ (ಬಿ) ಉದ್ಧರಣ
(ಸಿ) ವಾಕ್ಯವೇಷ್ಟನ (ಡಿ) ವಿವರಣಾತ್ಮಕ

55. 'ತಲೆನೋವು' ಪದವು ಈ ಸಮಾಸಕ್ಕೆ ಉದಾಹರಣೆ;
(ಎ) ಕ್ರಿಯಾಸಮಾಸ (ಬಿ) ಅಂಶಿಸಮಾಸ
(ಸಿ) ಕರ್ಮಧಾರೆಯ (ಡಿ) ತತ್ಪುರುಷ

56. 'ತಟ್ಟನೆ' ಪದವು ಈ ಅವ್ಯಯಕ್ಕೆ ಉದಾಹರಣೆ;
(ಎ) ಭಾವಸೂಚಕಾವ್ಯಯ (ಬಿ)ಸಂಬಂಧಾರ್ಥಕಾವ್ಯಯ
(ಸಿ) ಸಾಮಾನ್ಯಾವ್ಯಯ (ಡಿ) ಅನುಕರಣಾವ್ಯಯ

57. 'ಮುಖಶಾಲೆ' ಪದದ ತದ್ಭವ ರೂಪ;
(ಎ) ಮೊಗಸಾಲೆ (ಬಿ) ಮಕಸಾಲೆ
(ಸಿ) ಮೊಕಸಾಲೆ (ಡಿ) ಮಗಸಾಲೆ

58. 'ಶವವಾದವು' ಪದವು ಈ ಸಂಧಿಗೆ ಉದಾಹರಣೆ;
(ಎ) ಲೋಪ (ಬಿ) ಆದೇಶ
(ಸಿ) ಆಗಮ (ಡಿ) ಪ್ರಕೃತಿಭಾವ

59. ಹಳಗನ್ನಡದ ಪಂಚಮಿ ವಿಭಕ್ತಿ ಪ್ರತ್ಯಯ;
(ಎ) ಒಳ್ (ಬಿ) ಅತ್ತಣಿಂ
(ಸಿ) ಇಂದಂ (ಡಿ) ಅ

60. ಜಶ್ತ್ವಸಂಧಿಗೆ ಉದಾಹರಣೆಯಿದು;
(ಎ) ಪಯಶ್ಶಯನ (ಬಿ) ಷಡಾನನ
(ಸಿ) ಸನ್ಮಾನ (ಡಿ) ವನೌಷಧ

61. ಕನ್ನಡ ವರ್ಣಮಾಲೆಯ ಪ್ರತಿ ವರ್ಗದ ಪಂಚಮಾಕ್ಷರಗಳನ್ನು ಹೀಗೆಂದು ಕರೆಯುತ್ತಾರೆ :
(ಎ) ಸ್ವರ (ಬಿ) ಅಲ್ಪಪ್ರಾಣ
(ಸಿ) ಮಹಾಪ್ರಾಣ (ಡಿ) ಅನುನಾಸಿಕ

62. 'ವ್ಯಾಪಾರಿ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ.
(ಎ) ಅನ್ವರ್ಥನಾಮ (ಬಿ) ರೂಢನಾಮ
(ಸಿ) ಅಂಕಿತನಾಮ (ಡಿ) ಸರ್ವನಾಮ

63. ಕೆಳಗಿನ ಪದಗಳಲ್ಲಿ ಈ ಪದವು ಆದೇಶ ಸಂಧಿಗೆ ಉದಾಹರಣೆ.
(ಎ) ಮಳೆಯಿಂದ (ಬಿ) ಬಂದಲ್ಲದೆ
(ಸಿ) ಬೆಂಬತ್ತು (ಡಿ) ಮರವನ್ನು

64. 'ಶಾಲೆಯಲ್ಲಿ' ಈ ಪದದಲ್ಲಿರುವ ವಿಭಕ್ತಿ.
(ಎ) ಪ್ರಥಮ (ಬಿ) ದ್ವಿತೀಯ
(ಸಿ) ಸಪ್ತಮೀ (ಡಿ) ಪಂಚಮೀ

65. 'ಕನ್ನಡಿಗ' ಪದದಲ್ಲಿರುವ ತದ್ಧಿತ ಪ್ರತ್ಯಯ:
(ಎ) ಇಗ (ಬಿ) ಅಡಿಗ
(ಸಿ) ನಡಿಗ (ಡಿ) ಡಿಗ

66. 'ಅಯ್ಯೋ ಹೀಗಾಗಬಾರದಿತ್ತು – ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆ.
(ಎ) ಅರ್ಧವಿರಾಮ (ಬಿ) ಪೂರ್ಣವಿರಾಮ
(ಸಿ) ಭಾವಸೂಚಕ (ಡಿ) ಪ್ರಶ್ನಾರ್ಥಕ

67. 'ಕೌರವರೊಳ್' ಪದದ ಹೊಸಗನ್ನಡ ರೂಪ.
(ಎ) ಕೌರವರು (ಬಿ) ಕೌರವರಲ್ಲಿ
(ಸಿ) ಕೌರವರನ್ನು (ಡಿ) ಕೌರವನಿಗೆ

68. ಎರಡು ಅಥವಾ ಅನೇಕ ಸ್ವತಂತ್ರ ವಾಕ್ಯಗಳು ಒಟ್ಟಾಗಿ ಸೇರಿ ಪೂರ್ಣ ಅರ್ಥ ನೀಡಿದರೆ, ಆ ವಾಕ್ಯವು
(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ
(ಸಿ) ಅಲಂಕಾರಿಕ ವಾಕ್ಯ (ಡಿ) ಮಿಶ್ರ ವಾಕ್ಯ

69. 'ಬಿರುಗಾಳಿಗೆ' ಪದದಲ್ಲಿರುವ ವಿಭಕ್ತಿಯ ಹೆಸರು;
(ಎ) ಚತುರ್ಥಿ (ಬಿ) ಪಂಚಮಿ
(ಸಿ) ತೃತೀಯ (ಡಿ) ದ್ವಿತೀಯ

70. 'ಮೈದುನ' ಪದವು ಈ ಗಣಕ್ಕೆ ಉದಾಹರಣೆ.
(ಎ) ಸ ಗಣ (ಬಿ) ಭ ಗಣ
(ಸಿ) ನ ಗಣ (ಡಿ) ಯ ಗಣ

71. 'ಓದಿಯಾರು' ಪದವು ಕ್ರಿಯಾಪದದ ಈ ರೂಪವಲ್ಲದೆ.
(ಎ) ವಿಧ್ಯರ್ಥ (ಬಿ) ಸಂಭಾವನಾರ್ಥಕ
(ಸಿ) ನಿಶೇಧಾರ್ಥಕ (ಡಿ) ಧಾತು

72. 'ಮುಖಕಮ' ಪದವು ಈ ಅಂಕಾರಕ್ಕೆ ಉದಾಹರಣೆ.
(ಎ) ಅರ್ಥಾಂತರನ್ಯಾಸ (ಬಿ) ಉಪಮಾ
(ಸಿ) ಶ್ಲೇಷಾ (ಡಿ) ರೂಪಕ

73. 'ಇಮ್ಮಾವು' ಪದವು ಈ ಸಮಾಸಕ್ಕೆ ಉದಾಹರಣೆ.
(ಎ) ಕರ್ಮಧಾರಯ (ಬಿ) ತತ್ಪುರುಷ
ಸಿ) ಅಂಶಿ (ಡಿ) ದ್ವಿಗು

74. 'ಮೇಜು' ಈ ಭಾಷಾಇಯಿಂದ ಬಂದಿದೆ.
(ಎ) ಪೋರ್ಚುಗೀಸ್ (ಬಿ) ಪರ್ಷಿಯನ್
(ಸಿ) ಇಂಗ್ಲೀಷ್ (ಡಿ) ಉರ್ದು

75.ಭರವಸೆಗೆ – ಈ ಪದದಲ್ಲಿರುವ ವಿಭಕ್ತಿಯ ಹೆಸರು:
(ಎ) ಪ್ರಥಮ (ಬಿ) ಚತುರ್ಥಿ
(ಸಿ) ಷಷ್ಠಿ (ಡಿ) ತೃತೀಯ

76. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ಅಕ್ಷರಗಳ ಸಂಖ್ಯೆ:
(ಎ) ಒಂಬತ್ತು (ಬಿ) ಹತ್ತು
(ಸಿ) ಇಪ್ಪತ್ತೈದು (ಡಿ) ಏಳು

77. 'ಓಹೋ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.
(ಎ) ಸಾಮಾನ್ಯಾವ್ಯಯ (ಬಿ) ಭಾವಸೂಚಕಾವ್ಯಯ
(ಸಿ) ಸಂಬಂಧಾರ್ಥಕಾವ್ಯಯ (ಡಿ) ಅನುಕರಣಾವ್ಯಯ

78. ಪಗೆಗೆ –ಈ ಪದದ ಗಣ:
(ಎ) ತ–ಗಣ (ಬಿ) ನ–ಗಣ
(ಸಿ) ಭ–ಗಣ (ಡಿ) ಯ–ಗಣ

79. ಅವನು – ಎಂಬುದು ಈ ನಾಮಪದಕ್ಕೆ ಉದಾಹರಣೆ:
(ಎ) ಸರ್ವನಾಮ (ಬಿ) ಅಂಕಿತನಾಮ
(ಸಿ) ರೂಢನಾಮ (ಡಿ) ಅನ್ವರ್ಥಕ ನಾಮ

80. 'ಪಲವು' ಪದದ ಹೊಸಗನ್ನಡ ರೂಪ:
(ಎ) ಪಲಾವು (ಬಿ) ಹಲವು
(ಸಿ) ಹಲವಾರು (ಡಿ) ಪಲಬು

81. 'ಕಳುವ್ಯಾರೆ' – ಈ ಪದದ ಗ್ರಾಂಥಿಕ ರೂಪ:
(ಎ) ಕಳಿಸಿದ್ದಾರೆ (ಬಿ) ಕಳುಹಿಸಿದ್ದಾರೆ
(ಸಿ) ಕಳುವಿದ್ದಾರೆ (ಡಿ) ಕಳುಹಿಸುತ್ತಾರೆ

ಆನಂದ ಗುರು ಅಂಗೊಂಡಹಳ್ಳಿ

82. ಉಪಮೇಯ ಉಪಮಾನಗಳು ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ, ಅದು:
(ಎ) ದೃಷ್ಟಾಂತಾಲಂಕಾರ (ಬಿ) ಉಪಮಾಲಂಕಾರ
(ಸಿ) ಶಬ್ದಾಲಂಕಾರ (ಡಿ) ಶ್ಲೇಷಾಲಂಕಾರ

83. ಕಂದಪದ್ಯದಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ:
(ಎ) 32 (ಬಿ) 102
(ಸಿ) 64 (ಡಿ) 144

84. ಎಣ್ದೆಸೆ – ಈ ಪದದಲ್ಲಿರುವ ವ್ಯಾಕಾರಣಾಂಶ:
(ಎ) ಪಡೆನುಡಿ (ಬಿ) ಸಂಧಿವಿಗ್ರಹಿ
(ಸಿ) ಸಮಾಸ (ಡಿ) ಜೋಡುನುಡಿ

85. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ. – ಇಲ್ಲಿರುವ ಅಲಂಕಾರ:
(ಎ) ಉತ್ಪ್ರೇಕ್ಷೆ (ಬಿ) ರೂಪಕ
(ಸಿ) ದೃಷ್ಟಾಂತ (ಡಿ) ಉಪಮಾ

86. 'ಕರುತ್ತು' – ಈ ಪದದ ಅರ್ಥ:
(ಎ) ಕೋಪಗೊಂಡು (ಬಿ) ನಾಚಿಕೊಂಡು
(ಸಿ) ಸಂತೋಷಗೊಂಡು (ಡಿ) ದುಃಖಗೊಂಡು

87. 'ಯಜ್ಞ'– ಈ ಪದದ ತದ್ಭವ ರೂಪ:
(ಎ) ಜನ್ನ (ಬಿ) ಯಜನ
(ಸಿ) ಜನನ (ಡಿ) ಯಾಜನ

88. ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬಳಸುವ ಲೇಖನಚಿಹ್ನೆ:
(ಎ) ಆವರಣ (ಬಿ) ಉದ್ಧರಣ
(ಸಿ) ಭಾವಸೂಚಕ (ಡಿ) ಅರ್ಧವಿರಾಮ

89. 'ಊರೂರು' – ಪದವು ಈ ಸಂಧಿಗೆ ಉದಾಹರಣೆಯಾಗಿದೆ:
(ಎ) ಲೋಪ (ಬಿ) ಆಗಮ
(ಸಿ) ಆದೇಶ (ಡಿ) ಗುಣ

90. ನೋಡನು – ಈ ಕ್ರಿಯಾಪದ ಈ ರೂಪದಲ್ಲಿದೆ:
(ಎ) ನಿಶೇಧಾರ್ಥಕ (ಬಿ) ಸಂಭಾವನಾರ್ಥಕ
(ಸಿ) ವಿಧ್ಯರ್ಥಕ (ಡಿ) ಆತ್ಮಾರ್ಥಕ

91. ಕನ್ನಡ ವರ್ಣಮಾಲೆಯಲ್ಲಿರುವ ಅಲ್ಪಪ್ರಾಣಗಳ ಸಂಖ್ಯೆ :
(ಎ) ಹದಿಮೂರು (ಬಿ) ಐದು
(ಸಿ) ಇಪ್ಪತ್ತೈದು (ಡಿ) ಹತ್ತು

92. 'ಶಿಕ್ಷಕ' ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ
(ಎ) ಸರ್ವನಾಮ (ಬಿ) ಭಾವನಾಮ
(ಸಿ) ಅನ್ವರ್ಥಕನಾಮ (ಡಿ) ಅಂಕಿತನಾಮ

93. ಪ್ರೀತಿಯ ಹಣತೆಯ ಹಚ್ಚೋಣ; ಈ ವಾಕ್ಯದಲ್ಲಿಯ ಕ್ರಿಯಾಪದವು ಈ ರೂಪದಲ್ಲಿದೆ:
(ಎ) ಸಂಭಾವನಾರ್ಥಕ (ಬಿ) ವಿಧ್ಯರ್ಥಕ
(ಸಿ) ನಿಷೇಧಾರ್ಥಕ (ಡಿ) ಆತ್ಮಾರ್ಥಕ

94. 'ಉರ್ವಿಯೊಳ್' – ಈ ಪದಲ್ಲಿರುವ ವಿಭಕ್ತಿ :
(ಎ) ಸಪ್ತಮೀ (ಬಿ) ಷಷ್ಠೀ
(ಸಿ) ದ್ವಿತೀಯಾ (ಡಿ) ಪ್ರಥಮಾ

95. 'ಮೈದೋರು' ಈ ಪದವು ಈ ಸಂಧಿಗೆ ಉದಾಹರಣೆಯಾಗಿದೆ:
(ಎ) ಲೋಪ ಸಂಧಿ (ಬಿ) ಆಗಮ ಸಂಧಿ
(ಸಿ) ಜಶ್ತ್ವ ಸಂಧಿ (ಡಿ) ಆದೇಶ ಸಂಧಿ

96. 'ಜಾತ್ಯತೀತ' ಪದವು ಈ ವ್ಯಾಕರಣಾಶಕ್ಕೆ ಉದಾಹರಣೆ :
(ಎ) ಗುಣಸಂಧಿ (ಬಿ) ಅನುನಾಸಿಕ ಸಂಧಿ
(ಸಿ) ಯಣ್‌ಸಂಧಿ (ಡಿ) ವೃದ್ಧಿ ಸಂಧಿ

97. 'ಇರ್ವರ್' ಈ ಪದದ ಹೊಸಗನ್ನಡ ರೂಪವಿದು
(ಎ) ಇಬ್ಬರು (ಬಿ) ಇರುವರು
(ಸಿ) ಇರುವವ (ಡಿ) ಇವರು

98. 'ಹೀಂಗ' ಪದದ ಗ್ರಾಂಥಿಕ ರೂಪ
(ಎ) ಹೀಗೆ (ಬಿ) ಹಾಗೆ
(ಸಿ) ಇಂಗೆ (ಡಿ) ಹಂಗೆ

99. 'ಹಿಂದಲೆ' ಪದವು ಈ ಸಮಾಸಕ್ಕೆ ಉದಾಹರಣೆ :
(ಎ) ತತ್ಪುರುಷ (ಬಿ) ದ್ವಿಗು
(ಸಿ) ದ್ವಂದ್ವ (ಡಿ) ಅಂಶಿ

100. ಹಳಗನ್ನಡದ ಸಪ್ತಮಿ ವಿಭಕ್ತಿ ಪ್ರತ್ಯಯ;
(ಎ) ಮ್ (ಬಿ) ಒಳ್
(ಸಿ) ಅತ್ತಣಿಂ (ಡಿ) ಇಂದಂ

101. ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯ ಅವರು ನಿರ್ಧರಿಸಿದರಾದರೂ ಅವರ ನಿರ್ಧಾರಕ್ಕೆ ಬ್ರಿಟಿಷ್ ಸರಕಾರ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಅವರುಬಹುವಾಗಿ ಮರುಗಿದರು. – ಈ ವಾಕ್ಯವು:
(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ
(ಸಿ) ಮಿಶ್ರ ವಾಕ್ಯ (ಡಿ) ವಿಧ್ಯರ್ಥಕ ವಾಕ್ಯ

102. 'ಪೊಳಲ್' ಈ ಪದದ ಅರ್ಥ :
(ಎ) ಹೊಳೆ (ಬಿ) ಹೊನಲು
(ಸಿ) ನಗರ (ಡಿ) ಹಳ್ಳಿ

103. ಮಗುವನ್ನು ಶಾಲೆಯತನಕ ಬಿಟ್ಟು ಬಂದೆನು. ಈ ವಾಕ್ಯದಲ್ಲಿರುವ ತದ್ದಿತಾಂತ ಅವ್ಯಯ :
(ಎ) ಮಗು (ಬಿ) ಶಾಲೆ
(ಸಿ) ಬಂದೆ (ಡಿ) ಶಾಲೆಯತನಕ

104. 'ವಿದ್ಯಾರ್ಥಿ' ಈ ಪದದಲ್ಲಿರುವ ಗಣ :
(ಎ) ಮ–ಗಣ (ಬಿ) ನ–ಗಣ
(ಸಿ) ತ–ಗಣ (ಡಿ) ಸ–ಗಣ

105. 'ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ? – ಇಲ್ಲಿರುವ ಅಲಂಕಾರ :
(ಎ) ಉಪಮಾ (ಬಿ) ರೂಪಕ
(ಸಿ) ಉತ್ಪ್ರೇಕ್ಷ (ಡಿ) ದೃಷ್ಟಾಂತ

106. ಮೈಸೂರಿನಲ್ಲಿ ಜಗತ್ಪ್ರಸಿದ್ಧ ಅರಮನೆ ಇದೆ ಈ ವಾಕ್ಯವು;
(ಎ) ಸಂಯೋಜಿತ ವಾಕ್ಯ (ಬಿ) ಸಾಮಾನ್ಯ ವಾಕ್ಯ
(ಸಿ) ಮಿಶ್ರವಾಕ್ಯ (ಡಿ) ವಿಶೇಷ ವಾಕ್ಯ

107. 'ನುಡಿದರೆ ಮುತ್ತಿನಹಾರದಂತಿರಬೇಕು.' ಈ ವಾಕ್ಯದಲ್ಲಿರುವ ಅಲಂಕಾರ
(ಎ) ಉಪಮಾ (ಬಿ) ರೂಪಕ
(ಸಿ) ಉತ್ಪ್ರೇಕ್ಷ (ಡಿ) ದೃಷ್ಟಾಂತ

108. 'ಕಡೆಗಣ್ಣು' ಪದವು ಈ ಸಮಾಸಕ್ಕೆ ಉದಾಹರಣೆ;
(ಎ) ದ್ವಿಗು (ಬಿ) ಅಂಶಿ
(ಸಿ) ಕರ್ಮಧಾರೆಯ (ಡಿ) ತತ್ಪುರುಶ

109. ಜಶ್ತ್ವಸಂಧಿಗೆ ಉದಾಹರಣೆ ಇದು;
(ಎ) ಅಜಂತ (ಬಿ) ಶರಶ್ಚಂದ್ರ
(ಸಿ) ತನ್ಮಯ (ಡಿ) ಅಷ್ಟೈಶ್ವರ್ಯ

110. 'ಮಾತಂತು' ಪದವು ಈ ಸಂಧಿಗೆ ಉದಾಹರಣೆ;
(ಎ) ಆಗಮಸಂಧಿ (ಬಿ) ಆದೇಶಸಂಧಿ
(ಸಿ) ಲೋಪಸಂಧಿ (ಡಿ) ಗುಣಸಂಧಿ

111. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ;
(ಎ) 9 (ಬಿ) 13 (ಸಿ) 25 (ಡಿ) 49

112. ಹರ್ಷ, ಅಚ್ಚರಿ, ಸಂತಸ, ದುಃಖ, ಕೋಪ, ತಿರಸ್ಕಾರ ಇತ್ಯಾದಿ ಭಾವನೆಗಳನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಬಳಸುವ ಲೇಖನಚಿಹ್ನೆ;
(ಎ) ವಿವರಣಾತ್ಮಕ ಚಿಹ್ನೆ (ಬಿ) ಪ್ರಶ್ನಾರ್ಥಕ ಚಿಹ್ನೆ
(ಸಿ) ಉದ್ಧರಣ ಚಿಹ್ನೆ (ಡಿ) ಭಾವಸೂಚಕ ಚಿಹ್ನೆ

113. 'ತುತ್ತತುದಿ' ಈ ವ್ಯಾಕರಣಾಂಶಕ್ಕೆ ಸೇರಿದೆ ;
(ಎ) ಜೋಡಿನುಡಿ (ಬಿ) ದ್ವಿರುಕ್ತಿ
(ಸಿ) ಅನುಕರಣಾವ್ಯಯ (ಡಿ) ಪಡೆನುಡಿ

114. ಹೆಚ್ಚಿನ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭಗಳಲ್ಲಿ ಬಳಸುವ ಲೇಖನ ಚಿಹ್ನೆ:
(ಎ) ಉದ್ಧರಣ ಚಿಹ್ನೆ (ಬಿ) ವಾಕ್ಯವೇಷ್ಟನ ಚಿಹ್ನೆ
(ಸಿ) ಆವರಣ ಚಿಹ್ನೆ (ಡಿ) ವಿವರಣಾತ್ಮಕ ಚಿಹ್ನೆ

115. 'ಉಭಯ' ಪದದ ಅರ್ಥ;
(ಎ) ಅಭಯ (ಬಿ) ಭಯ
(ಸಿ) ನಾಲ್ಕು (ಡಿ) ದ್ವಂದ್ವ

116. 'ಪಂಪ ಕನ್ನಡದ ಆದಿ ಕವಿ. ನಮಗೆ ಎಂದಿಗೂ ಮಹಾಕವಿ'. ಇಲ್ಲಿರುವ ಸರ್ವನಾಮ ಪದ.
(ಎ) ನಮಗೆ (ಬಿ)ಆದಿ
(ಸಿ) ಪಂಪ (ಡಿ) ಕನ್ನಡ

117. ಕಂದ ಪದ್ಯದಲ್ಲಿರುವ ಮಾತ್ರೆಗಳ ಸಂಖ್ಯೆ;
(ಎ) ನೂರಾ ಎರಡು (ಬಿ) ಅರವತ್ನಾಲ್ಕು
(ಸಿ) ನೂರಾ ನಲವತ್ನಾಲ್ಕು (ಡಿ) ಹನ್ನೆರಡು

118. 'ಅವರ ಜ್ಞಾನಸಂಗ್ರಹ ನಿಜವಾದ ಶಕ್ತಿಯಾಗಿ ಪರಿಣಮಿಸಿದೆ'ಈ ವಾಕ್ಯದಲ್ಲಿಯ ಕ್ರಿಯಾಪದ ಪದ;
(ಎ) ಅವರ (ಬಿ) ಶಕ್ತಿ
(ಸಿ) ಪರಿಣಮಿಸಿದೆ (ಡಿ) ಜ್ಞಾನಸಂಗ್ರಹ

119. 'ಅದರಿಂ' ಈ ಪದದ ಹೊಸಗನ್ನಡ ರೂಪ;
(ಎ) ಅದರಿಂದ (ಬಿ) ಅವರಿಂದ
(ಸಿ) ಅವನಿಂದ (ಡಿ) ಅವುಗಳಿಂದ

120. ತದ್ಧಿತಾಂತ ಭಾವನಾಮಕ್ಕೆ ಉದಾಹರಣೆ ಇದು;
(ಎ) ಬಳೆಗಾರ (ಬಿ) ಅಲ್ಲಿಯತನಕ
(ಸಿ) ಚೆಲುವಿಕೆ (ಡಿ) ಜಾಣರು

121. 'ಯಣ್ ಸಂಧಿಗೆ' ಉದಾಹರಣೆಯಾದ ಪದ :
(ಎ) ಅಷ್ಟೈಶ್ವರ್ಯ (ಬಿ) ಬೃಹಚ್ಛತ್ರ
(ಸಿ) ಜ್ಞಾನೇಶ್ವರ (ಡಿ) ಕೋಟ್ಯಧೀಶ್ವರ

122. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸುವ ಚಿಹ್ನೆ ಇದು;
(ಎ) ವಿವರಣ (ಬಿ) ಆವರಣ
(ಸಿ) ಅರ್ಧವಿರಾಮ (ಡಿ) ಪ್ರಶ್ನಾರ್ಥಕ

123. 'ನೋಡು' ಧಾತುವಿನ ನಿಶೇಧಾರ್ಥಕ ರೂಪವಿದು;
(ಎ) ನೋಡಿದ (ಬಿ) ನೋಡಲಿ
(ಸಿ) ನೋಡನು (ಡಿ) ನೋಡಿಯಾನು

124. 'ನೆಯ್ದುವಸ್ತ್ರ' ಈ ಪದವು ಈ ಸಮಾಸಕ್ಕೆ ಉದಾಹರಣೆ;
(ಎ) ದ್ವಂದ್ವ (ಬಿ) ಕ್ರಿಯಾ
(ಸಿ) ತತ್ಪುರುಷ (ಡಿ) ಗಮಕ

125. 'ಪಾಂಡುರಾಜಂಗೆ' ಪದವು ಈ ವಿಭಕ್ತಿಯಲ್ಲಿದೆ.
(ಎ) ಪ್ರಥಮಾ (ಬಿ) ದ್ವಿತೀಯಾ
(ಸಿ) ತೃತೀಯಾ (ಡಿ) ಚತುರ್ಥೀ

126. 'ಅನ್ವರ್ಥನಾಮ' ಪದಕ್ಕೆ ಉದಾಹರಣೆಯಿದು :
(ಎ) ವಿಜ್ಞಾನಿ (ಬಿ) ಸಹದೇವ
(ಸಿ) ಪರ್ವತ (ಡಿ) ಊರು

127. 'ಬಂದೂಕು' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ
(ಎ) ಪೋರ್ಚುಗೀಸ್ (ಬಿ) ಉರ್ದು
(ಸಿ) ಫಾರ್ಸಿ (ಡಿ) ರೋಮನ್

128. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪ ವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅಂತಹ ವಾಕ್ಯವು :
(ಎ) ನಿಷೇಧಾರ್ಥಕ ವಾಕ್ಯ (ಬಿ) ಮಿಶ್ರ ವಾಕ್ಯ
(ಸಿ) ಸಂಯೋಜಿತ ವಾಕ್ಯ (ಡಿ) ಸಾಮಾನ್ಯ ವಾಕ್ಯ

129. ತದ್ಧಿತಾಂತ ನಾಮಕ್ಕೆ ಉದಾಹರಣೆಯಾದ ಪದ ಇದು :
(ಎ) ಜಾಣತನ (ಬಿ) ಕನ್ನಡತಿ
(ಸಿ) ಚಂದ್ರನಂತೆ (ಡಿ) ಉಡುಗೆ

130. ಕೃದಂತ ಭಾವನಾಮ ಪದಕ್ಕೆ ಉದಾಹರಣೆ ಪದವಿದು ;
(ಎ) ಮಾಡುತ (ಬಿ) ಅಂಜಿಕೆ
(ಸಿ) ಬಾಳಿದ (ಡಿ) ಮಾಡದ

131) 'ವಾಗ್ದೇವಿ' ಪದವು ಈ ಸಂಧಿಗೆ ಉದಾಹರಣೆ
ಅ) ಗುಣಸಂಧಿ ಆ) ವೃದ್ಧಿಸಂಧಿ
ಇ) ಜಶ್ತ್ವಸಂಧಿ ಈ) ಆದೇಶಸಂಧಿ

132) ಒಂದು ಪೂಣಕ್ರಿಯೆಯ ಕೊನೆಯಲ್ಲಿರಬೇಕಾದ ಲೇಖನ ಚಿಹ್ನೆ.
ಅ) ಅಲ್ಪವಿರಾಮ ಆ) ಪೂರ್ಣವಿರಾಮ
ಇ) ಅರ್ಧವಿರಾಮ ಈ) ಪ್ರಶ್ನಾರ್ಥಕ


ಆನಂದ್ ಗುರು ಅಂಗೊಂಡಹಳ್ಳಿ

133) 'ಬಿನ್ನಹ' ಪದದ ತತ್ಸಮ ರೂಪ.
ಅ) ಆಲಾಪನೆ ಆ) ಆಜ್ಞಾಪನೆ
ಇ) ಪ್ರಲಾಪನೆ ಈ) ವಿಜ್ಞಾಪನೆ

134) 'ತಂದೆಯಪ್ಪುದಂ' ಪದವು ಈ ವಿಭಕ್ತಿಯಲ್ಲಿದೆ.
ಅ) ಪ್ರಥಮಾ ಆ) ದ್ವಿತೀಯ
ಇ) ತೃತೀಯ ಈ) ಚತುರ್ಥ

135) ಪೋರ್ಚುಗೀಸ್ ಪದಕ್ಕೆ ಉದಾಹರಣೆ.
ಅ) ತಾಲ್ಲೂಕು ಆ) ಕಾಗದ
ಇ) ಮೇಜು ಈ) ಗಲೀಜು

136) ಹೊಸಗನ್ನಡ : ಕರ್ಮಧಾರಯ : : ಅಂಗೈ :
ಅ) ಕ್ರಿಯಾ ಆ) ಅಂಶಿ
ಇ) ಗಮಕ ಈ) ದ್ವಂದ್ವ

137) ಕಂದಪದ್ಯ : ಮಾತ್ರಾಗಣ : : ಚಂಪಕಮಾಲಾವೃತ್ತ
ಅ) ಲಘುಗಣ ಆ) ಗುರುಗಣ
ಇ) ಅಕ್ಷರಗಣ ಈ) ವೃತ್ತಗಣ

138) ಮಾಡಿದ : ಕೃದಂತ : : ಮಾಟ :
ಅ) ಕೃದಂತ ಅವ್ಯಯ ಆ) ಕೃದಂತ ಭಾವನಾಮ
ಇ) ಸಮಾನ್ಯವ್ಯಯ ಈ) ಸಂಬಂಧಾರ್ಥಕವ್ಯಯ

139) 'ಊರೂರು' ಈ ಪದದ ಸಂಧಿ.
ಅ) ಆಗಮ ಆ) ಲೋಪ
ಇ) ಆದೇಶ ಈ) ಸವರ್ಣಧೀರ್ಘ

140) 'ಬಿರುಗಾಳಿ' ಇಲ್ಲಿರುವ ಸಮಾಸ.
ಅ) ಕರ್ಮಧಾರೆಯ ಆ) ಅಂಶಿ
ಇ) ದ್ವಂದ್ವ ಈ) ಬಹುವ್ರೀಹಿ

141) 'ಬರುವನು' ಈ ಪದದ ನಿಷೇದಾರ್ಥ ರೂಪ.
ಅ) ಬಂದೇ ಬರುವನು ಆ) ಬರುವುದಿಲ್ಲ
ಇ) ಬಾರನು ಈ) ಬಂದನು

142) ಹರ್ಷ, ಆಶ್ಚರ್ಯ, ಸಂತೋಷ, ವಿಷಾದ, ದುಃಖ ಭಾವನೆಗಳನ್ನು ಸೂಚಿಸುವಾಗ ಬಳಸುವ ಚಿಹ್ನೆ.
ಅ) ಪ್ರಶ್ನಾರ್ಥಕ ಆ) ಭಾವಸೂಚಕ
ಇ) ಆವರಣ ಈ) ಉದ್ಧರಣ

143) 'ಮೋಹನನು' ಚಿಕ್ಕದಾದ ಕಥೆಯನ್ನು ಓದಿದನು. ಇದರಲ್ಲಿರುವ ಕ್ರಿಯಾಪದ
ಅ) ಮೋಹನನು ಆ) ಕಥೆಯನ್ನು
ಇ) ಚಿಕ್ಕದಾದ ಈ) ಓದಿದನು

144) 'ತಪಸ್ವಿ' ಈ ಪದದ ತದ್ಭವ ರೂಪ.
ಅ) ತವಸಿ ಆ) ತಬಸಿ
ಇ) ತಾಪಸಿ ಈ) ತಪಸ್ವಿನಿ

145) 'ಮನೆಗಳನ್ನು' ಇಲ್ಲಿರುವ ವಿಭಕ್ತಿ ಪ್ರತ್ಯಯ.
ಅ) ಪ್ರಥಮಾ ಆ) ದ್ವಿತೀಯ
ಇ) ತೃತೀಯ ಈ) ಸಪ್ತಮಿ

146) ಈ ಪದಗಳಲ್ಲಿರುವ ಅನ್ಯದೇಶಪದ.
ಅ) ಡಿಪ್ಲಮೊ ಆ) ಶಿಕ್ಷಣ
ಇ) ಕಾರ್ಖಾನೆ ಈ) ರಸ್ತೆಗಳು

147) 'ನಾವು ದೊಡ್ಡ ಹಾವೊಂದನ್ನು ಕಂಡೆವು" ಈ ವಾಕ್ಯದಲ್ಲಿನ ವಿಶೇಷಣ ಪದ.
ಅ) ನಾವು ಆ) ದೊಡ್ಡ
ಇ) ಹಾವೊಂದನ್ನು ಈ) ಕಂಡೆವು

148) ಬೆಟ್ಟದಾವರೆ : ತತ್ಪುರುಷ ಸಮಾಸ : : ಹಿಂದಲೆ
ಅ) ಅಂಶಿ ಆ) ಕರ್ಮಧಾರೆಯ
ಇ) ಕ್ರಿಯಾ ಈ) ಬಹುವ್ರೀಯ

149) ಭಾನುವಾರ : ಆದಿತ್ಯವಾರ : : ಗುರುವಾರ :
ಅ) ರವಿವಾರ ಆ) ಬೃಹಸ್ಪತಿವಾರ
ಇ) ಕುಜವಾರ ಈ) ಇಂದುವಾರ

150) ಸ್ಯಾನಿಟರಿ : ಇಂಗ್ಲೀಷ್ ಪದ : : ಮನ್ವಂತರ :
ಅ) ಸಂಸ್ಕೃತಪದ ಆ) ಗ್ರೀಕ್ ಪದ
ಇ) ಉರ್ದುಪದ ಈ) ಪಾರ್ಸಿಪದ

151) ನದಿ : ರೂಢನಾಮ : : ವ್ಯಾಪಾರಿ :
ಅ) ಅಂಕಿತನಾಮ ಆ) ಸರ್ವನಾಮ
ಇ) ನಾಮಪದ ಈ) ಅನ್ವರ್ಥನಾಮ

152) 'ಗುರು' ಮೂರಿರೆ : ಮಗಣ : : ಮದ್ಯ 'ಲಘು' ಬರೆ :
ಅ) ರಗಣ ಆ) ತಗಣ
ಇ) ಯಗಣ ಈ) ನಗಣ

153) ಗುಣಸಂಧಿಗೆ ಈ ಪದ ಉದಾಹರಣೆ.
ಅ) ರಾಜರ್ಷಿ ಆ) ಸರ್ವಾಧಿಕಾರ
ಇ) ಅತ್ಯಂತ ಈ) ಜ್ಞಾನೇಶ್ವರ

154) 'ಸಾಮಂತ' ಇದರ ತದ್ಭವ ರೂಪ.
ಅ) ಸುಮಂತ ಆ) ಸುಬಂತ
ಇ) ಸಮಾಂತ ಈ) ಸಾವಂತ

155) 'ತಲೆನೋವು' ಈ ಸಮಾಸಕ್ಕೆ ಉದಾಹರಣೆ.
ಅ) ದ್ವಿಗು ಆ) ತತ್ಪುರುಷ
ಇ) ಕರ್ಮಧಾರೆಯ ಈ) ಅಂಶಿ

156) 'ತಿನ್ನುವ' ಈ ಪದ .........ಗೆ ಉದಾಹರಣೆ.
ಅ) ಕೃದಂತನಾಮ ಆ) ಕೃದಂತ ಭಾವನಾಮ
ಇ) ಕೃದಂತಾವ್ಯಯ ಈ) ತದ್ಧಿತಾಂತ ಪ್ರತ್ಯಯ

157) 'ರಾಮಪ್ಪ ತುಂಬಾ ಒಳ್ಳೆಯ ಮನುಷ್ಯ' ಈ ವಾಕ್ಯದಲ್ಲಿರಬೇಕಾದ ಗುಣವಾಚಕ ಪದ.
ಅ) ರಾಮಪ್ಪ ಆ) ತುಂಬಾ
ಇ) ಒಳ್ಳೆಯ ಈ) ಮನುಷ್ಯ

158) 'ಆಕಾಶ' ಈ ಪದದ ಸಮಾನಾರ್ಥಕ ಪದ.
ಅ) ಬಾನು ಆ) ಭಾನು
ಇ) ಭಾಸ್ಕರ ಈ) ಭಾರ್ಗವ

159) 'ಇಸವಾಸ' ಈ ಪದದ ಗ್ರಾಂಥಿಕ ರೂಪ.
ಅ) ಶಾಶ್ವತ ಆ) ಅಶಾಶ್ವತ
ಇ) ವಿಶ್ವಾಸ ಈ) ಇಸುವಾಸ

160) ಇದರಲ್ಲಿರುವ ಅನ್ಯಭಾಷಾ ಪದ.
ಅ) ಬಂಟರು ಆ) ಶಿರ
ಇ) ಸಿಪಾಯಿ ಈ) ಮುಂಗಾರು

161) 'ಗೆಳೆಯನನ್ನು' ಇಲ್ಲಿರುವ ವಿಭಕ್ತಿ ಪ್ರತ್ಯಯ ಪದ.
ಅ) ಪ್ರಥಮಾ ಆ) ಪಂಚಮಿ
ಇ) ತೃತೀಯ ಈ) ದ್ವಿತೀಯ

162) ಶ್ರೀ : ಸಿರಿ : : ಸುಧೆ :
ಅ) ಸುಧಾ ಆ) ಸೌದೆ
ಇ) ಸೊದೆ ಈ) ಸುಧಾಮೆ

ಅಂಗೊಂಡಹಳ್ಳಿ

163) ವಿಜ್ಞಾನಿ : ಅನ್ವರ್ಥನಾಮ : : ನದಿ :
ಅ) ಅಂಕಿತನಾಮ ಆ) ರೂಡನಾಮ
ಇ) ಸರ್ವನಾಮ ಈ) ನಾಮಪದ

164) ಘಟಸಂಭೂತ : ದ್ರೋಣ : : ಗಾಂಡೀವಿ :
ಅ) ದುರ್ಯೋಧನ ಅ) ನಕುಲ
ಇ) ಅರ್ಜುನ ಈ) ಭೀಮ

165) ಕೊನೆಯಲ್ಲಿ 'ಗುರು' ಬರೆ : ಸಗಣ : : ಕೊನೆಯಲ್ಲಿ 'ಲಘು' ಬರೆ.
ಅ) ಭಗಣ ಆ) ಯಗಣ
ಇ) ತಗಣ ಈ) ಜಗಣ

166) 'ಮಹಾತ್ಮ' ಈ ಸಂಧಿಗೆ ಉದಾಹರಣೆ.
ಅ) ಲೋಪ ಆ) ಆಗಮ
ಇ) ಆದೇಶ ಈ) ಸವರ್ಣದೀರ್ಘ

167) ಅವನು ಊಟ ಮಾಡುವನು' (ಭೂತಕಾಲಕ್ಕೆ – ಪರಿವರ್ತಿಸಿದಾಗ)
ಅ) ಅವನು ಊಟ ಮಾಡಿದನು ಆ) ಅವನು ಊಟ ಮಾಡುತ್ತಾನೆ ಇ) ಅವನು ಊಟ ಮಾಡುವುದಿಲ್ಲ
ಈ) ಅವನು ಊಟ ಮಾಡನು

168) 'ವ್ಯಯ' ಇದರ ತದ್ಭವ ರೂಪ.
ಅ) ಮೀಯ ಆ) ವ್ಯತ್ಯಯ
ಇ) ಬೀಯ ಈ) ಬಿತ್ಯಯ

169) 'ಮೂಲೋಕ' ಇದು ಯಾವ ಸಮಾಸ.
ಅ) ದ್ವಿಗು ಆ) ಬಹುವ್ರೀಯ
ಇ) ತತ್ಪುರುಷ ಈ) ಅಂಶಿ

170) 'ಪುರಂದರ ವಿಠಲ' ಇದು
ಅ) ನಾಮಪದ ಆ) ರೂಡನಾಮ
ಇ) ಅಂಕಿತನಾಮ ಈ) ಅನ್ವರ್ಥನಾಮ

171) 'ಅಂಜು' ಧಾತುವಿನ ಕೃದಂತ ಭಾವನಾಮ.
ಅ) ಅಂಜದಿರು ಆ) ಅಂಜಿಕೆ
ಇ) ಅಂಜದೆ ಈ) ಅಂಜಲು

172) 'ಸಾವಿತ್ರಿಯೊಳ್' ಇದರಲ್ಲಿರುವ ವಿಭಕ್ತಿ ಪ್ರತ್ಯಯ.
ಅ) ದ್ವಿತೀಯ ಆ) ಚತುರ್ಥಿ
ಇ) ಷಷ್ಠೀ ಈ) ಸಪ್ತಮಿ

173) 'ನೆತ್ತರು' ಇದರ ಸಮಾನಾರ್ಥಕ ಶಬ್ದ
ಅ) ರಕ್ತ ಆ) ಗಾಯ
ಇ) ಶಿರ ಈ) ನೆತ್ತಿ

174) 'ಲಗುಬಗೆ' ಇದು........ಪದ.
ಅ) ದ್ವಿರುಕ್ತಿ ಆ) ಜೋಡಿಪದ
ಇ) ಅವ್ಯಯ ಈ) ಕೃದಂತನಾಮ

175) 'ಮಳೆಗಾಲ' ಇಲ್ಲಿರುವ ಸಂಧಿ.
ಅ) ಲೋಪ ಆ) ಆಗಮ
ಇ) ಆದೇಶ ಈ) ಗುಣ

176) 'ರಾಮನು ಹಣ್ಣನ್ನು ತಿಂದನು' ಇಲ್ಲಿರುವ ಕ್ರಿಯಾಪದ
ಅ) ರಾಮನು ಆ) ಮಾವಿನ
ಇ) ಹಣ್ಣನ್ನು ಈ) ತಿಂದನು

177) ಒಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಉಪಯೋಗಿಸುವ ಚಿಹ್ನೆ
ಅ) ಭಾವಸೂಚಕ ಆ) ಆವರಣ
ಇ) ಉದ್ಧರಣ ಈ) ಪ್ರಶ್ನಾರ್ಥಕ

178) 'ಫಲಪುಷ್ಪಗಳು'....... ಸಮಾಸ
ಅ) ತತ್ಪುರುಷ ಆ) ದ್ವಿಗು
ಇ) ದ್ವಂದ್ವ ಈ) ಅಂಶಿ

179) 'ವ್ಯಾಪಾರಿ' ಪದದ ತದ್ಭವ ರೂಪ.
ಅ) ಬೇಹಾರಿ ಆ) ಬಹಾರಿ
ಇ) ಬೇಹರೀ ಈ) ಬೇಪಾರಿ

180) ಎಷ್ಟೊಂದು ಜನರು ಅಲ್ಲಿ ನಿಂತಿದ್ದಾರೆ. ಈ ವಾಕ್ಯದ ಪರಿಮಾಣವಾಚಕ ವಿಶೇಷಣ
ಅ) ಎಷ್ಟೊಂದು ಆ) ಜನರು
ಇ) ಇಲ್ಲಿ ಈ) ನಿಂತಿದ್ದಾರೆ

181) ಅನ್ವರ್ಥನಾಮಕ್ಕೆ ಒಂದು ಉದಾಹರಣೆ
ಅ) ಕಾಡು ಆ) ಪೂಜಾರಿ
ಇ) ಗೋಪಾಲ ಈ) ನಾವು

182) 'ನಗು' ಧಾತುವಿನ ಕೃದಂತ ಭಾವನಾಮ
ಅ) ನಗುತ್ತಾನೆ ಆ) ನಗುತ್ತಾರೆ
ಇ) ನಗುವರು ಈ) ನಗುವುದು

183) 'ರಾಣಿ ಯತ್ತಣಿಂ' ಇಲ್ಲಿ ಬರುವ ವಿಭಕ್ತಿ ಪ್ರತ್ಯಯ
ಅ) ಪ್ರಥಮ ಆ) ತೃತೀಯ
ಇ) ಪಂಚಮಿ ಈ) ಸಪ್ತಮಿ

184) ಹೊಸಗನ್ನಡ : ಕರ್ಮಧಾರೆಯ ಸಮಾಸ : : ಬೆಟ್ಟದಾವರೆ :
ಅ) ಕ್ರಿಯಾ ಆ) ಗಮಕ
ಇ) ಅಂಶಿ ಈ) ತತ್ಪುರುಷ

185) ತಿಂದನು : ಸಕರ್ಮಕ : : ಮಲಗು :
ಅ) ವಿಕರ್ಮಕ ಆ) ಸಕರ್ಮಕ
ಇ) ಸತ್‌ಕರ್ಮಕ ಈ) ಅಕರ್ಮಕ

186) ರಾಜಂಗೆ : ಚತುರ್ಥಿ ವಿಭಕ್ತಿ : : ರಾಜನೊಳ್ :
ಅ) ಪ್ರಥಮಾ ಆ) ತೃತೀಯ
ಇ) ಸಪ್ತಮಿ ಈ) ಷಷ್ಠೀ

187) ಮಾಡಲಿ : ವಿಧ್ಯರ್ಥಕ : : ಮಾಡನು :
ಅ) ಸಂಬವನಾರ್ಥಕ ಆ) ನಿಷೇಧಾರ್ಥಕ
ಇ) ಅಕರ್ಮಕ ಈ) ಸಕರ್ಮಕ

188) 'ಏಕೈಕ' ಇಲ್ಲಿರುವ ಸಂಧಿ
ಅ) ವೃದ್ಧಿಸಂಧಿ ಆ) ಯಣ್‌ಸಂಧಿ
ಇ) ಗುಣಸಂಧಿ ಈ) ಆದೇಶಸಂಧಿ

189) 'ಕೊನೆಕೊನೆಗೆ' ಈ ಪದದಲ್ಲಿರುವ ವ್ಯಾಕರಣಾಂಶ
ಅ) ಜೋಡುನುಡಿ ಆ) ದ್ವಿರುಕ್ತಿ
ಇ) ಅನುಕರಣಾವ್ಯಯ ಈ) ಕೃದಂತಾವ್ಯಯ

190) ರಾಣಿಯು ಬಹಳ ಸೊಗಸಾಗಿ ಹಾಡಿದಳು. ಈ ಪದದಲ್ಲಿರುವ ಕ್ರಿಯಾಪದ
ಅ) ರಾಣಿಯು ಆ) ಬಹಳ
ಇ) ಸೊಗಸಾಗಿ ಈ) ಹಾಡಿದಳು

ಆನಂದ ಗುರು ಅಂಗೊಂಡಹಳ್ಳಿ

191) 'ಮನೆಯಲ್ಲಿ' ಇಲ್ಲಿರುವ ವಿಭಕ್ತಿ ಪ್ರತ್ಯಯ

ಅ) ಪ್ರಥಮ ಆ) ಪಂಚಮೀ

ಇ) ಷಷ್ಠೀ ಈ) ಸಪ್ತಮೀ

192) 'ಮುಂಗಾರು' ಇಲ್ಲಿರುವ ಸಮಾಸ

ಅ) ಅಂಶಿ ಆ) ದ್ವಂದ್ವ

ಇ) ದ್ವಿಗು ಈ) ತತ್ಪುರುಷ

193) ಈ ಕನ್ನಡ ಪುಸ್ತಕದ ಬೆಲೆ ಐವತ್ತು ರೂಪಾಯಿಗಳು ಇಲ್ಲಿರುವ ಸಂಖ್ಯಾವಾಚಕ

ಅ) ಕನ್ನಡ ಆ) ಪುಸ್ತಕ

ಇ) ಬೆಲೆ ಈ) ಐವತ್ತು

194) 'ಓಟ' ಈ ಪದದ ದಾತು

ಅ) ಓಡು ಆ) ಓಡಾಟ

ಇ) ಒಡನಾಟ ಈ) ಓಡುತ್ತಾ

195) ಕೊಡು, ಬಿಡು, ನೋಡು, ಓಡು ಇದರಲ್ಲಿನ ಅಕರ್ಮಕ ಕ್ರಿಯಾಪದ

ಅ) ಕೊಡು ಆ) ಬಿಡು

ಇ) ನೋಡು ಈ) ಓಡು

196) ಬಸ್ಸು : ಇಂಗ್ಲೀಷ್ ಪದ : : ರಸೀದಿ :

ಅ) ಪೋರ್ಚುಗೀಸ್ ಆ) ಸಂಸ್ಕೃತ

ಇ) ಉರ್ದು ಈ) ಪಾರ್ಸಿ

197) ವ್ಯಾಪಾರಿ : ಅನ್ವರ್ಥನಾಮ : : ಮನುಷ್ಯ :

ಅ) ಸರ್ವನಾಮ ಆ) ಅಂಕಿತನಾಮ

ಇ) ರೂಡನಾಮ ಈ) ದೊಡ್ಡನಾಮ

198) ಕನ್ನಡಿಗ : ತದ್ಧಿತಾಂತನಾಮ : : ಜಾಣತನ :

ಅ) ಕೃದಂತನಾಮ ಆ) ತದ್ಧಿತಾಂತ ಭಾವನಾಮ

ಇ) ತದ್ಧಿತಾಂತ ಪ್ರತ್ಯಯ ಈ) ಕೃದಂತಾವ್ಯಯ

199) ಇದು ಜೋಡಿ ಪದಕ್ಕೆ ಉದಾಹರಣೆ.

ಅ) ತಿಂಡಿತಿನಿಸು ಆ) ಬೇಗಬೇಗ

ಇ) ಪಟಪಟ ಈ) ಹಗಲುಇರುಳು

200) ಇವುಗಳಲ್ಲಿ ಗುಂಪಿಗೆ ಸೇರದ ಪದ

ಅ) ಕಡಲು ಆ) ಸಮುದ್ರ

ಇ) ಅಂಬುಧಿ ಈ) ನಯನ

201) 'ಅತ್ಯುತ್ತಮ' ಈ ಪದದಲ್ಲಿರುವ ಸಂಧಿ

ಅ) ವೃದ್ಧಿಸಂಧಿ ಆ) ಯಣ್‌ಸಂಧಿ

ಇ) ಜಶ್ತ್ವಸಂಧಿ ಈ) ಶ್ಚುತ್ವಸಂಧಿ

202) 'ಹುಡುಗರು' ಪದದಲ್ಲಿರುವ ವಿಭಕ್ತಿ ಪ್ರತ್ಯಯ

ಅ) ಪ್ರಥಮ ಆ) ದ್ವಿತೀಯ

ಇ) ತೃತೀಯ ಈ) ಚತುರ್ಥಿ

203) ರವಿಯು ಪಾಠವನ್ನು ಓದುತ್ತಾನೆ. ಈ ವಾಕ್ಯವನ್ನು ವರ್ತಮಾನಕಾಲಕ್ಕೆ ಪರಿವರ್ತಿಸಿದಾಗ

ಅ) ಓದಿದನು ಆ) ಓದಬಹುದು

ಇ) ಓದುತ್ತಿದ್ದಾನೆ ಈ) ಓದುವ

204) 'ಸಪ್ತಸ್ವರಗಳು' ಇರುವ ಸಮಾಸ

ಅ) ಅಂಶಿ ಆ) ತತ್ಪುರುಷ

ಇ) ದ್ವಂದ್ವ ಈ) ದ್ವಿಗು

205) 'ಬಂದನು' ಇದರ ನಿಷೇದಾರ್ಥಕ ರೂಪ

ಅ) ಬರುವನು ಆ) ಬಾರನು

ಇ) ಬರುತ್ತಾನೆ ಈ) ಬಂದೇ ಬರುವನು

206) 'ಅವನು ಅಷ್ಟೊಂದು ಕೆಟ್ಟ ಮನುಷ್ಯನೇ ? ಈ ವಾಕ್ಯದಲ್ಲಿರುವ ಗುಣ ವಿಶೇಷಣ

ಅ) ಅವನು ಆ) ಅಷ್ಟೊಂದು

ಇ) ಕೆಟ್ಟ ಈ) ಮನುಷ್ಯನೇ

207) 'ಮಾಡಿದ' ಈ ಪದ .......ಆಗಿದೆ

ಅ) ಕೃದಂತನಾಮ ಆ) ಕೃದಂತ ಭಾವನಾಮ

ಇ) ಕೃದಂತಾವ್ಯಯ ಈ) ನಿಷೇಧಕೃದಂತ

208) ಬಳೆಗಾರ : ತದ್ಧಿತಾಂತ ನಾಮ : : ಜಾಣತನ :

ಅ) ಕೃದಂತನಾಮ ಆ) ತದ್ಧಿತಾಂತ ಭಾವನಾಮ

ಇ) ಕೃದಂತಾವ್ಯಯ ಈ) ಪ್ರತ್ಯಯ

209) ದನ : ಹಸು : : ಧನ :

ಅ) ಗೋವು ಆ) ಹಣ

ಇ) ದಾನ ಈ) ಆಭರಣ

210) ಪವನ, ಗಾಳಿ, ದಾರ, ವಾಯು ಈ ಪದಗಳಲ್ಲಿ ಗುಂಪಿಗೆ ಸೇರದ ಪದ

ಅ) ದಾರ ಆ) ಗಾಳಿ

ಇ) ಪವನ ಈ) ವಾಯು

211) ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಮುಗಿದಾಗಲೆಲ್ಲಾ ಈ ಚಿಹ್ನೆಯನ್ನು ಬಳಸುವರು.

ಎ) ಪೂರ್ಣವಿರಾಮ ಬಿ) ಅಲ್ಪವಿರಾಮ

ಸಿ) ಆವರಣ ಡಿ) ಅರ್ಧವಿರಾಮ

212) ಕನ್ನಡ ವರ್ಣಮಾಲೆಯ ಅವರ್ಗೀಯ ವ್ಯಂಜನಗಳ ಗುಂಪಿಗೆ ಸೇರುವ ಅಕ್ಷರಗಳಿವು

ಎ) ಙ್ಞ್ಣ್ನ್ಮ್ ಬಿ) ಠ್ಢ್ಖ್ಭ್

ಸಿ) ಶ್ ಸ್ ರ್ ಲ್ ಡಿ) ಗ್ ಜ್ ಡ್ ದ್

213) 'ಮೆಲ್ವಾತು' ಈ ಪದದಲ್ಲಿ ಏರ್ಪಟ್ಟ ಸಮಾಸವಿದು

ಎ) ಅಂಶಿ ಬಿ) ಕರ್ಮಧಾರಯ

ಸಿ) ಕ್ರಿಯಾ ಡಿ) ಗಮಕ

214) ಅಂಕಿತನಾಮಕ್ಕೆ ಉದಾಹರನೆ

ಎ) ಪರ್ವತ ಬಿ) ರಾಹುಲ

ಸಿ) ವಿಜ್ಞಾನಿ ಡಿ) ಆಟ

215) ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ

ಎ) ಸಾಮಾನ್ಯ ಬಿ) ಪ್ರಶ್ನಾರ್ಥಕ

ಸಿ) ಸಂಯೋಜಿತ ಡಿ) ಮಿಶ್ರ

216) 'ಕಾರ್ಖಾನೆ' ಪದವು ಈ ಭಾಷೆಯಿಂದ ಬಂದಿದೆ.

ಎ) ಹಿಂದೂಸ್ಥಾನಿ ಬಿ) ಉರ್ದು

ಸಿ) ಇಂಗ್ಲಿಷ್ ಡಿ) ಫಾರ್ಸಿ

217) 'ಹೌದು' ಎಂಬುದು ಈ ಅವ್ಯಯಗಳಿಗೆ ಸೇರಿದೆ.

ಎ) ಭಾವಸೂಚಕ ಬಿ) ಸಾಮಾನ್ಯ

ಸಿ) ಸಂಬಂಧಾರ್ಥಕ ಡಿ) ಕ್ರಿಯಾರ್ಥಕ

218) 'ಮನದೊಳಗೆ' ಇಲ್ಲಿರುವ ವಿಭಕ್ತಿ

ಎ) ಚತುರ್ಥಿ ಬಿ) ಪಂಚಮಿ

ಸಿ) ದ್ವಿತೀಯ ಡಿ) ಸಪ್ತಮಿ

219) ಕರ್ಮಣಿ ರೂಪದಲ್ಲಿರುವ ಕ್ರಿಯಾಪದ ಇದು

ಎ) ಓದುತ್ತಾರೆ ಬಿ) ಓದಲ್ಪಟ್ಟಿತು

ಸಿ) ಓದಿದರು ಡಿ) ಓದಿಯಾರು

220) 'ಜಗಜ್ಯೋತಿ' ಪದದಲ್ಲಿ ಏರ್ಪಟ್ಟಿರುವ ಸಂಧಿ

ಎ) ಗುಣ ಬಿ) ವೃದ್ಧಿ

ಸಿ) ಜಸ್ತ್ವ ಡಿ) ಶ್ಚುತ್ತ್ವ

221) ಕೃದಂತ ಭಾವನಾಮಕ್ಕೆ ಉದಾಹರಣೆ

ಎ) ಓಟ ಬಿ) ಮಾಡಿದ

ಸಿ) ನಡೆಯುತ್ತ ಡಿ) ಬಾಳದ

222) ಕರ್ಮಧಾರಯ ಸಮಾಸದ ಪದವಿದು

ಎ) ಮೋಸಮಾಡು ಬಿ) ನಡುರಾತ್ರಿ

ಸಿ) ಸೂರ್ಯಚಂದ್ರರು ಡಿ) ಪೆರ್ಮರ

223) 'ಕಾಲೇಜು' ಪದವು ಈ ಭಾಷೆಯಿಂದ ಬಂದಿದೆ.

ಎ) ಹಿಂದೂಸ್ಥಾನಿ ಬಿ) ಪಾರ್ಸಿ

ಸಿ) ಇಂಗ್ಲಿಷ್ ಡಿ) ಉರ್ದು

224) ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು

ಎ) ಸಾಮಾನ್ಯವಾಕ್ಯ ಬಿ)ಪ್ರಶ್ನಾರ್ಥಕವಾಕ್ಯ

ಸಿ) ಸಂಯೋಜಿತವಾಕ್ಯ ಡಿ) ಮಿಶ್ರವಾಕ್ಯ

225) ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲಿನಲ್ಲಿ ಮತ್ತೆ ಮತ್ತೆ ಬಂದರೆ ಅದನ್ನು ಶಬ್ದಾಲಂಕಾರದಲ್ಲಿ ಹೀಗೆನ್ನುವರು.

ಎ) ಛೇಕಾನುಪ್ರಾಸ ಬಿ) ಯಮಕ

ಸಿ) ಚಿತ್ರಕವಿತ್ವ ಡಿ) ವೃತ್ತ್ಯನುಪ್ರಾಸ

226) 'ಉನ್ಮಾದ' ಪದದಲ್ಲಿ ಏರ್ಪಟ್ಟಿರುವ ಸಂಧಿ

ಎ) ಗುಣ ಬಿ) ವೃದ್ಧಿ

ಸಿ) ಜಶ್ತ್ವ ಡಿ) ಅನುನಾಸಿಕ

227) ದ್ವಂದ್ವ ಸಮಾಸವಿದು

ಎ) ಮೋಸಮಾಡು ಬಿ) ನಡುರಾತ್ರಿ

ಸಿ) ಸೂರ್ಯಚಂದ್ರರು ಡಿ) ಪೆರ್ಮರ

228) ಕಾವ್ಯವನ್ನು ವಾಚಿಸುವಾಗ ಅರ್ಥಕ್ಕೆ ಲೋಪ ಬರದಂತೆ ಉಸಿರನ್ನು ತೆಗೆದುಕೊಳ್ಳಲು ನಿಲ್ಲುವ ಜಾಗಕ್ಕೆ ಹೀಗೆನ್ನುವರು.

1) ಯತಿ 2) ಪ್ರಾಸ

ಸಿ) ಗಣ ಡಿ) ಮಾತ್ರೆ

ಆನಂದ್ ಗುರು ಅಂಗೊಂಡಹಳ್ಳಿ

# ಮಾದರಿ ಪ್ರಶ್ನೆಪತ್ರಿಕೆ

**ಸೂಚನೆಗಳು :** ಪ್ರಶ್ನೆ ಪತ್ರಿಕೆಯು ಎ, ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.
ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ.
ಉತ್ತರಗಳು ನೇರವೂ ಸಂಕುಚಿತವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.

## ಭಾಗ – 'ಎ'

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. **9*1=9**

1. ರಾಹಿಲನು ತುರ್ತುಪರಿಸ್ಥಿತಿಯ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?
2. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
3. ಇಂದಲ್ಲ–ನಾಳೆ ಫಲಕೊಡುವ ಅಂಶಗಳಾವುವು?
4. ಹುಲಿಗೆ ಪರಮಾನಂದವಾಗಲು ಕಾರಣ ಏನು?
5. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?
6. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?
7. ದಿನಪಸುತ ಎಂದರೆ ಯಾರು?
8. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?
9. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?

ಈ ಕೆಳಗಿನವುಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ **10*2=20**

10. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?
11. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?
12. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
13. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?
14. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?
15. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ತಿಳಿಸಿ.
16. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?
17. ಭಗತ್‌ಸಿಂಗ್ ತನ್ನ ಸಹೋದರಿಗೆ 'ತ್ಯಾಗದ ಪ್ರತೀಕ ಆ ಮಣ್ಣು' ಎಂದು ತೋರಿಸಿದ ಸಂದರ್ಭವನ್ನು ವಿವರಿಸಿ.
18. ಮೃಗದ ಬಗೆಗೆ ಸುಂದರಿಯ ಮನ ಕರಗುತ್ತಿತ್ತು ಏಕೆ?
19. ಒಗಟುಗಳಿಂದ ಶೈಕ್ಷಣಿಕವಾಗಿ ಆಗುವ ಲಾಭ ಏನು?

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. **4*3=12**

20. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ."
21. "ರಿಸಿಯರ ರೂಪಂ ಕಾಣ್ಬುಮಂದೀತನುಂ ತಪಂಬಡುಗುಂ"
22. "ಹಸುರಾದುದು ಕವಿಯಾತ್ಮಂ"
23. "ಈಗಳೊಂದಡಕೆಯುಮಿಲ್ಲ ಕೈಯೊಳ್"

ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. **2*3=6**

24. ಪು. ತಿ. ನರಸಿಂಹಾಚಾರ್ಯ
25. ರನ್ನ

ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ **1*4=4**

26. ಕಲುಷಿತವಾದೀ ____________      ಅಥವಾ      ಮತಗಳೆಲ್ಲವೂ ____________

____________      ____________

____________      ____________

____________ ಮುಟ್ಟೋಣ      ____________ ಬಿತ್ತೋಣ

ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. **1*4=4**

27. ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳ ಲೋಕದ ಅಂಗಳಕೇರಿ
ಹಕ್ಕಿ ಹಾರುತಿದೆ ನೋಡಿದಿರಾ?

ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **2*4=8**

28. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

ಅಥವಾ

ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ವಿವರಿಸಿ.

29. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು ?    ಅಥವಾ    ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)

**30.** ಸಿ.ವಿ.ರಾಮನ್ ಶಿಷ್ಯರನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು, ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರನ್ನು ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ತಮ್ಮ ನಡುವೆ ಮೇಲು ಕೀಳೆಂಬ ತಾರತಮ್ಯವಿರಕೂಡದು, ವಿಜ್ಞಾನದ ಅನ್ವೇಷಣಾಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು, ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಬೆಳಿಗ್ಗೆ ಪ್ರಯೋಗಾಲಯಕ್ಕೆ ಬಂದಕೂಡಲೆ ಒಂದು ಸುತ್ತು ಹೊರಟು ಎಲ್ಲ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯರೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದನೆಂದರೆ, ಬೆನ್ನುತಟ್ಟಿ, ಅವನನ್ನು ಎಲ್ಲರ ಎದುರಿಗೂ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

ಪ್ರಶ್ನೆಗಳು :

1. ಶಿಷ್ಯರನ್ನು ಕುರಿತು ರಾಮನ್ ಅವರ ಮನೋಭಾವನೆ ಏನಾಗಿತ್ತು?
2. ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ.

## ಭಾಗ – 'ಬಿ'

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ.
ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. 10*1=10

**31.** 'ಶ್ಚುತ್ವ ಸಂಧಿಗೆ' ಉದಾಹರಣೆಯಾದ ಪದ :
(ಎ) ಅಷ್ಟೈಶ್ವರ್ಯ (ಬಿ) ಬೃಹಚ್ಛತ್ರ (ಸಿ) ಜ್ಞಾನೇಶ್ವರ (ಡಿ) ಕೋಟ್ಯಧೀಶ್ವರ

**32.** ತಾವು ಕಡಿಮೆ ಮಾತನಾಡಿದ್ದೀರಿ ಹೆಚ್ಚು ಕೆಲಸ ಮಾಡಿದ್ದೀರಿ ಈ ವಾಕ್ಯದಲ್ಲಿ ಇರಬೇಕಾದ ಲೇಖನ ಚಿಹ್ನೆ :
(ಎ) ಅಲ್ಪವಿರಾಮ (ಬಿ) ಆವರಣ (ಸಿ) ಅರ್ಧವಿರಾಮ (ಡಿ) ಪ್ರಶ್ನಾರ್ಥಕ

**33.** "ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುತ್ತದೆ" ಈ ವಾಕ್ಯದಲ್ಲಿರುವ ಕಾಲಪ್ರತ್ಯಯ :
(ಎ) ಗಳ (ಬಿ) ಅಲ್ಲಿ (ಸಿ) ಉತ್ತ (ಡಿ) ಅದೆ

**34.** 'ನೆಯ್ದುವಸ್ತ್ರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :
(ಎ) ದ್ವಂದ್ವ (ಬಿ) ಕ್ರಿಯಾ (ಸಿ) ತತ್ಪುರುಷ (ಡಿ) ಗಮಕ

**35.** 'ಲಿಖಿತಮಂ' ಪದವು ಈ ವಿಭಕ್ತಿಯಲ್ಲಿದೆ.
(ಎ) ಪ್ರಥಮಾ (ಬಿ) ದ್ವಿತೀಯಾ (ಸಿ) ತೃತೀಯಾ (ಡಿ) ಚತುರ್ಥಿ

**36.** 'ಅನ್ವರ್ಥನಾಮ' ಪದಕ್ಕೆ ಉದಾಹರಣೆಯಿದು :
(ಎ) ವ್ಯಾಪಾರಿ (ಬಿ) ಮನಂಂಷಂಚಿ (ಸಿ) ಆಗ್ನೇಯ (ಡಿ) ಕಮಲಾಕ್ಷ

**37.** 'ಅನಾನಸು' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ :
(ಎ) ಪೋರ್ಚುಗೀಸ್ (ಬಿ) ಉರ್ದು (ಸಿ) ಫಾರ್ಸಿ (ಡಿ) ರೋಮನ್

**38.** "ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ" ಅಂತಹ ವಾಕ್ಯವು :
(ಎ) ನಿಷೇಧಿತ ವಾಕ್ಯ (ಬಿ) ಮಿಶ್ರ ವಾಕ್ಯ (ಸಿ) ಸಂಯೋಜಿತ ವಾಕ್ಯ (ಡಿ) ಸಾಮಾನ್ಯ ವಾಕ್ಯ

**39.** ತದ್ಧಿತಾಂತ ಅವ್ಯಯಕ್ಕೆ ಉದಾಹರಣೆಯಾದ ಪದ ಇದು :
(ಎ) ಜಾಣತನ (ಬಿ) ಕನ್ನಡತಿ (ಸಿ) ಚಂದ್ರನಂತೆ (ಡಿ) ಉಡುಗೆ

**40.** ಕೊಟ್ಟಿರುವ ಧಾತುಗಳಲ್ಲಿ ಅಕರ್ಮಕಧಾತು ಪದವಿದು :
(ಎ) ಕೊಡು (ಬಿ) ಬಿಡು (ಸಿ) ಓಡು (ಡಿ) ನೋಡು

ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4*1=4

**41.** ವಿದ್ಯಾಧರ : ಬಿಜ್ಜೋದರ : : ವೈಶಾಖ : ____________

**42.** ಹಾಲ್ಜೇನು : ಜೋಡುನುಡಿ : : ನಟ್ಟನಡುವೆ : ____________

**43.** ಸ್ಥೈರ್ಯ : ದೃಢತೆ : : ಮುಕ್ತಕಂಠ : ____________

**44.** ಆದ್ದರಿಂದ : ಸಂಬಂಧಾರ್ಥಕ ಅವ್ಯಯ : : ಚುರುಚುರು : ____________

**45.** ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1*3=3

ಕಾದದಿರೆನಜ್ಜ ಪಾಂಡವ ।
ರಾದರ್ ಮೇಣೆಂದಿನೊಂದೆ ಸಮರದೊಳಾಂ ಮೇಣ್ ॥

ಅಥವಾ

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ

**46.** ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. 1*3=3

"ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ"

ಅಥವಾ

"ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು"



ಆನಂದ್ ಗುರು ಅಂಗೊಂಡಹಳ್ಳಿ

ಭಾಗ – 'ಸಿ'

47. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1*3=3

* ದೇಶ ನೋಡು ಕೋಶ ಓದು
* ಮಾಡಿದ್ದುಣ್ಣೋ ಮಹಾರಾಯ
* ತಾಳಿದವನು ಬಾಳಿಯಾನು

48. ನಿಮ್ಮನ್ನು ವಿಜಯಪುರದ ಮುರಾರ್ಜಿ ವಸತಿ ಶಾಲೆಯ 'ಸಮರ್ಥ' ಎಂದು ಭಾವಿಸಿಕೊಂಡು, ಅಂತರಶಾಲಾ ವಿಜ್ಞಾನ ವಸ್ತುಪ್ರದರ್ಶನ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ನಿಮ್ಮೂರಿನ ವಿಜಯ ಕರ್ನಾಟಕ ದಿನಪತ್ರಿಕೆಯ ಸಂಪಾದಕರಿಗೆ ಮನವಿಪತ್ರ ಬರೆಯಿರಿ. 1*5=5

ಅಥವಾ

ನಿಮ್ಮನ್ನು ಬನಶಂಕರಿಯ ಸರ್ಕಾರಿ ಪ್ರೌಢಶಾಲೆಯ 'ಹರ್ಷಿತ' ಎಂದು ಭಾವಿಸಿಕೊಂಡು, ಮಂಗಳೂರಿನಲ್ಲಿ ವಾಸವಾಗಿರುವ ತಾಯಿಯವರಿಗೆ ವಿದ್ಯಾಭ್ಯಾಸದ ಪ್ರಗತಿಯನ್ನು ವಿವರಿಸಿ ಪತ್ರ ಬರೆಯಿರಿ.

49. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1*5=5

* ಜ್ಞಾನಾಭಿವೃದ್ಧಿಯಲ್ಲಿ ವೃತ್ತಪತ್ರಿಕೆಗಳ ಪಾತ್ರ
* ಶಾಲೆಯಲ್ಲಿ ಸಹಪಠ್ಯ ಚಟುವಟಿಕೆಗಳ ಮಹತ್ವ
* ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

ಕೃಪೆ : ರವೀಶ್‌ಕುಮಾರ್ ಸರ್. ಕೇರ್ಗಳ್ಳಿ ಮೈಸೂರು
ಮಹೇಶ್ ಎಸ್. ಕನ್ನಡ ದೀವಿಗೆ

# ಶುಭವಾಗಲಿ

# @@ಧನ್ಯವಾದಗಳು@@

ಆನಂದ್ ಗುರು ಅಂಗೊಂಡಹಳ್ಳಿ